ಶನಿವಾರ, ಜುಲೈ 19, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 199 | ಪುಟ 20

prajavani.net prajavani www.prajavani.net



ಕ್ವಾರ್ಟರ್‌ಗೆ ದಿವ್ಯಾ

ಭಾರತದ ದಿವ್ಯಾ ದೇಶಮುಖ್ ಅವರು ಜಾರ್ಜಿಯಾದಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮೊದಲ ಕ್ಯಾಂಪಸ್

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜಿಸ್‌ನ ಮೊದಲ ಕ್ಯಾಂಪಸ್ ಮುಂಬೈನಲ್ಲಿ ಆರಂಭ ಆಯಿತು

ಸೆನ್ಸೆಕ್ಸ್ 81,757 | ನಿಫ್ಟಿ 24,968 | $/₹ 86.16 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.18 ಲಕ್ಷ (ಬೆಂಗಳೂರು)



ಪ್ರತಿ ಕ್ಷೇತ್ರಕ್ಕೆ ₹50 ಕೋಟಿ ನಿಧಿ

ಶಾಸಕರ ಮುನಿಸು ತಣಿಸಲು ಮುಂದಾದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳಿಂದಾಗಿ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ ಎಂಬ ಸ್ವಪಕ್ಷೀಯ ಶಾಸಕರ ಆರೋಪ, ಸರ್ಕಾರದ ಬಗೆಗಿನ ಮುನಿಸು ಶಮನದತ್ತ ಹೆಜ್ಜೆ ಇಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪಕ್ಷ ಭೇದವಿಲ್ಲದೇ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ₹50 ಕೋಟಿ ವಿಶೇಷ ಅನುದಾನ ನೀಡಲು ಮುಂದಾಗಿದ್ದಾರೆ.

ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿ 2025-26ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ₹50 ಕೋಟಿ ನೀಡುವುದಾಗಿ ಬಜೆಟ್‌ನಲ್ಲೇ ಘೋಷಣೆ ಮಾಡಿದ್ದರು. ನಾಲ್ಕು ತಿಂಗಳಲ್ಲಿ ಅನುದಾನವನ್ನು ಹಂಚಿಕೆ ಮಾಡಲು ಕ್ರಮ ಕೈಗೊಂಡಿದ್ದಾರೆ.

ಈ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಲೋಕೋಪಯೋಗಿ ಇಲಾಖೆಯ ರಸ್ತೆ, ಸೇತುವೆ ಕಾಮಗಾರಿಗಳು, ಗ್ರಾಮೀಣ ರಸ್ತೆ, ಸೇತುವೆ ಹಾಗೂ ನಗರ ಪ್ರದೇಶದ ಕೆಲವು ಕಾಮಗಾರಿಗಳಿಗೆ ಶೇ 75ರಷ್ಟು ಅನುದಾನ ಬಳಸಬೇಕು. ಶಾಸಕರು ತಮ್ಮ ವಿವೇಚನಾ ಕೋಟಾದಲ್ಲಿ ಶೇ 25ರಷ್ಟು ಬಳಕೆ ಮಾಡಬಹುದು ಎಂಬ ಷರತ್ತು ವಿಧಿಸಲಾಗಿದೆ.

▶10

30, 31ರಂದು ಶಾಸಕರ ಸಭೆ

ಅನುದಾನ ಹಂಚಿಕೆಯ ಬಗ್ಗೆ ಚರ್ಚಿಸಲು ಜಿಲ್ಲಾವಾರು ಶಾಸಕರ ಸಭೆಯನ್ನು ಜುಲೈ 30 ಮತ್ತು 31ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದಾರೆ. ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಆರ್ಥಿಕ ಇಲಾಖೆ ಹೊರಡಿಸಿರುವ ಮಾರ್ಗಸೂಚಿ ಅನ್ವಯ ಕಾಮಗಾರಿಗಳ ವಿವರ ಒಳಗೊಂಡ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿಕೊಂಡು ಬರುವಂತೆ ಎಲ್ಲ ಶಾಸಕರಿಗೂ ಸೂಚಿಸಿದ್ದಾರೆ.

ಸಚಿವ ಶರಣಪ್ರಕಾಶ ವಿರುದ್ಧ 'ಕೈ' ಶಾಸಕರ ಆಕ್ರೋಶ

ರಾಯಚೂರು: ವೈದ್ಯಕೀಯ ಶಿಕ್ಷಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ವಿರುದ್ಧ ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ಕಾಂಗ್ರೆಸ್ ಶಾಸಕರೇ ಹರಿಹಾಯ್ದರು.

'ಜಿಲ್ಲೆಗೆ ಇಬ್ಬರು ಸಚಿವರಿದ್ದರೂ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ಅಧಿಕಾರಿಗಳು ಸಭೆಗೆ ಕರೆಯದೇ ಶಾಸಕರನ್ನು ಅವಮಾನಿಸುತ್ತಿದ್ದಾರೆ. ಅಕ್ರಮ ವ್ಯವಹಾರಗಳು ಎಗ್ಗಿಲ್ಲದೇ ನಡೆದಿವೆ. ಪೊಲೀಸ್ ಗೂಂಡಾಗಿರಿ ಹೆಚ್ಚಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜಿಲ್ಲಾ ಉಸ್ತುವಾರಿ ಸಚಿವರು ಶಿಷ್ಟಾಚಾರಕ್ಕಾಗಿ ಸಭೆ ನಡೆಸಿ ಹೋಗುವುದರಿಂದ ಅಭಿವೃದ್ಧಿ ಕಾರ್ಯಗಳು ನಡೆಯುವುದಿಲ್ಲ' ಎಂದು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರುವಿಹಾಳ ಅವರು ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

▶10



ಜೆಡಿಎಸ್ ಶಾಸಕಿ ಧರಣಿ

ರಾಯಚೂರು: 'ದೇವದುರ್ಗ ಕ್ಷೇತ್ರದ ಸಮಸ್ಯೆಗಳ ಬಗ್ಗೆ ವಿಧಾನಸಭೆಯಲ್ಲಿ ಗಮನಸೆಳೆದರೂ ಪರಿಹಾರ ದೊರಕಿಲ್ಲ. ಪರಿಹಾರ ಸಿಗುವವರೆಗೂ ನಾನು ಆಸನದ ಮೇಲೆ ಕುಳಿತುಕೊಳ್ಳುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿ, ಜೆಡಿಎಸ್ ಶಾಸಕಿ ಕರೆಮ್ಮ ನಾಯಕ ಇಲ್ಲಿ ನೆಲದ ಮೇಲೆ ಕುಳಿತು ಧರಣಿ ನಡೆಸಿದರು.

▶10

₹50 ಕೋಟಿ ಅನುದಾನ ಬಿಡುಗಡೆ ಪ್ರಕ್ರಿಯೆ ಈಗಷ್ಟೇ ಆರಂಭವಾಗಿದೆ. ಬಿಜೆಪಿ ಮತ್ತು ಜೆಡಿಎಸ್‌ನವರು ತಾಳ್ಮೆಯಿಂದ ಇರಬೇಕು

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಅಂಕಿ ಅಂಶಗಳು

₹37.50 ಕೋಟಿ ಲೋಕೋಪಯೋಗಿ, ಗ್ರಾಮೀಣ ರಸ್ತೆ-ಸೇತುವೆ	₹12.50 ಕೋಟಿ ಶಾಸಕರ ವಿವೇಚನಾ ಕೋಟಾ
₹9.99 ಕೋಟಿ ಜಿಲ್ಲಾಧಿಕಾರಿ ಅನುಮೋದನೆ	₹10.01 ಕೋಟಿ ಸಂಪುಟ ಸಭೆಯ ಅನುಮೋದನೆ

ಸಾಧನೆ, 'ಶಕ್ತಿ ಪ್ರದರ್ಶನ'ಕ್ಕೆ ಸಜ್ಜು

ಮೈಸೂರು: ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಇಂದು


• ಎಂ. ಮಹೇಶ್

ಮೈಸೂರು: ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ (ಜುಲೈ 19) ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶಕ್ಕೆ ವೇದಿಕೆ ಸಜ್ಜಾಗಿದೆ. 'ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನದ ವೇದಿಕೆ' ಎಂದೇ ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ.

'ನಾನೇ ಐದೂ ವರ್ಷ ಮುಖ್ಯಮಂತ್ರಿ ಆಗಿರುತ್ತೇನೆ, ನಾಯಕತ್ವ ಬದಲಾವಣೆ ಇಲ್ಲ, ಡಿ.ಕೆ.ಶಿವಕುಮಾರ್ ಅವರಿಗೆ ಹೆಚ್ಚಿನ ಶಾಸಕರ ಬೆಂಬಲವಿಲ್ಲ' ಎಂದು ಸಿದ್ದರಾಮಯ್ಯ ಅವರು ಹೇಳಿಕೆ ನೀಡಿದ ನಂತರ ನಡೆಯುತ್ತಿರುವ ಪಕ್ಷದ ಬೃಹತ್ ಸಮಾವೇಶ ಇದಾಗಿದೆ.

'ತವರು ಜಿಲ್ಲೆ ಮೈಸೂರಿನಲ್ಲಿ ನಿಂತು ಬೆಂಬಲಿಗರು, ಅಭಿಮಾನಿಗಳು ಹಾಗೂ ಕಾರ್ಯಕರ್ತರೊಂದಿಗೆ 'ಶಕ್ತಿ ಪ್ರದರ್ಶನ' ಮಾಡುವ ಮೂಲಕ ವಿರೋಧಿಗಳು ಹಾಗೂ ಹೈಕಮಾಂಡ್‌ಗೆ ಸಂದೇಶ ರವಾನಿಸಲು ಸಿದ್ದರಾಮಯ್ಯ ಯೋಜಿಸಿರುವ ಭಾಗವೇ ಈ ಸಮಾವೇಶ' ಎಂದೇ ಇದನ್ನು ವಿಶ್ಲೇಷಿಸಲಾಗುತ್ತಿದೆ. ಈ ಕಾರಣದಿಂದಲೇ ಸಮಾವೇಶವು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ. ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದ ಕುರಿತಾಗಿಯೇ ಚರ್ಚೆ ನಡೆಯುತ್ತಿದೆ.

▶7



ಮೈಸೂರಿನ ಮಹಾರಾಜ ಮೈದಾನದ ಆವರಣದಲ್ಲಿ ಶನಿವಾರ ನಡೆಯಲಿರುವ 'ಸಾಧನಾ ಸಮಾವೇಶ'ದ ವೇದಿಕೆ ಸಜ್ಜುಗೊಳಿಸಲಾಯಿತು

ಚಿತ್ರ: ಅನೂಪ್ ರಾಘ. ಟಿ.

'ಸರ್ಕಾರದ ಸಾಧನೆ ಜನರ ಮುಂದಿಡುವ ಯತ್ನ'



'ಮೈಸೂರಿನಲ್ಲಿ ನಡೆಯುವ ಸಮಾವೇಶ ಯಾರ ಶಕ್ತಿ ಪ್ರದರ್ಶನವೂ ಅಲ್ಲ. ಪಕ್ಷ ಹಾಗೂ ಸರ್ಕಾರದ ಕೆಲಸಗಳನ್ನು ಜನರ ಮುಂದಿಡುವ ಪ್ರಯತ್ನವಿದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

'ಈ ಸರ್ಕಾರ ಏನೂ ಮಾಡುತ್ತಿಲ್ಲ, ಗ್ಯಾರಂಟಿ ಯೋಜನೆಗಳಿಂದಾಗಿ ದುಡ್ಡಿಲ್ಲ ಎಂದೆಲ್ಲಾ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಜನರಿಗೆ ವಾಸ್ತವ ಸ್ಥಿತಿ ತಿಳಿಸಲು ಸಮಾವೇಶ ನಡೆಸುತ್ತಿದ್ದೇವೆ. ದುಡ್ಡಿಲ್ಲದೇ ಹೋಗಿದ್ದರೆ ಮೈಸೂರೊಂದರಲ್ಲೇ ₹2,578 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತಿತ್ತಾ' ಎಂದು ಪ್ರಶ್ನಿಸಿದರು.



ಆ. 11ರಿಂದ ವಿಧಾನಮಂಡಲ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ಆಗಸ್ಟ್ 11ರಿಂದ ಆರಂಭವಾಗಲಿದೆ.

ಈ ಸಂಬಂಧ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಶುಕ್ರವಾರ ಅಧಿಸೂಚನೆ ಹೊರಡಿಸಿದ್ದಾರೆ. ಇದರ ಬೆನ್ನಲ್ಲೇ ಕಾರ್ಯಕಲಾಪಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಅದರ ಪ್ರಕಾರ ಆ.22ರವರೆಗೆ ಕಲಾಪಗಳು ನಡೆಯಲಿವೆ.

ಆ.15ರ ಶುಕ್ರವಾರ ಸ್ವಾತಂತ್ರ್ಯ ದಿನಾಚರಣೆಯ ಸಾರ್ವತ್ರಿಕ ರಜೆ, ಆ.16 ಎರಡನೇ ಶನಿವಾರದ ರಜೆ ಮತ್ತು ಆ.17 ಭಾನುವಾರ ಸರ್ಕಾರಿ ರಜೆ ಆಗಿರುವುದರಿಂದ ಮೂರು ದಿನ ಕಲಾಪಗಳು ನಡೆಯುವುದಿಲ್ಲ. ಒಟ್ಟು 9 ದಿನಗಳು ಮಾತ್ರ ಕಲಾಪ ನಡೆಯಲಿದೆ.



ಅಬಕಾರಿ ಹಗರಣ ಚೈತನ್ಯ ಬಘೇಲ್ ಬಂಧನ

ರಾಯಪುರ (ಪಿಟಿಐ): ಅಬಕಾರಿ ಹಗರಣಕ್ಕೆ ಸಂಬಂಧಿಸಿ ಛತ್ತೀಸಗಡದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಮಗ ಚೈತನ್ಯ ಬಘೇಲ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಬಂಧಿಸಿದೆ.

ಚೈತನ್ಯ ಬಘೇಲ್ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 11ರ ಅಡಿ ಬಂಧಿಸಲಾಗಿದ್ದು, 5 ದಿನ ಇ.ಡಿ ವಶಕ್ಕೆ ಪಡೆದಿದೆ.

'ದುರ್ಗ ಜಿಲ್ಲೆಯ ಭಿಲಾಯ್‌ನಲ್ಲಿರುವ ಭೂಪೇಶ್ ಬಘೇಲ್ ಮನೆಯಲ್ಲಿ ಇ.ಡಿ ಶೋಧ ನಡೆಸಿ ದಾಖಲೆಗಳನ್ನು ಪರಿಶೀಲಿಸಿದೆ. ಶೋಧದ ಸಂದರ್ಭದಲ್ಲಿ ಚೈತನ್ಯ ಬಘೇಲ್ ಅಧಿಕಾರಿಗಳಿಗೆ ಸಹಕಾರ ನೀಡಲಿಲ್ಲ. ಅವರ ಮನೆಯ ಹೊರಗೆ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ, ಭದ್ರತೆಗಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಮುಂಗಾರು ಅಧಿವೇಶನದ ಕೊನೆಯ ದಿನ ಇ.ಡಿ, ಭಿಲಾಯ್‌ನ ನಮ್ಮ ಮನೆ ಮೇಲೆ ದಾಳಿ ನಡೆಸಿದೆ. ಶುಕ್ರವಾರ ಚೈತನ್ಯ ಬಘೇಲ್ ಜನ್ಮದಿನವೂ ಆಗಿತ್ತು' ಎಂದು ಭೂಪೇಶ್ ಬಘೇಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

▶7

ಚಿನಕುರುಳಿ ಪ್ರಕಾಶ್ ಶೆಟ್ಟಿ







ಹವಾಮಾನ ಮುನ್ಸೂಚನೆ: ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಖಾತಾ ಗ್ಯಾರಂಟಿಗೆ 'ಸಮಗ್ರ ತಂತ್ರಾಂಶ'

ಶುಲ್ಕ ಪಾವತಿ ಸೇರಿದಂತೆ ಎಲ್ಲ ಇಲಾಖೆಗಳಿಂದ ಆನ್‌ಲೈನ್‌ನಲ್ಲೇ ಅನುಮೋದನೆ

● ಆರ್. ಮಂಜುನಾಥ್

ಬೆಂಗಳೂರು: 'ಬಿ' ಖಾತಾ ಹೊಂದಿರುವ ಅಥವಾ ಯಾವುದೇ ಖಾತಾ ಹೊಂದಿರದ ನಿವೇಶನಗಳಿಗೆ ಆನ್‌ಲೈನ್‌ನಲ್ಲೇ 'ಎ' ಖಾತಾ, 'ಇ' ಖಾತಾ ನೀಡುವ 'ಸಮಗ್ರ ತಂತ್ರಾಂಶ'ವನ್ನು ಬಿಬಿಎಂಪಿ ಅಳವಡಿಸಿಕೊಳ್ಳಲಿದೆ.

ಕಾವೇರಿ ತಂತ್ರಾಂಶದೊಂದಿಗೆ ಮಾಹಿತಿ ಕಲೆಹಾಕುವುದು ಸೇರಿದಂತೆ ಕಂದಾಯ ಇಲಾಖೆ, ಬಿಬಿಎಂಪಿಯ ಕಂದಾಯ ವಿಭಾಗ, ನಗರ ಯೋಜನೆಯ ಅಧಿಕಾರಿಗಳು 'ಸಮಗ್ರ ತಂತ್ರಾಂಶ' ಮೂಲಕವೇ ಎಲ್ಲ ರೀತಿಯ ಅನುಮೋದನೆಯನ್ನು ನೀಡಲಿದ್ದಾರೆ. ನಿವೇಶನ 'ಎ' ಖಾತಾವಾಗಿ ಕಾನೂನು ಬದ್ಧವಾಗಲು ಪಾವತಿಸಬೇಕಾದ ಶುಲ್ಕದ ಲೆಕ್ಕಾಚಾರವೂ ಆನ್‌ಲೈನ್‌ನಲ್ಲೇ ಆಗಲಿದೆ.


ಬಿಬಿಎಂಪಿ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024 (ಜಿಬಿಜಿಎ) ಜಾರಿಯಾಗಿದ್ದು, ಅದರಂತೆ ಎಲ್ಲ ಕಟ್ಟಡಗಳು ನಕ್ಷೆ ಹಾಗೂ ಪರವಾನಗಿಯನ್ನು ಪಡೆಯುವುದು ಕಡ್ಡಾಯವಾಗಿದೆ. ಅದಕ್ಕೆ ಅನುಗುಣವಾಗಿ, ಎಲ್ಲ ಆಸ್ತಿಗಳಿಗೂ 'ಎ' ಖಾತಾ ನೀಡಿ ಕಾನೂನುಬದ್ಧ ಗೊಳಿಸಲು ಸರ್ಕಾರ ನಿರ್ಧರಿಸಿದೆ. ಕಂದಾಯ ಇಲಾಖೆಯಿಂದ ಕೆಲವು ಮಾರ್ಗಸೂಚಿಗಳನ್ನು ಹೊರಡಿಸ ಬೇಕಿದೆ. ನಂತರ 'ರೆವಿನ್ಯೂ ಸೈಟ್' (ಕಂದಾಯ ನಿವೇಶನ) ಅಥವಾ ಬಡಾವಣೆಗಳಲ್ಲಿರುವ ಎಲ್ಲ ಆಸ್ತಿಗಳಿಗೂ ಖಾತಾ ಲಭ್ಯವಾಗಲಿದೆ.

ಮುಖ್ಯಾಂಶಗಳು

- ಅಂತಿಮ ಹಂತದಲ್ಲಿರುವ ಸಾಫ್ಟ್‌ವೇರ್ ಅಭಿವೃದ್ಧಿ ಪ್ರಕ್ರಿಯೆ
- ಆಗಸ್ಟ್ 15ರಿಂದ ಸಾರ್ವಜನಿಕರ ಬಳಕೆಗೆ ಲಭ್ಯ
- ಸುಮಾರು 8 ಲಕ್ಷ ಆಸ್ತಿಗಳಿಗೆ ಅನುಕೂಲ

'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲಿರುವ ಎಲ್ಲ ನಿವೇಶನಗಳಿಗೂ ಒಂದೇ ತಂತ್ರಾಂಶದ ಮೂಲಕ ಖಾತೆಗಳನ್ನು ನೀಡಲು 'ಸಮಗ್ರ ತಂತ್ರಾಂಶ' ಸಿದ್ಧವಾಗುತ್ತಿದೆ. ಎಲ್ಲ ದಾಖಲೆಗಳೂ ಡಿಜಿಟಲ್ ರೂಪದಲ್ಲೇ ದಾಖಲಾಗುತ್ತವೆ. ಹೀಗಾಗಿ, ಬಿಬಿಎಂಪಿ ಕಚೇರಿಗಳಿಗೆ ಮಾಲೀಕರು ಆಗಾಗ್ಗೆ ಅಲೆಯುವಂತಿಲ್ಲ.

ಏಕ ನಿವೇಶನವಾಗಿ ಪರಿಗಣನೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ನಿವೇಶನಗಳು ಅಥವಾ ಬಡಾವಣೆಗಳಿಗೆ ಅಭಿವೃದ್ಧಿ ನಕ್ಷೆ ನೀಡುವ ಅಧಿಕಾರವನ್ನು ಬಿಡಿಎಯಿಂದ ಬಿಬಿಎಂಪಿಗೆ ಪ್ರತ್ಯಾಯೋಜಿಸಲಾಗಿದೆ. ಹೀಗಾಗಿ, ನಿವೇಶನಗಳನ್ನು 'ಏಕ ನಿವೇಶನ' ಎಂದು ಪರಿಗಣಿಸಿ, ಅಭಿವೃದ್ಧಿ ನಕ್ಷೆಯನ್ನು ಬಿಬಿಎಂಪಿಯೇ ನೀಡುತ್ತದೆ.



ಇದಕ್ಕಾಗಿ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಸೆಕ್ಷನ್ 13–ಇಗೆ ತಿದ್ದುಪಡಿ ತಂದು, ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳನ್ನು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದೆ.

ಈ ಅಧಿಸೂಚನೆಯಂತೆ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗದ 20x30 ಅಡಿ ನಿವೇಶನದಿಂದ ಎರಡೂವರೆ ಎಕರೆವರೆಗಿನ ಏಕ ನಿವೇಶನಗಳಿಗೆ ರಸ್ತೆ, ಉದ್ಯಾನ ಸೇರಿದಂತೆ ಯೋಜನಾಬದ್ಧವಾದ ಪ್ರದೇಶಗಳನ್ನು ನಿಗದಿಪಡಿಸಿ, ಬಿಬಿಎಂಪಿಯೇ ಅಭಿವೃದ್ಧಿ ನಕ್ಷೆಯನ್ನು ನೀಡುತ್ತದೆ. ಅಭಿವೃದ್ಧಿ ನಕ್ಷೆ, ಖಾತಾ ಸೇರಿದಂತೆ ಎಲ್ಲ ಪ್ರಕ್ರಿಯೆಗಳು 'ಸಮಗ್ರ ತಂತ್ರಾಂಶ'ದಲ್ಲೇ ನಡೆಯುತ್ತವೆ. ಆಸ್ತಿಯ ಎಲ್ಲ ದಾಖಲೆಗಳನ್ನು ಒಂದು ಬಾರಿ ಅಪ್‌ಲೋಡ್ ಮಾಡಿದರೆ, ಅಭಿವೃದ್ಧಿ ನಕ್ಷೆ, ಖಾತಾ ಎಲ್ಲವೂ ಲಭ್ಯವಾಗುತ್ತದೆ ಎಂದು ಬಿಬಿಎಂಪಿ ನಗರ ಯೋಜನೆಯ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

30 ದಿನಗಳಲ್ಲಿ ಖಾತಾ ಲಭ್ಯ!

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಅನುಮೋದನೆಗೆ ಬಳಸಲಾಗುತ್ತಿರುವ 'ನಂಬಿಕೆ ನಕ್ಷೆ' ತಂತ್ರಾಂಶವನ್ನು ವಿಸ್ತರಿಸಿ, ಖಾತಾ ನೀಡುವ 'ಸಮಗ್ರ ತಂತ್ರಾಂಶ'ವನ್ನು ತಯಾರಿಸಲಾಗುತ್ತಿದೆ. ನಿವೇಶನಗಳಿಗೆ ಖಾತಾ ಪಡೆಯಲು ಬಯಸುವ ಮಾಲೀಕರು, ಬಿಬಿಎಂಪಿ ದೃಢೀಕರಿಸಿರುವ ಆರ್ಕಿಟೆಕ್ಟ್ ಅಥವಾ ಎಂಜಿನಿಯರ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆಸ್ತಿಯ ಮಾಲೀಕತ್ವದ ದಾಖಲೆಗಳು, ಚಿತ್ರ, ನಿವೇಶನದ ನಾಲ್ಕು ಬದಿಯ ಅಕ್ಷಾಂಶ, ರೇಖಾಂಶಗಳ ಮಾಹಿತಿ, ಖಾತಾ ಪಡೆದುಕೊಂಡಿದ್ದರೆ ಅದರ ಪ್ರತಿ, ಇ–ಪಿಐಡಿ ಇದ್ದರೆ ಅದನ್ನು ನಮೂದಿಸಿ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು.

ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲೇ ಪರಿಶೀಲನೆಯಾಗುವುದರಿಂದ ಹಂತಹಂತವಾಗಿ ಅರ್ಜಿಯ ಸ್ಥಿತಿಯನ್ನು ತಿಳಿದುಕೊಳ್ಳಬಹುದು. ಯಾವುದಕ್ಕೆ ಎಷ್ಟು ಶುಲ್ಕ (ಮಾರ್ಗಸೂಚಿ ದರದ ಶೇ 5ರಷ್ಟು/ಅಭಿವೃದ್ಧಿ ಶುಲ್ಕ) ಸೇರಿದಂತೆ ಎಲ್ಲದರ ಲೆಕ್ಕವೂ ಸ್ವಯಂಚಾಲಿತವಾಗಿ ಆಗುತ್ತದೆ. ಎಲ್ಲ ದಾಖಲೆಗಳು ಸರಿಯಾಗಿದ್ದರೆ 30 ದಿನಗಳಲ್ಲಿ 'ಎ' ಖಾತಾದ ಜೊತೆಗೆ ಅಂತಿಮ ಇ–ಖಾತಾವೂ ಲಭ್ಯವಾಗುತ್ತದೆ. ಇ– ಖಾತಾ ದೊರೆತ ಮೇಲೆ ಕಟ್ಟಡ ನಕ್ಷೆಗೆ ಇಪಿಐಡಿಯನ್ನು ನಮೂದಿಸಿ ಅರ್ಜಿ ಸಲ್ಲಿಸಿದಾಗ ಕೆಲವೇ ಕೆಲವು ದಾಖಲೆಗಳನ್ನು ಸಲ್ಲಿಸಿದರೆ ಸಾಕಾಗುತ್ತದೆ. 'ನಂಬಿಕೆ ನಕ್ಷೆ'ಯೂ ದೊರೆಯುತ್ತದೆ.

ಏನಾಗಲಿದೆ ಅಕ್ರಮ 'ಎ' ಖಾತಾ?

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅಭಿವೃದ್ಧಿ ನಕ್ಷೆ ಮಂಜೂರಾಗದೆ, ಭೂ ಪರಿವರ್ತನೆಗೊಳ್ಳದೆ ಅಕ್ರಮವಾಗಿ 'ಎ' ಖಾತಾ ಪಡೆದಿರುವ ನಿವೇಶನಗಳಿಗೆ ಕಾನೂನುಬದ್ಧ 'ಎ' ಖಾತಾ ಪಡೆದುಕೊಳ್ಳಲು ಅವಕಾಶವಿದೆ.

'ಬಿ' ಖಾತಾಗೆ ಅರ್ಹವಾಗಿರುವ ಆಸ್ತಿಗಳ ಮಾಲೀಕರಿಂದ ಅಕ್ರಮವಾಗಿ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, 'ಐಎಫ್‌ಎಂಎಸ್' ತಂತ್ರಾಂಶದ 'ಆರ್ ಕೋಡ್ 130' ಬಳಸಿ 45 ಸಾವಿರಕ್ಕೂ ಹೆಚ್ಚು 'ಎ' ಖಾತಾವನ್ನು ನಿಯಮಬಾಹಿರವಾಗಿ ನೀಡಿರುವುದು 2023ರಲ್ಲಿ ತನಿಖೆಯಿಂದ ಪತ್ತೆಯಾಗಿತ್ತು. ಅವುಗಳೆಲ್ಲವನ್ನೂ ಈಗ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗು ತ್ತದೆ. ಅಕ್ರಮ ಎಂದೂ ನಮೂದಿಸಲಾಗುತ್ತದೆ' ಎಂಬುದಾಗಿ ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಅಕ್ರಮ 'ಎ' ಖಾತಾದವರೂ ಈಗ ಕಾನೂನುಬದ್ಧ 'ಎ' ಖಾತಾ ಪಡೆದುಕೊಂಡರೆ ಅವರ ಆಸ್ತಿ ಮಾಲೀಕತ್ವ ದೃಢೀಕರಣವಾಗುತ್ತದೆ' ಎಂದರು.

ಚಿಟಿಕೆ ಸುದ್ದಿ

ಕಿದ್ವಾಯಿ: ಎಂಆರ್‌ಐ ಸ್ಕ್ಯಾನಿಂಗ್ ಇಂದಿನಿಂದ



ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿನ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವು ಶನಿವಾರದಿಂದಲೇ ಕಾರ್ಯನಿರ್ವಹಿಸಲಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ತಿಳಿಸಿದ್ದಾರೆ.

ಸಂಸ್ಥೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರದ ದುರಸ್ತಿಗೆ ಅಗತ್ಯವಿರುವ ಬಿಡಿ ಭಾಗಗಳನ್ನು ಆಮದು ಮಾಡಿಕೊಳ್ಳಲಾಗಿದೆ. ರೋಗಿಗಳ ಅನುಕೂಲಕ್ಕಾಗಿ ಮತ್ತೊಂದು ಯಂತ್ರವನ್ನು ಖರೀದಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಯಂತ್ರ ಖರೀದಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ರೋಗಿಗಳಿಗೆ ಸೂಕ್ತ ಕಾಲಕ್ಕೆ ಚಿಕಿತ್ಸೆ ಹಾಗೂ ಆರೈಕೆ ಬಗ್ಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಸಂಸ್ಥೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರದ ದುರಸ್ತಿಯ ಅವಧಿಯಲ್ಲಿ ರೋಗಿಗಳಿಗೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ನಿಮ್ಹಾನ್ಸ್ ಮತ್ತು ಸಂಜಯ್ ಗಾಂಧಿ ಆಸ್ಪತ್ರೆ ಜತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ರೋಗಿಗಳಿಗೆ ಅಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಸಂಸ್ಥೆಯಿಂದ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ(ಜಿಟಿಟಿಸಿ) 2025-26ನೇ ಸಾಲಿನ 'ಪೋಸ್ಟ್ ಡಿಪ್ಲೊಮಾ ಇನ್ ಟೂಲ್ ಡಿಸೈನ್' ಕೋರ್ಸ್‌ಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಡಿಎಂಇ/ಡಿಟಿಡಿಎಂ/ಬಿಇ(ಮೆಕ್ಯಾನಿಕಲ್ /ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್/ ಇಂಡಸ್ಟ್ರಿಯಲ್ ಪ್ರೊಡಕ್ಷನ್, ಆಟೊಮೊಬೈಲ್ ಎಂಜಿನಿಯರಿಂಗ್) ತೇರ್ಗಡೆಯಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಎಂ.ಟೆಕ್ ಇನ್ ಟೂಲ್ ಎಂಜಿನಿಯರಿಂಗ್: 'ಎಂ-ಟೆಕ್ ಇನ್ ಟೂಲ್ ಎಂಜಿನಿಯರಿಂಗ್' ಕೋರ್ಸ್‌ಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮೆಕ್ಯಾನಿಕಲ್ / ಆಟೊಮೊಬೈಲ್, ಆಟೊಮೇಷನ್ ಆ್ಯಂಡ್ ರೊಬೊಟಿಕ್ /ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್/ಟೂಲ್/ ಮೆಕಟ್ರಾನಿಕ್ಸ್ ವಿಷಯಗಳಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿರುವವರು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು ಪಿಜಿ / ಪಿಡಿ ಸ್ಟಡೀಸ್ ಕೇಂದ್ರ, ರಾಜಾಜಿನಗರ, ಬೆಂಗಳೂರು. ಮೊಬೈಲ್ ಸಂ: 9141629584/9880217473/ 8310987353 ಇಲ್ಲಿಗೆ ಸಂಪರ್ಕಿಸಬಹುದು. https://gttc.karnataka.gov.in ಜಾಲತಾಣಕ್ಕೂ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.


ಸುದ್ದಿ 2 ನಿಮಿಷ

ಗಾಯಕ ವೆಂಕಟೇಶ್ ಕುಮಾರ್‌ಗೆ 'ಪಂಚಾಕ್ಷರ ಕೃಪಾಭೂಷಣ ಪ್ರಶಸ್ತಿ'

ಬೆಂಗಳೂರು: ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ ನೀಡುವ 'ಪಂಚಾಕ್ಷರ ಕೃಪಾಭೂಷಣ ಪ್ರಶಸ್ತಿ'ಗೆ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ವೇದಿಕೆಯು ಇದೇ ಭಾನುವಾರ ಮಧ್ಯಾಹ್ನ 3 ಗಂಟೆಗೆ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಪಂಡಿತ್ ಶೇಷಾದ್ರಿ ಗವಾಯಿ ಸಂಗೀತೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಬಸವ ಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದೇವರು ಅವರು ಸಮಾರಂಭದ ಸಾನ್ನಿಧ್ಯ ವಹಿಸುತ್ತಾರೆ.



ಬೀದರ್ ಜಿಲ್ಲೆಯ ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದೇವರು ಸಮಾರಂಭ ಉದ್ಘಾಟಿಸುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ತಬಲಾ ವಾದಕ ಸತೀಶ್ ಹಂಪಿಹೊಳಿ ಅವರು ಅಧ್ಯಕ್ಷತೆ ವಹಿಸುತ್ತಾರೆ. ಪ್ರಶಸ್ತಿ ಪ್ರದಾನದ ಬಳಿಕ ವೆಂಕಟೇಶ್ ಕುಮಾರ್ ಅವರಿಂದ ಗಾಯನ ನಡೆಯಲಿದೆ ಎಂದು ವೇದಿಕೆ ಅಧ್ಯಕ್ಷ ನಾಗೇಂದ್ರ ಟಿ. ರಾಣಾಪೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಾವೇಶ ನಾಳೆ

ಬೆಂಗಳೂರು: ಕನಿಷ್ಠ ವೇತನ ನಿಗದಿಯಲ್ಲಿನ ತಾರತಮ್ಯ ವಿರೋಧಿಸಿ ಹಾಗೂ ಕೆಲಸದ ಸ್ಥಳಗಳಲ್ಲಿ ಸುರಕ್ಷಿತ, ಮಾನವೀಯ ವಾತಾವರಣ ಕಲ್ಪಿಸುವಂತೆ ಆಗ್ರಹಿಸಿ ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಜುಲೈ 20ರಂದು 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಾವೇಶ' ಆಯೋಜಿಸಿದೆ.

'ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಮಹಿಳೆಯರು ಗಾರ್ಮೆಂಟ್ಸ್ ಉದ್ಯಮದಲ್ಲಿದ್ದಾರೆ. ಯುರೋಪ್, ಅಮೆರಿಕದ ಬೃಹತ್ ಕಾರ್ಪೊರೇಟ್ ಕಂಪನಿಗಳಿಗೆ ಬ್ರ್ಯಾಂಡ್ ಉಡುಪು ಹೊಲಿಯುವ ಕಾರ್ಮಿಕರಿಗೆ ಕನಿಷ್ಠ ವೇತನವೂ ಸಿಗುತ್ತಿಲ್ಲ' ಎಂದು ಯೂನಿಯನ್ ಸಂಚಾಲಕಿ ಆರ್. ಪ್ರತಿಭಾ ದೂರಿದ್ದಾರೆ.

'ರಾಜ್ಯದ ಬೇರೆ ಉದ್ಯಮಗಳ ಕಾರ್ಮಿಕರಿಗೆ ಕನಿಷ್ಠ ₹23 ಸಾವಿರ ವೇತನ ನಿಗದಿ ಮಾಡಲಾಗಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ₹12 ಸಾವಿರ ನಿಗದಿ ಮಾಡಿ ರಾಜ್ಯ ಸರ್ಕಾರ ಮಹಿಳಾ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಕೆಲಸದ ಅವಧಿಯನ್ನು 10 ಗಂಟೆಗೆ ಹೆಚ್ಚಿಸುತ್ತಿದೆ. ಯಾವುದೇ ಸುರಕ್ಷತೆ ಇಲ್ಲದೆ, ಮಹಿಳೆಯರಿಂದ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿಸಲು ಮಾಲೀಕರಿಗೆ ಅವಕಾಶ ಮಾಡಿಕೊಡುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಾವೇಶದಲ್ಲಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಅನ್ಯಾಯಗಳ ಕುರಿತು ಚರ್ಚಿಸಲಾಗುತ್ತದೆ' ಎಂದು ಪ್ರತಿಭಾ ತಿಳಿಸಿದ್ದಾರೆ.

ಆ್ಯಪ್ ಆಧಾರಿತ ಆಟೊಗಳ ವಿರುದ್ಧ ಪ್ರಯಾಣಿಕರ ಆರೋಪ

ನಿಗದಿಗಿಂತ ಅಧಿಕ ದರ ವಸೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಟೊ ಪ್ರಯಾಣದ ಪರಿಷ್ಕೃತ ದರ ಜಾರಿಗೂ ಮುನ್ನವೇ ಕೆಲವು ಆ್ಯಪ್ ಆಧಾರಿತ ಆಟೊಗಳು ಈಗಿನಿಂದಲೇ ಹೊಸ ದರವನ್ನು ವಸೂಲಿ ಮಾಡುತ್ತಿವೆ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

ನಗರ ಜಿಲ್ಲಾಡಳಿತವು ಜುಲೈ 14ರಂದು ಆಟೊ ಪ್ರಯಾಣ ದರ ಹೆಚ್ಚಳ ಮಾಡಿದ್ದು, ಪರಿಷ್ಕೃತ ದರ ಆಗಸ್ಟ್ 1ರಿಂದ ಜಾರಿಗೆ ಬರಲಿದೆ. ಮೊದಲ ಎರಡು ಕಿ.ಮೀ.ಗೆ ಕನಿಷ್ಠ ₹30 ಇದ್ದ ದರವನ್ನು ₹36ಕ್ಕೆ ಏರಿಸಿದೆ. ಬಳಿಕ ಪ್ರತಿ ಕಿಲೋಮೀಟರ್‌ಗೆ ₹15 ಇದ್ದಿದ್ದು ₹18ಕ್ಕೆ ಏರಿದೆ. ಆಟೊದಲ್ಲಿ ಮೂವರು ಅಷ್ಟೇ ಪ್ರಯಾಣಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಅನೇಕ ಚಾಲಕರು ಮೀಟರ್ ಬಳಸುವುದಿಲ್ಲ ಮತ್ತು ಹೆಚ್ಚಿನ ದರ ಕೇಳುತ್ತಾರೆ. ಬೈಕ್ ಟ್ಯಾಕ್ಸಿ ನಿಷೇಧದ ನಂತರ ದರ ಮತ್ತಷ್ಟು ಹೆಚ್ಚಾಗಿದೆ. ರ‍್ಯಾಪಿಡೊ, ಓಲಾ ಮುಂತಾದ ಆ್ಯಪ್‌ಗಳಲ್ಲಿ ವಿಪರೀತ ಪ್ರಯಾಣ ದರ ತೆಗೆದುಕೊಳ್ಳುತ್ತಿದ್ದು, ದರದಲ್ಲಿ ಪಾರದರ್ಶಕತೆ ಇಲ್ಲ. ಹೊಸ ದರವನ್ನು ಈಗಿನಿಂದಲೇ ವಸೂಲು ಮಾಡಲಾಗುತ್ತಿದೆ. ಪ್ರಯಾಣ ದರಕ್ಕೆ ಸಂಬಂಧಿಸಿದಂತೆ ಆ್ಯಪ್‌ನಲ್ಲಿ ಸ್ಪಷ್ಟವಾದ ಮಾಹಿತಿ ನೀಡುತ್ತಿಲ್ಲ' ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

'ಆ್ಯಪ್ ಆಧಾರಿತ ಆಟೊ ಚಾಲಕರು ನಿಗದಿತ ದರಕ್ಕಿಂತಲೂ ಹೆಚ್ಚು ವಸೂಲಿ ಮಾಡುತ್ತಿದ್ದಾರೆ. ಹೆಚ್ಚಿನ ದರ ನೀಡುವಂತೆ ಬೇಡಿಕೆ ಇಡುತ್ತಾರೆ, ಪ್ರಯಾಣಿಕರು ಒಪ್ಪದೇ ಇದ್ದರೆ ಪ್ರಯಾಣ ರದ್ದುಗೊಳಿಸುತ್ತಾರೆ. ಇದರಿಂದ ತೊಂದರೆ ಅನುಭವಿಸುವಂತಾಗಿದೆ' ಎಂದು ಪ್ರಯಾಣಿಕ ಸಿದ್ದಲಿಂಗ ಕುಮಾರ್ ಬೇಸರ ವ್ಯಕ್ತಪಡಿಸಿದರು.

'ಇತ್ತೀಚೆಗೆ ನನ್ನ ಮನೆಯ ಸಮೀಪದಲ್ಲಿರುವ ಬಡಾವಣೆಗೆ ಆಟೊದಲ್ಲಿ ಪ್ರಯಾಣಿಸಿದಾಗ ₹100 ತೆಗೆದುಕೊಂಡರು. ಯಾವ ಆಧಾರದಲ್ಲಿ ಲೆಕ್ಕ ಹಾಕಿ ದರ ನಿಗದಿ ಪಡಿಸಿದ್ದಾರೆ ಎಂಬುದು ಗೊತ್ತಿಲ್ಲ. ಚಾಲಕನನ್ನು ಕೇಳಿದರೆ ಸ್ಪಷ್ಟವಾದ ಉತ್ತರ ನೀಡಲಿಲ್ಲ' ಎಂದು ಹೇಳಿದರು.

'ಪ್ರಯಾಣಿಕರು ಒಟಿಪಿ ಹೇಳಿದ ಮೇಲೆ ಸಂಚಾರ ಆರಂಭಿಸಿ ಅವರು ತಲುಪಬೇಕಾದ ಸ್ಥಳಕ್ಕೆ ಮುಟ್ಟಿಸುತ್ತೇವೆ. ಎಷ್ಟು ದರ ಎಂಬುದು ಆ್ಯಪ್‌ನಲ್ಲಿ ಪ್ರಯಾಣಿಕರಿಗೆ ಮೊದಲೇ ತೋರಿಸಿರುತ್ತದೆ. ಸ್ಕ್ಯಾನ್ ಮಾಡಿ ಪಾವತಿ ಮಾಡುತ್ತಾರೆ. ನಾವು ಹೆಚ್ಚುವರಿಯಾಗಿ ಹಣ ಕೇಳುವುದಿಲ್ಲ' ಎಂದು ಆಟೊ ಚಾಲಕರೊಬ್ಬರು ತಿಳಿಸಿದರು.

'ಪ್ರಯಾಣಿಕರಿಂದ ಹೆಚ್ಚಿನ ದರ ವಸೂಲಿ ಮಾಡುತ್ತಿಲ್ಲ. ಆಗಸ್ಟ್ 1ರಿಂದ ಹೊಸ ದರ ಜಾರಿಯಾಗಲಿದೆ. ಆ್ಯಪ್ ಆಧಾರಿತ ಸೇವೆಗಳ ಆಟೊದವರು ದಟ್ಟಣೆ ಅವಧಿಯಲ್ಲಿ ₹30ರಿಂದ ₹40ರವರೆಗೂ ಹೆಚ್ಚಿನ ದರ ತೆಗೆದುಕೊಳ್ಳುತ್ತಾರೆ; ಅದೂ ಪ್ರಯಾಣಿಕರು ಒಪ್ಪಿದರೆ ಮಾತ್ರ. ಅದನ್ನು ಹೊರತುಪಡಿಸಿ ಪ್ರಯಾಣಿಕರಿಂದ ಹಣ ಸುಲಿಗೆ ಮಾಡುತ್ತಿಲ್ಲ' ಎಂದು ಆಟೊ ಚಾಲಕ ರಾಮೇಗೌಡ ತಿಳಿಸಿದರು.



ಆಟೊಗಳ ಮುಟ್ಟುಗೋಲು

ಅಧಿಕ ದರ ವಸೂಲಿ ಮಾಡುತ್ತಿರುವ ಬಗ್ಗೆ ಪ್ರಯಾಣಿಕರಿಂದ ದೂರುಗಳು ಬಂದ ಕಾರಣ ಕೆಲ ದಿನಗಳ ಹಿಂದೆ ಸಾರಿಗೆ ಕಚೇರಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಒಂದೇ ದಿನ 299 ಪ್ರಕರಣಗಳನ್ನು ದಾಖಲಿಸಿ, 114 ಆಟೊಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರು.

ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದಾಪುರ, ನೆಲಮಂಗಲ, ರಾಮನಗರ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು.

ಬಿಎಂಆರ್‌ಸಿಎಲ್‌ಗೆ ರವಿಶಂಕರ್ ಎಂಡಿ

ಬೆಂಗಳೂರು: ಡಾ.ಜೆ.ರವಿಶಂಕರ್ ಅವರನ್ನು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾಯಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ. ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ಹುದ್ದೆಯನ್ನು ಹೆಚ್ಚುವರಿಯಾಗಿ ಹೊಂದಿದ್ದ ಮಹೇಶ್ವರ್ ರಾವ್ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿ, ಕೃಷಿ ಇಲಾಖೆ ಕಾರ್ಯದರ್ಶಿಯಾಗಿದ್ದ ರವಿಶಂಕರ್ ಅವರನ್ನು ವರ್ಗಾಯಿಸಲಾಗಿದೆ.



ಪ್ರಜಾ ವಿಮೋಚನಾ ಚಳವಳಿಯ ಕಾರ್ಯಕರ್ತರು ಬೈಯಪ್ಪನಹಳ್ಳಿಯಲ್ಲಿ ಪ್ರತಿಭಟನೆ ನಡೆಸಿದರು

'ಹೊರರಾಜ್ಯ ವಿ.ವಿ: ಕನ್ನಡ ವಿದ್ಯಾರ್ಥಿಗಳ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊರರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದ್ದು, ಇದು ಕನ್ನಡದ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಲ್ಲ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಬೇಸರ ವ್ಯಕ್ತಪಡಿಸಿದ್ದಾರೆ.

ನೆರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಒಟ್ಟು 102 ವಿದ್ಯಾರ್ಥಿಗಳಿಗೆ ತಲಾ ₹25 ಸಾವಿರ ವಿದ್ಯಾರ್ಥಿವೇತನವನ್ನು ಪ್ರಾಧಿಕಾರದ ವತಿಯಿಂದ ಮಂಜೂರು ಮಾಡಿರುವ ಅವರು, 'ಕಳೆದ ಮೂರು ವರ್ಷಗಳಿಂದ ಅನುದಾನ ಕೊರತೆಯಿಂದ ಪ್ರಾಧಿಕಾರವು ಈ ಕಾರ್ಯಕ್ರಮವನ್ನು ಅನಿವಾರ್ಯವಾಗಿ ಸ್ಥಗಿತಗೊಳಿಸಿತ್ತು. ಈ ಬಾರಿ ಅನುದಾನದ ಕೊರತೆಯ ನಡುವೆಯೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿದ್ಯಾರ್ಥಿ ವೇತನ ಮಂಜೂರಾತಿಗೆ ಕ್ರಮ ವಹಿಸಲಾಗಿದೆ ಎಂದು' ತಿಳಿಸಿದ್ದಾರೆ.



ಪುರುಷೋತ್ತಮ ಬಿಳಿಮಲೆ

'ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ 21 ವಿದ್ಯಾರ್ಥಿಗಳು, ಕಾಸರಗೋಡಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ 27 ವಿದ್ಯಾರ್ಥಿಗಳು, ಮಹಾರಾಷ್ಟ್ರದ ಸೊಲ್ಲಾಪುರದ ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ವಿಶ್ವವಿದ್ಯಾಲಯದ 25 ವಿದ್ಯಾರ್ಥಿಗಳು, ಸೊಲ್ಲಾಪುರದ ಸಿಬಿ ಖೇಡಗಿ ಬಸವೇಶ್ವರ ಮಹಾವಿದ್ಯಾಲಯದ 23 ವಿದ್ಯಾರ್ಥಿಗಳು, ಮುಂಬೈ ವಿಶ್ವವಿದ್ಯಾಲಯದ ಇಬ್ಬರು, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಮೂವರು ಹಾಗೂ ಚೆನ್ನೈನ ಮದ್ರಾಸ್ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿ ಸೇರಿ ಒಟ್ಟು 102 ವಿದ್ಯಾರ್ಥಿಗಳಿಗೆ ತಲಾ ₹25 ಸಾವಿರದಂತೆ ಒಟ್ಟು ₹25.50 ಲಕ್ಷ ಮಂಜೂರು ಮಾಡಲಾಗಿದೆ. ಇದೇ ಪ್ರಥಮ ಬಾರಿಗೆ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣವನ್ನು ಜಮೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಮುಚ್ಚಿದ ವಿಭಾಗಗಳು: 'ಕನ್ನಡ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಕೊರತೆಯಿಂದ ಮಧುರೈನ ಕಾಮರಾಜ ವಿಶ್ವವಿದ್ಯಾಲಯ ಹಾಗೂ ಹೈದರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಮುಚ್ಚಲ್ಪಟ್ಟಿವೆ. ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಮುಂದಿನ ದಿನಗಳಲ್ಲಿ ಉಳಿದ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗದ ಸ್ಥಿತಿಯು ಇದೇ ಹಂತಕ್ಕೆ ತಲುಪಲಿದೆ' ಎಂದು ಬಿಳಿಮಲೆ ಆತಂಕ ವ್ಯಕ್ತಪಡಿಸಿದ್ದಾರೆ.

'ಹೊರ ನಾಡಿನ ಎಂ.ಎ. ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾರ್ಥಿವೇತನ ನೀಡಲು ರಾಜ್ಯ ಸರ್ಕಾರವು ಕೂಡಲೇ ಅನುದಾನ ಬಿಡುಗಡೆ ಮಾಡುವುದರ ಜೊತೆಗೆ, ಈ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳನ್ನು ಸಬಲೀಕರಣಗೊಳಿಸಲು ಮುಂದಾಗಬೇಕು' ಎಂದು ಆಗ್ರಹಿಸಿದ್ದಾರೆ.

ಅಕ್ರಮ ಒತ್ತುವರಿ ತೆರವು ಮಾಡುವಂತೆ ಆಗ್ರಹಿಸಿ ಧರಣಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 27ರ ಸರ್ಕಾರಿ ಜಮೀನಿನ ಅಕ್ರಮ ಒತ್ತುವರಿ ತೆರವುಗೊಳಿಸಿ ಬಡವರಿಗೆ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಪ್ರಜಾ ವಿಮೋಚನಾ ಚಳವಳಿಯ ಕಾರ್ಯಕರ್ತರು ಬೈಯಪ್ಪನಹಳ್ಳಿ ಗ್ರಾಮದ ಸರ್ಕಾರಿ ಜಮೀನಿನಲ್ಲಿ ಪ್ರತಿಭಟನೆ ನಡೆಸಿದರು.

1975ರಲ್ಲಿ ಮೂವತ್ತಕ್ಕೂ ಹೆಚ್ಚು ಜನರಿಗೆ ನಿವೇಶನ ಮಂಜೂರು ಮಾಡಿ ಹಕ್ಕುಪತ್ರವನ್ನು ನೀಡಲಾಗಿತ್ತು. ಕೆಲ ಅಧಿಕಾರಿಗಳು ನಿವೇಶನಕ್ಕೆ ಖಾತಾ ಮಾಡಿಕೊಡುವುದಾಗಿ ಹಕ್ಕುಪತ್ರವನ್ನು ತೆಗೆದುಕೊಂಡು ನಿವೇಶನವನ್ನೂ ನೀಡದೆ, ಹಕ್ಕುಪತ್ರವನ್ನೂ ಹಿಂದಿರುಗಿಸದೆ ಬಡವರಿಗೆ ಅನ್ಯಾಯ ಮಾಡಿದ್ದಾರೆ. ಈಗ ಕೆಲವು ಭೂಗಳ್ಳರು ಅಕ್ರಮ ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಜಮೀನನ್ನು ತಮ್ಮದಾಗಿಸಿಕೊಂಡು ಬಡವರ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಪ್ರಜಾ ವಿಮೋಚನಾ ಚಳವಳಿಯ ರಾಜ್ಯಾಧ್ಯಕ್ಷ ಆನೇಕಲ್ ಕೃಷ್ಣಪ್ಪ ದೂರಿದರು.

'ಬೈಯಪ್ಪನಹಳ್ಳಿ ಗ್ರಾಮದಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಬಡ ಜನರೇ ಹೆಚ್ಚಾಗಿದ್ದು, ಇವರೆಲ್ಲ ಸ್ವಂತ ಸೂರಿಲ್ಲದೆ ಪರದಾಡುತ್ತಿದ್ದಾರೆ. ಈ ಸಂಬಂಧ ಪ್ರಜಾ ವಿಮೋಚನಾ ಚಳವಳಿಯಿಂದ ಹಲವಾರು ಬಾರಿ ಕೆ.ಆರ್.ಪುರ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ಮಾಡಿ, ದಾಖಲೆಗಳನ್ನು ತಹಶೀಲ್ದಾರ್ ಅವರಿಗೆ ನೀಡಿದ್ದೇವೆ. ಜಿಲ್ಲಾಧಿಕಾರಿಗಳ ಗಮನಕ್ಕೂ ತಂದಿದ್ದೇವೆ. ಸರ್ಕಾರ ಸರ್ವೆ ನಂಬರ್ 27ರಲ್ಲಾಗಿರುವ ಜಮೀನು ಒತ್ತುವರಿ ತೆರವು ಮಾಡಿ, ಬಡಾವಣೆ ನಿರ್ಮಿಸಿ ಬಡವರಿಗೆ ನಿವೇಶನ ಹಂಚಿಕೆ ಮಾಡಬೇಕು' ಎಂದರು.

ಪ್ರತಿಭಟನೆಯಲ್ಲಿ ಚಳವಳಿಯ ಪದಾಧಿಕಾರಿಗಳಾದ ವೆಂಕಟರಮಣಪ್ಪ, ಮುನಿಸ್ವಾಮಿ, ಆಂಜಿನಪ್ಪ, ವೆಂಕಟಾಚಲಪತಿ, ಮಂಜುನಾಥ, ಕವಿತಾ, ಮಂಜಮ್ಮ, ಗೀತಾ, ಹೇಮಾವತಿ ಹಾಜರಿದ್ದರು.

ದೈಹಿಕ ಸಂಬಂಧ ಬೆಳೆಸಿ ವಂಚಿಸಿದ ಆರೋಪ

ಶಾಸಕ ಚವಾಣ್, ಪುತ್ರನ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಶಾಸಕ ಪ್ರಭು ಚವಾಣ್, ಅವರ ಮಗ ಪ್ರತೀಕ್ ಚವಾಣ್ ಹಾಗೂ ಕುಟುಂಬದ ಸದಸ್ಯರ ವಿರುದ್ಧ ಮದುವೆ ನಿರಾಕರಣೆಯ ಸಂಬಂಧ ಮಹಾರಾಷ್ಟ್ರದ ದೇಗಲೂರ ತಾಲ್ಲೂಕಿನ ಸೇವಾದಾಸ ನಗರ ತಾಂಡಾದ ಯುವತಿಯೊಬ್ಬರು ರಾಜ್ಯ ಮಹಿಳಾ ಆಯೋಗ ಹಾಗೂ ರಾಜ್ಯದ ಗೃಹ ಸಚಿವರಿಗೆ ದೂರು ನೀಡಿದ್ದಾರೆ.

'2023ರ ಡಿಸೆಂಬರ್ 25ರಂದು ಔರಾದ್ ತಾಲ್ಲೂಕಿನ ಬೋಂತಿಯ ಘಮಸುಬಾಯಿ ತಾಂಡಾದಲ್ಲಿ ಶಾಸಕ ಅವರ ಪುತ್ರ ಪ್ರತೀಕ್ ಚವಾಣ್ ಜತೆ ಎಲ್ಲರ ಸಮ್ಮುಖದಲ್ಲಿ ನನ್ನ ನಿಶ್ಚಿತಾರ್ಥವಾಗಿದೆ. ನಿಶ್ಚಿತಾರ್ಥದ ನಂತರ ನಾವಿಬ್ಬರೂ ಮಹಾರಾಷ್ಟ್ರದ ದೇವಸ್ಥಾನ ಸೇರಿ ವಿವಿಧೆಡೆ ಸುತ್ತಾಡಲು ಹೋಗಿದ್ದೆವು. ಈ ವೇಳೆ ಪ್ರತೀಕ್ ನನ್ನ ಜತೆ ದೈಹಿಕ ಸಂಬಂಧ ಬೆಳೆಸಿದ್ದಾರೆ' ಎಂದು ಯುವತಿ ದೂರಿದ್ದಾರೆ.

'ನನ್ನ ಪಾಲಕರು ಮದುವೆ ಸಂಬಂಧ ಮಾತನಾಡಲು ಹೋದಾಗ ಚವಾಣ್ ಕುಟುಂಬದವರು ಅವರೊಂದಿಗೆ ಜಗಳವಾಡಿದ್ದಾರೆ. ದೂರು ಕೊಡಲು ಹೋದರೆ ಪೊಲೀಸರು ಸ್ವೀಕರಿಸಿಲ್ಲ. ನನ್ನ ಹಾಗೂ ನನ್ನ ಕುಟುಂಬಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದ್ದಾರೆ.

'ವೈಯಕ್ತಿಕ ಮಾನಹಾನಿಗೆ ಷಡ್ಯಂತ್ರ'



ಪ್ರಭು ಚವಾಣ್

'ನನ್ನನ್ನು ಚುನಾವಣೆಯಲ್ಲಿ ಸೋಲಿಸಲು ಸಫಲರಾಗದವರು ನನ್ನ ಹಾಗೂ ಕುಟುಂಬದ ವೈಯಕ್ತಿಕ ಮಾನಹಾನಿಗೆ ಷಡ್ಯಂತ್ರ ನಡೆಸಿದ್ದಾರೆ. ನಾನು ನಾಲ್ಕು ಬಾರಿ ಶಾಸಕನಾಗಿರುವುದನ್ನು ಕೆಲವರಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ' ಎಂದು ಶಾಸಕ ಪ್ರಭು ಚವಾಣ್ ಪ್ರತಿಕ್ರಿಯಿಸಿದ್ದಾರೆ.

'ನಿಶ್ಚಿತಾರ್ಥ ವಿಷಯ ಉಭಯ ಕುಟುಂಬದವರು ಕುಳಿತು ಬಗೆಹರಿಸಿಕೊಂಡಿದ್ದೇವೆ. ಆದರೆ, ಕೆಲವರು ಅವರನ್ನು ಎತ್ತಿ ಕಟ್ಟುತ್ತಿದ್ದಾರೆ. ಅವರನ್ನು ಬೆಂಗಳೂರಿನ ತನಕ ಕರೆದೊಯ್ದು ದೂರು ಕೊಡಿಸಿದ್ದಾರೆ. ನಾನು ಯಾವುದೇ ತಪ್ಪು ಮಾಡಿಲ್ಲ. ಕಾನೂನಿನ ಮೂಲಕ ಇದನ್ನು ಎದುರಿಸುತ್ತೇನೆ' ಎಂದು ತಿಳಿಸಿದ್ದಾರೆ.

ವರದಿ ನೀಡಲು ಎಸ್.ಪಿಗೆ ಸೂಚನೆ

ಬೆಂಗಳೂರು: ಪ್ರತೀಕ್ ಚವಾಣ್ ಹಾಗೂ ಕುಟುಂಬ ಸದಸ್ಯರ ವಿರುದ್ಧ ಮಹಾರಾಷ್ಟ್ರದ ದೇಗಲೂರ ತಾಲ್ಲೂಕಿನ ಸೇವಾದಾಸ ನಗರ ತಾಂಡಾದ ಯುವತಿಯೊಬ್ಬರು ನೀಡಿರುವ ದೂರು ಸಂಬಂಧ ಕಾನೂನು ಕ್ರಮ ಜರುಗಿಸಿ, ಕೈಗೊಂಡ ವರದಿಯನ್ನು ಹದಿನೈದು ದಿನದೊಳಗೆ ಸಲ್ಲಿಸುವಂತೆ ಬೀದರ್ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಮಹಿಳೆ ಮತ್ತು ಅವರ ಕುಟುಂಬದವರು ನನ್ನನ್ನು ಭೇಟಿ ಮಾಡಿ, ದೂರು ನೀಡಿದ್ದಾರೆ. ಮದುವೆಯಾಗುವುದಾಗಿ ನಂಬಿಸಿ, ಯುವಕ ವಂಚನೆ ಮಾಡಿದ್ದಾನೆ ಎಂದು ಆರೋಪಿಸಿದ್ದಾರೆ. ಅರ್ಜಿಯನ್ನು ನಿಯಮಾನುಸಾರ ಪರಿಶೀಲಿಸಿ, ಯುವತಿಗೆ ಸೂಕ್ತ ರಕ್ಷಣೆ ನೀಡುವಂತೆ ಎಸ್.ಪಿಗೆ ಪತ್ರ ಬರೆಯಲಾಗಿದೆ' ಎಂದು ಹೇಳಿದರು.

40 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್

ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಯಿಂದ ತೀವ್ರ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಹೊತ್ತ ಇ–ಮೇಲ್‌ಗಳು ಬರುತ್ತಿರುವುದು ಮುಂದುವರಿದಿದ್ದು, ನಗರದ 40ಕ್ಕೂ ಅಧಿಕ ಶಾಲೆಗಳಿಗೆ ಶುಕ್ರವಾರ ಬೆಳಿಗ್ಗೆ ಇದೇ ರೀತಿಯ ಇ–ಮೇಲ್ ಬಂದು ಆತಂಕ ಸೃಷ್ಟಿಯಾಗಿತ್ತು.

ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಬೆದರಿಕೆ ಸಂದೇಶ ಬಂದಿದ್ದ ಶಾಲೆಗಳಲ್ಲಿ ಪರಿಶೀಲಿಸಿದಾಗ ಯಾವುದೇ ಸ್ಫೋಟಕ ವಸ್ತುಗಳು ಪತ್ತೆ ಆಗಲಿಲ್ಲ. ಬಳಿಕ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಶಾಲಾ ಆಡಳಿತ ಮಂಡಳಿ ಸದಸ್ಯರು ನಿಟ್ಟುಸಿರು ಬಿಟ್ಟರು.

ನಗರದ ಭಾರತೀನಗರ, ಕಬ್ಬನ್‌ಪಾರ್ಕ್, ಆರ್.ಆರ್. ನಗರ, ಚಾಮರಾಜಪೇಟೆ, ಹೆಣ್ಣೂರು, ಶ್ರೀರಾಮಪುರ, ರಾಮಮೂರ್ತಿನಗರ, ಕೆಂಗೇರಿ ಸೇರಿದಂತೆ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು ಎಂದು ಪೊಲೀಸರು ಹೇಳಿದರು.

ಎಂ.ಎಸ್.ಧೋನಿ ಗ್ಲೋಬಲ್ ಸ್ಕೂಲ್, ಸೇಂಟ್ ಜರ್ಮೈನ್ ಅಕಾಡೆಮಿ ಸ್ಕೂಲ್ ಸೇರಿದಂತೆ 40 ಖಾಸಗಿ ಶಾಲೆಗಳಲ್ಲಿ ಶುಕ್ರವಾರ ಬೆಳಿಗ್ಗೆ ಎಂದಿನಂತೆ ಶಾಲಾ ಆಡಳಿತ ಮಂಡಳಿಯ ಸಿಬ್ಬಂದಿ ಇ-ಮೇಲ್ ಪರಿಶೀಲಿಸಿದಾಗ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ಕಂಡುಬಂದಿತ್ತು. ಆಯಾ ಶಾಲಾ ಶಿಕ್ಷಕರು, ಸಿಬ್ಬಂದಿ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸುದ್ದಿ ಹರಡುತ್ತಿದ್ದಂತೆ ಭಯಭೀತರಾದ ಪಾಲಕರು ಕೂಡಲೇ ಶಾಲೆಗಳಿಗೆ ತೆರಳಿ ಮಾಹಿತಿ ಪಡೆದುಕೊಂಡರು. ಕೆಲವು ಪೋಷಕರು ಆತಂಕದಿಂದ ಮಕ್ಕಳನ್ನು ಮನೆಗೆ ಕರೆದೊಯ್ದರು.

‘ಶಾಲಾ ಸಿಬ್ಬಂದಿ ನೀಡಿದ ಮಾಹಿತಿ ಮೇರೆಗೆ ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸರಿಂದ ತನಿಖೆ ಚುರುಕು: ಯಾವ ಸ್ಥಳದಿಂದ, ಯಾರು ಇ–ಮೇಲ್ ಬೆದರಿಕೆ ಸಂದೇಶ ಕಳುಹಿಸಿದ್ದಾರೆ ಎಂಬುದರ ಕುರಿತು ಪೊಲೀಸರು ತಾಂತ್ರಿಕವಾಗಿ ಪರಿಶೀಲನೆ ನಡೆಸುತ್ತಿದ್ದಾರೆ.

‘ಪ್ರಾಥಮಿಕ ತನಿಖೆಯಂತೆ ಇ–ಮೇಲ್ ಡೊಮೈನ್ ಬ್ರಿಟಿಷ್ ಇಂಡಿಯನ್ ಓಷನ್ ಟೆರಿಟರಿ ಮೂಲದ್ದಾಗಿದೆ ಎಂಬುದು ಕಂಡುಬಂದಿದೆ. ಆದರೆ, ಆರೋಪಿಗಳ ಸುಳಿವು ಸಿಕ್ಕಿಲ್ಲ. ಬೆದರಿಕೆ ಬಂದಿರುವ ಶಾಲೆಗಳಲ್ಲಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬೆಳಿಗ್ಗೆ 7.45ರಲ್ಲಿ ಬೆದರಿಕೆಯ ಇ–ಮೇಲ್ ಸಂದೇಶ ಬಂದಿದೆ. ಕೂಡಲೇ ನಾವು ಪೊಲೀಸರಿಗೆ ಮಾಹಿತಿ ನೀಡಿದ್ದೇವೆ. ಪೊಲೀಸರು ಬಂದು ತಪಾಸಣೆ ಮಾಡಿದ್ದಾರೆ. ಯಾವುದೇ ಸ್ಫೋಟಕಗಳು ಪತ್ತೆಯಾಗಿಲ್ಲ. ಯಾರೋ ಮಾನಸಿಕವಾಗಿ ತೊಂದರೆಗೆ ಒಳಗಾದ ವ್ಯಕ್ತಿ ಇ–ಮೇಲ್ ಮಾಡಿರುವಂತೆ ಕಾಣಿಸುತ್ತಿದೆ’ ಎಂದು ಶಾಲೆಯೊಂದರ ಪ್ರಾಂಶುಪಾಲರು ಹೇಳಿದರು.

2024ರಲ್ಲೂ ಕೆಲವು ಶಾಲೆಗಳಿಗೆ ಬೆದರಿಕೆಯ ಇ–ಮೇಲ್ ಸಂದೇಶಗಳು ಬಂದಿದ್ದವು. 2023ರ ಡಿಸೆಂಬರ್‌ನಲ್ಲೂ ಇದೇ ಮಾದರಿಯಲ್ಲಿ ಬೆಂಗಳೂರಿನ 15 ಶಾಲೆಗಳಿಗೆ ಬಾಂಬ್ ಇಟ್ಟಿರುವುದಾಗಿ ದುಷ್ಕರ್ಮಿಗಳು ಸಂದೇಶ ಕಳುಹಿಸಿ ಆತಂಕ ಸೃಷ್ಟಿಸಿದ್ದರು.

ಮೇಲ್‌ನಲ್ಲಿ ಏನಿತ್ತು?

‘ಕಪ್ಪು ಬಣ್ಣದ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಸ್ಫೋಟಕ ತುಂಬಿ ಶಾಲಾ ತರಗತಿಗಳಲ್ಲಿ ಇರಿಸಲಾಗಿದೆ. ನನಗೆ ನಿಜಕ್ಕೂ ಜೀವನವೇ ಇಷ್ಟವಿಲ್ಲ. ನಾನೂ ಆತ್ಮಹತ್ಯೆಗೆ ಶರಣಾಗುತ್ತೇನೆ. ದಯವಿಟ್ಟು ಇ–ಮೇಲ್ ಸಂದೇಶದ ಪ್ರತಿಯನ್ನು ಮಾಧ್ಯಮಗಳಿಗೆ ನೀಡಿ’ ಎಂದು ರೋಡ್‌ಕಿಲ್ ಎಂಬ ಹೆಸರಿನೊಂದಿಗೆ ಇ-ಮೇಲ್‌ನಲ್ಲಿ ಬರೆಯಲಾಗಿತ್ತು.



ನಗರದ ಸೇಂಟ್ ಜರ್ಮೈನ್ ಅಕಾಡೆಮಿ ಸ್ಕೂಲ್‌ನಲ್ಲಿ ಪರಿಶೀಲನೆ ನಡೆಸಿದ ಪೊಲೀಸರು ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್

ಕಿಡಿಗೇಡಿಗಳ ಬಂಧನ: ಜಿ.ಪರಮೇಶ್ವರ

‘ಕಳೆದ ಬಾರಿ ಸಹ ಹಲವು ಶಾಲೆಗಳಿಗೆ ಬೆದರಿಕೆ ಇ-ಮೇಲ್ ಬಂದಿತ್ತು. ಯಾವುದನ್ನೂ ನಿರ್ಲಕ್ಷಿಸಲು ಆಗುವುದಿಲ್ಲ. ಈಗ ಬಂದಿರುವ ಇ-ಮೇಲ್‌ಗಳನ್ನು ಬೆಂಗಳೂರು ನಗರ ಪೊಲೀಸರು ಪರಿಶೀಲನೆ ನಡೆಸುತ್ತಾರೆ. ಕಿಡಿಗೇಡಿಗಳನ್ನು ಬಂಧಿಸಿ, ಕ್ರಮ ಕೈಗೊಳ್ಳುತ್ತಾರೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಕನ್ನಡಿಗರಿಗೆ ಅವಮಾನ: ಆರೋಪಿ ಸೆರೆ

ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಗೂ ಕನ್ನಡಿಗರನ್ನು ಅವಮಾನಿಸಿದ ಆರೋಪದ ಅಡಿ ಪಶ್ಚಿಮ ಬಂಗಾಳದ ಮಿಥುನ್ ಸರ್ಕಾರ್ ಎಂಬಾತನನ್ನು ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಆರೋಪಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ.



ಮಿಥುನ್

ಆರೋಪಿ ಹೊಂಗಸಂದ್ರದಲ್ಲಿ ಮಸಾಜ್ ಥೆರಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಟ್ಟ ಶಬ್ದಗಳಿಂದ ನಿಂದಿಸಿ ಕನ್ನಡಿಗರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾನೆ. ಕನ್ನಡ ಹಾಗೂ ಇತರೆ ಭಾಷಿಕರ ನಡುವೆ ದ್ವೇಷ ಭಾವನೆ ಮೂಡುವಂತೆ ಮಾತನಾಡಿದ್ದಾನೆ’ ಎಂದು ಆರೋಪಿಸಿ ರಂಜಿತ್ ಅವರು ದೂರು ನೀಡಿದ್ದರು.

ದೂರಿನ ಜತೆಗೆ ಆಡಿಯೊ ತುಣುಕು, ಆರೋಪಿಯ ವಿಳಾಸವನ್ನೂ ಡೆಲಿವರಿ ಎಕ್ಸಿಕ್ಯುಟಿವ್ ನೀಡಿದ್ದರು. ಆರೋಪಿಯ ಫೋನ್ ನಂಬರ್ ಆಧರಿಸಿ ಆತನನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮಿಥುನ್ ಸರ್ಕಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಕರ್ನಾಟಕ ರಕ್ಷಣಾ ವೇದಿಕೆಯ(ಪ್ರವೀಣ್ ಶೆಟ್ಟಿ ಬಣ) ಕಾರ್ಯಕರ್ತರು ಸಹ ಬೊಮ್ಮನಹಳ್ಳಿ ಠಾಣೆಗೆ ದೂರು ನೀಡಿದ್ದರು.



ಕನ್ನಡಿಗರನ್ನು ಅವಮಾನಿಸಿದ ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮನವಿ ಸಲ್ಲಿಸಿದ್ದ ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು

‘ಆರೋಪಿ ಮಿಥುನ್ ಸರ್ಕಾರ್ ಆರ್ಡರ್ ಮಾಡಿದ್ದ ಟಿ-ಶರ್ಟ್ ನೀಡಲು ಜುಲೈ 17ರಂದು ರಾತ್ರಿ 9.30ಕ್ಕೆ ಡೆಲಿವರಿ ಎಕ್ಸಿಕ್ಯೂಟಿವ್ ರಂಜಿತ್ ಬಂದಿದ್ದರು. ಆ ವೇಳೆ ಮಿಥುನ್ ಹಾಗೂ ರಂಜಿತ್ ನಡುವೆ ಗಲಾಟೆ ನಡೆದಿತ್ತು. ನಾವು ಶೇ 70ರಷ್ಟು ಹಿಂದಿಯವರು ಕರ್ನಾಟಕದಲ್ಲಿದ್ದೇವೆ. ನಿಮ್ಮದು ಅತಿಯಾಗಿದೆ. ನಾವು ಇಲ್ಲಿಂದ ಹೋದರೆ ಕನ್ನಡದವರಿಗೆ ಟೊಮೆಟೊ ಖರೀದಿಸುವುದಕ್ಕೂ ₹10 ಇರುವುದಿಲ್ಲ. ಬಂಗಾಳಿಗಳ ಮಾಡುವ ಊಟವನ್ನು ನೀವು ಕಲ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ರಾಗಿ ಮುದ್ದೆ, ಇಡ್ಲಿ, ದೋಸೆ, ವಾರಕ್ಕೆ ಒಮ್ಮೆ ಚಿಕನ್ ತಿನ್ನುತ್ತೀರಿ ಅಷ್ಟೇ. ನನ್ನ ಕಾಲ್ ರೆಕಾರ್ಡ್ ಮಾಡಿಕೋ... ನನ್ನ ಫೋನ್ ನಂಬರ್ ತೆಗೆದುಕೊ ಎಂಬುದಾಗಿ ಮಿಥುನ್ ಸರ್ಕಾರ್ ಧಮ್ಕಿ ಹಾಕಿದ್ದ’ ಎಂದು ಕನ್ನಡ ರಕ್ಷಣಾ ವೇದಿಕೆ ಸದಸ್ಯರು ಆರೋಪಿಸಿದ್ದರು.

ಬಸ್ ಚಲಾಯಿಸಿದ ನಿರ್ವಾಹಕ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪೀಣ್ಯ ಎರಡನೇ ಹಂತದ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರಿಗೆ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವಿಗೀಡಾಗಿ, ನಾಲ್ವರು ಗಾಯಗೊಂಡಿದ್ದಾರೆ.



ಸುಮಾ

ಮಂಡ್ಯದ ಸುಮಾ (25) ಮೃತಪಟ್ಟವರು. ಅವರು ಸುಂಕದಕಟ್ಟೆಯಲ್ಲಿ ವಾಸವಾಗಿದ್ದರು.

ಹೆಬ್ಬಾಳದ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಉದ್ಯೋಗಿ ಆಗಿದ್ದ ಸುಮಾ, ಶುಕ್ರವಾರ ಬೆಳಿಗ್ಗೆ ಕೆಲಸಕ್ಕೆ ಹೋಗಲು ಪೀಣ್ಯ 2ನೇ ಹಂತದ ಬಸ್ ನಿಲ್ದಾಣಕ್ಕೆ ಬಂದಿದ್ದರು. ಅದೇ ಸ್ಥಳದಲ್ಲಿ ಇನ್ನೂ ಹಲವರು ಬಸ್‌ಗಾಗಿ ಕಾಯುತ್ತಿದ್ದರು.

ಬೆಳಿಗ್ಗೆ 8.15ರ ಸುಮಾರಿನಲ್ಲಿ ನಿಲ್ದಾಣಕ್ಕೆ ಬರುತ್ತಿದ್ದ ಬಿಎಂಟಿಸಿ ಬಸ್ ನಿಯಂತ್ರಣ ತಪ್ಪಿ, ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರಿಗೆ ಡಿಕ್ಕಿ ಹೊಡೆಯಿತು. ರಸ್ತೆ ಬದಿಯಲ್ಲಿದ್ದ ಕ್ಯಾಂಟೀನ್‌ಗೂ ಡಿಕ್ಕಿ ಹೊಡೆದ ಪರಿಣಾಮ ಐದು ಮಂದಿ ಗಾಯಗೊಂಡರು. ಸುಮಾ ಗಂಭೀರವಾಗಿ ಗಾಯಗೊಂಡು, ಆಸ್ಪತ್ರೆಯಲ್ಲಿ ಮೃತಪಟ್ಟರು. ಮೂವರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಮತ್ತೊಬ್ಬರು ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ.

ಬಸ್ ಚಾಲಕ ಶೌಚಾಲಯಕ್ಕೆ ಹೋಗಿದ್ದರು. ಆ ಸಂದರ್ಭದಲ್ಲಿ ಹಿಂದೆ ಬೇರೆ ಬಸ್‌ಗಳು ಬಂದು ಜಾಮ್ ಆಗುತ್ತದೆ ಎಂದು ನಿರ್ವಾಹಕನೇ ಬಸ್ ಅನ್ನು ಸ್ವಲ್ಪ ಮುಂದೆ ನಿಲ್ಲಿಸಲು ಚಾಲನೆ ಮಾಡಿದ್ದರು. ಆಗ ಬಸ್ ನಿಯಂತ್ರಣಕ್ಕೆ ಸಿಗದೆ ಫುಟ್‌ಪಾತ್ ಮೇಲೆ ಹತ್ತಿದ್ದರಿಂದ ಅಪಘಾತವಾಗಿದೆ ಎಂದು ಸ್ಥಳೀಯರು ಆರೋಪಿಸಿದರು. ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆತಡೆ: ಬಿಎಂಟಿಸಿ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಾಗರಿಕರು ರಸ್ತೆತಡೆ ನಡೆಸಿದರು.

ಟಾಟಾ ಮೊಬಿಲಿಟಿ ಲಿಮಿಟೆಡ್ ಸಂಸ್ಥೆಗೆ ಸೇರಿದ ಬಸ್ ಅಪಘಾತಕ್ಕೀಡಾಗಿದೆ. ಕ್ಯಾಂಟೀನ್‌ಗೆ ಡಿಕ್ಕಿ ಹೊಡೆದ ಪರಿಣಾಮ, ಯುವತಿ ಮೃತಪಟ್ಟಿದ್ದಾರೆ. ಅಪಘಾತದ ಸ್ಥಳಕ್ಕೆ ಈಶಾನ್ಯ ವಲಯದ ವಿಭಾಗೀಯ ನಿಯಂತ್ರಣಾಧಿಕಾರಿ, ವಿಭಾಗೀಯ ಸಂಚಾರ ಅಧಿಕಾರಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಘಟನೆ ಬಗ್ಗೆ ತನಿಖೆ ನಡೆಸಲಾಗುವುದು. ಗಾಯಾಳುಗಳ ಚಿಕಿತ್ಸೆಗೆ ಕ್ರಮ ವಹಿಸಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



ಬಿಎಂಟಿಸಿ ಬಸ್ ಚಾಲಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಾರ್ವಜನಿಕರು ರಸ್ತೆ ತಡೆದರು

ನಿರ್ವಾಹಕ ರಮೇಶ್ ಬಂಧನ

ನಿರ್ವಾಹಕ ರಮೇಶ್‌ರ ಬೇಜವಾಬ್ದಾರಿಯೇ ಅಪಘಾತಕ್ಕೆ ಕಾರಣ. ಅವರಿಗೆ ವಿದ್ಯುತ್ ಚಾಲಿತ ಬಸ್ ಚಾಲನೆ ಮಾಡಿ ಅಭ್ಯಾಸ ಇರಲಿಲ್ಲ. ಆದರೂ ಅವರು ಇದೇ ಮೊದಲ ಬಾರಿಗೆ ಇ.ವಿ ಬಸ್ ಚಾಲನೆ ಮಾಡಲು ಹೋಗಿ ಅಚಾತುರ್ಯ ನಡೆದಿದೆ. 22ನೇ ಡಿಪೊ ಸೇರಿದ ಬಸ್, ಪೀಣ್ಯದಿಂದ ಮೆಜೆಸ್ಟಿಕ್‌ಗೆ ಹೋಗುತ್ತಿತ್ತು. ರಮೇಶ್‌ನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ.

ಬೆಟ್ಟಿಂಗ್‌ಗೆ ಸಾಲ: ಸೆಲ್ಫಿ ವಿಡಿಯೊ ಮಾಡಿ ಅಳಲು ತೋಡಿಕೊಂಡಿದ್ದ ವ್ಯಕ್ತಿ

ಬ್ಯಾಂಕ್ ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ಯಾಂಕ್‌ನಲ್ಲಿಯೇ ಸಾಲ ಪಡೆದು ಬೆಟ್ಟಿಂಗ್‌ಗೆ ಬಳಕೆ
- ಸಿಬ್ಬಂದಿಯಿಂದಲೇ ಸಾಲ ಪಡೆಯಲು ಪ್ರಚೋದನೆ: ದೂರು

ಅಪರಾಧ ಸುದ್ದಿ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್‌ನಿಂದ ಹಣ ಕಳೆದುಕೊಂಡಿದ್ದ ಬ್ಯಾಂಕ್ ಉದ್ಯೋಗಿ ಸೆಲ್ಫಿ ವಿಡಿಯೊ ಮಾಡಿ ಇಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಆರ್.ಆರ್.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಂಗಾರಪ್ಪ ನಗರದಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಮನೋಜ್ ಕುಮಾರ್ (25) ಆತ್ಮಹತ್ಯೆ ಮಾಡಿಕೊಂಡ ಉದ್ಯೋಗಿ.

ತಮ್ಮ ಮನೆಯ ಕೊಠಡಿಯಲ್ಲಿದ್ದ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರ ತಂದೆ ಲೋಕೇಶ್ ಅವರು ನೀಡಿದ ದೂರು ಆಧರಿಸಿ ಪೊಲೀಸರು ಯುಡಿಆರ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

30 ವರ್ಷಗಳಿಂದ ಬಂಗಾರಪ್ಪ ನಗರದಲ್ಲಿ ಲೋಕೇಶ್ ಕುಟುಂಬವು ನೆಲಸಿತ್ತು. ಬ್ಯಾಂಕ್‌ವೊಂದರಲ್ಲಿ ಮನೋಜ್ ಕೆಲಸ ಮಾಡುತ್ತಿದ್ದರು. ಕೆಲಸ ಮಾಡುತ್ತಿದ್ದ ಬ್ಯಾಂಕ್‌ನಲ್ಲೇ ಸಾಲ ಪಡೆದು ಆನ್‌ಲೈನ್ ಬೆಟ್ಟಿಂಗ್‌ಗೆ ಬಳಸಿದ್ದರು. ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದರು. ಸಾಲದ ಒತ್ತಡ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

'ಆತ್ಮ ಹತ್ಯೆಗೂ ಮುನ್ನ ಮನೋಜ್ ಕುಮಾರ್ ಅವರು ಸೆಲ್ಫಿ ವಿಡಿಯೊ ಮಾಡಿ ಅಳಲು ತೋಡಿಕೊಂಡಿದ್ದಾರೆ. ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವಂತೆ ಪ್ರೇರೇಪಿಸಿ ಬೆಟ್ಟಿಂಗ್ ಆ್ಯಪ್‌ನಲ್ಲಿ ಹೂಡಿಕೆ ಮಾಡುವಂತೆ ಬ್ಯಾಂಕ್‌ನ ಇಬ್ಬರು ಪ್ರಚೋದಿಸಿದ್ದರು. ಇದರಿಂದ ಬೆಟ್ಟಿಂಗ್ ಆಡಿ ಹಣ ಕಳೆದುಕೊಂಡಿದ್ದೇನೆ. ಈಗ ನನಗೆ ಯಾರೂ ನೆರವಿಗೆ ಬರುತ್ತಿಲ್ಲ' ಎಂದು ಹೇಳಿಕೊಂಡಿದ್ದಾರೆ. ಆ ವಿಡಿಯೊವನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ವಿಡಿಯೊದಲ್ಲಿ ಪ್ರಸ್ತಾಪವಾಗಿರುವ ಹೆಸರಿನ ವ್ಯಕ್ತಿಗಳನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗುವುದು. ಪ್ರಚೋದನೆ ನೀಡಿದ್ದು ಕಂಡುಬಂದರೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿ.ಎಸ್‌ಸಿ ವಿದ್ಯಾರ್ಥಿನಿ ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯಲ್ಲಿ ಟ್ರ್ಯಾಕ್ಟರ್ ಮತ್ತು ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಯಲಹಂಕ ನಿವಾಸಿಯಾದ ಕಾಲೇಜು ವಿದ್ಯಾರ್ಥಿನಿ ಎಂ.ಲಕ್ಷ್ಮಿ (21) ಮೃತಪಟ್ಟಿದ್ದಾರೆ.

ಬಿಎಸ್‌ಸಿ ನಾಲ್ಕನೇ ಸೆಮಿಸ್ಟರ್ ಓದುತ್ತಿದ್ದ ಅವರು ಗೆಳತಿ ಸಿಂಚನಾ ಜತೆ ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ಸಿಂಚನಾ ಅವರ ದ್ವಿಚಕ್ರ ವಾಹನಕ್ಕೆ ಟ್ರ್ಯಾಕ್ಟರ್ ಹಿಂದಿನಿಂದ ಡಿಕ್ಕಿ ಹೊಡೆಯಿತು. ಈ ವೇಳೆ ಸಿಂಚನಾ ಮತ್ತು ಲಕ್ಷ್ಮಿ ನಿಯಂತ್ರಣ ತಪ್ಪಿ ಕೆಳಗೆ ಬಿದ್ದರು. ತೀವ್ರವಾಗಿ ಗಾಯಗೊಂಡ ಲಕ್ಷ್ಮಿ ಸ್ಥಳದಲ್ಲೇ ಮೃತಪಟ್ಟರು. ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದ ಸಿಂಚನಾ ಅವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಟ್ರ್ಯಾಕ್ಟರ್ ಚಾಲಕನ ಅಜಾಗರೂಕತೆ ಹಾಗೂ ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ. ಆತನನ್ನು ಬಂಧಿಸಿ ಟ್ರ್ಯಾಕ್ಟರ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಸಂಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

29ರಿಂದ ಸಾರಿಗೆ ನೌಕರರ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ನೀಡುವ ವೇತನ ಮತ್ತಿತರ ಸೌಲಭ್ಯಗಳನ್ನು ಸಾರಿಗೆ ನೌಕರರಿಗೂ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ನಾಲ್ಕು ನಿಗಮಗಳ ಸಂಘಟನೆಗಳ ಒಕ್ಕೂಟ ಇದೇ 29ರಿಂದ ಉಪವಾಸ ಸತ್ಯಾಗ್ರಹಕ್ಕೆ ಕರೆ ನೀಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪರವಾಗಿ ಮಾತನಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಆರ್. ಚಂದ್ರಶೇಖರ್, 'ಏಳನೇ ವೇತನ ಆಯೋಗದ ಅನ್ವಯ ಸರ್ಕಾರಿ ನೌಕರರಿಗೆ ನೀಡುತ್ತಿರುವ ವೇತನವನ್ನು, 2024ರ ಜ.1ರಿಂದ ಅನ್ವಯವಾಗುವಂತೆ ಸಾರಿಗೆ ನೌಕರರಿಗೂ ನೀಡಬೇಕು. ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಸಾರಿಗೆ ನೌಕರರಿಗೆ ಈ ಬಗ್ಗೆ ಭರವಸೆ ನೀಡಿತ್ತು. ಆದ್ದರಿಂದ ನಾವು ಪಕ್ಷವನ್ನು ಬೆಂಬಲಿಸಿದ್ದೆವು. ಆದರೆ, ಈಗ ಭರವಸೆಯನ್ನು ಈಡೇರಿಸುತ್ತಿಲ್ಲ. ಆದ್ದರಿಂದ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗುತ್ತಿದೆ. 29ರಂದು ಸ್ವಾತಂತ್ರ್ಯ ಉದ್ಯಾನ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಮುಷ್ಕರ ನಡೆಸಲಾಗುತ್ತದೆ' ಎಂದು ಹೇಳಿದರು.

'29ರೊಳಗೆ ಸರ್ಕಾರ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ಹೋರಾಟದ ಬಗ್ಗೆ ಸಭೆ ನಡೆಸಿ, ನಿರ್ಧರಿಸಲಾಗುತ್ತದೆ. ಸಾರಿಗೆ ನೌಕರರಿಗೆ 2020ರ ಜ.1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಲಾಗಿದ್ದು, 38 ತಿಂಗಳ ಹಿಂಬಾಕಿಯನ್ನು ನೀಡಬೇಕು' ಎಂದು ಆಗ್ರಹಿಸಿದರು.

'ಸಾರಿಗೆ ಸಂಸ್ಥೆಗಳಲ್ಲಿ ಸಂಘಗಳ ಮಾನ್ಯತೆ ಪ್ರಶ್ನೆ ಎದುರಾಗಿದ್ದು, ಕಾರ್ಮಿಕ ಸಂಘಟನೆಗಳ ಚುನಾವಣೆಯನ್ನು ಕೂಡಲೇ ಘೋಷಿಸಬೇಕು. 2020 ಮತ್ತು 2021ರಲ್ಲಿ ನಡೆದ ಮುಷ್ಕರದ ವೇಳೆ ನೌಕರರನ್ನು ವಜಾ ಮಾಡಲಾದ ಪ್ರಕರಣಗಳನ್ನು ರದ್ದುಪಡಿಸಬೇಕು' ಎಂದು ಒತ್ತಾಯಿಸಿದರು.

ಒಕ್ಕೂಟದ ಕಾನೂನು ಸಲಹೆಗಾರ ಕೆ.ಇ. ರಾಧಾಕೃಷ್ಣ, 'ಕಳೆದ ಒಂದೂವರೆ ವರ್ಷದಲ್ಲಿ ಕೆಎಸ್‌ಆರ್‌ಟಿಸಿ ಆದಾಯ ಹೆಚ್ಚಾಗಿದೆ. ಸಾರಿಗೆ ನೌಕರರಿಗೂ ಸರ್ಕಾರಿ ನೌಕರರಿಗೆ ನೀಡುವ ವೇತನ ಒದಗಿಸಿದಲ್ಲಿ ಹೆಚ್ಚುವರಿಯಾಗಿ ₹300 ಕೋಟಿ ಅಗತ್ಯ. ಇದು ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ಸಾರಿಗೆ ನೌಕರರದ್ದು ನ್ಯಾಯಯುತ ಬೇಡಿಕೆಯಾಗಿದೆ' ಎಂದು ಹೇಳಿದರು.

ಡಿಸಿಪಿ, ಎಸಿಪಿ, ಇನ್‌ಸ್ಪೆಕ್ಟರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ


ಎಂ.ಎ.ಸಲೀಂ

ಬೆಂಗಳೂರು: ಜೀವ ಬೆದರಿಕೆಯಿದೆ ಎಂದು ದೂರು ನೀಡಿದ ವ್ಯಕ್ತಿಗೆ ಯಾವುದೇ ರಕ್ಷಣೆ ನೀಡದೇ ನಿರ್ಲಕ್ಷ್ಯ ವಹಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರಿಗೆ ಹೋರಾಟಗಾರ ಕೆ.ಬಿ.ವೆಂಕಟಾಚಲಪತಿ ಅವರು ದೂರು ನೀಡಿದ್ದಾರೆ.

ಪೂರ್ವ ವಿಭಾಗದ ಡಿಸಿಪಿ ದೇವರಾಜ್, ಪುಲಿಕೇಶಿ ನಗರ ಉಪ ವಿಭಾಗದ ಎಸಿಪಿ ಸಿ.ಆರ್.ಗೀತಾ, ಭಾರತಿನಗರ ಪೊಲೀಸ್ ಇನ್‌ಸ್ಪೆಕ್ಟರ್ ಗೋವಿಂದರಾಜು, ಬಾಣಸವಾಡಿ ಉಪ ವಿಭಾಗದ ಎಸಿಪಿ ಉಮಾಶಂಕರ್, ರಾಮಮೂರ್ತಿನಗರ ಇನ್‌ಸ್ಪೆಕ್ಟರ್ ರಾಜಶೇಖರ್ ಮತ್ತು ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ ವಿರುದ್ಧ ಶಿವಪ್ರಕಾಶ್ ಕೊಲೆ ಪ್ರಕರಣದಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಕೋರಿದ್ದಾರೆ.

'ಜೀವ ಬೆದರಿಕೆಯಿದೆ ಎಂದು ಹೇಳಿ ಫೆಬ್ರುವರಿ 18ರಂದು ಶಿವಪ್ರಕಾಶ್ ಅವರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದರು. ಒಬ್ಬ ವ್ಯಕ್ತಿ ಜೀವ ಭಯವಿದೆ ಎಂದು ದೂರು ನೀಡಿದ್ದರೂ ಪೊಲೀಸ್ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕರ್ತವ್ಯ ಲೋಪ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಬಿಬಿಎಂಪಿ: ಜಾಹೀರಾತು ನೀತಿ ಜಾರಿ

ರಸ್ತೆಗಳಲ್ಲಿ ಜಾಹೀರಾತಿಗೆ ಅವಕಾಶ; ವಾರ್ಷಿಕ ₹500 ಕೋಟಿ ಆದಾಯ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಸಾರ್ವಜನಿಕ ಸ್ಥಳ, ರಸ್ತೆಗಳಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವ ಹೊಸ ಜಾಹೀರಾತು ನೀತಿ ಜಾರಿಯಾಗಿದೆ.

ರಸ್ತೆಯ ಅಗಲಕ್ಕೆ ಅನುಗುಣವಾಗಿ ಪ್ರತಿ 100 ಮೀಟರ್‌ಗೆ ಜಾಹೀರಾತು ಪ್ರದರ್ಶಿಸಬಹುದು. ಈ ಜಾಹೀರಾತುಗಳ ಉದ್ದ 40 ಅಡಿ ಮೀರುವಂತಿಲ್ಲ. ಆಯಾ ಪ್ರದೇಶದಲ್ಲಿ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಜಾಹೀರಾತು ಶುಲ್ಕವನ್ನು ನಿಗದಿಪಡಿಸಿ 'ಬಿಬಿಎಂಪಿ (ಜಾಹೀರಾತು) ಬೈ-ಲಾ 2024' ಅನ್ನು ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ರಸ್ತೆಗಳು, ವೃತ್ತಗಳು ಹಾಗೂ ಪ್ರದೇಶಗಳ ಮುಕ್ತ ಹರಾಜು ಅಥವಾ ಟೆಂಡರ್ ಅನ್ನು ಪ್ರತ್ಯೇಕ ಅಥವಾ ಲಾಟ್‌ಗಳಲ್ಲಿ ಒಟ್ಟುಗೂಡಿಸಿ ಪರವಾನಗಿ ನೀಡುವ ನಿರ್ಧಾರವನ್ನು ಬಿಬಿಎಂಪಿ ಮುಖ್ಯ ಆಯುಕ್ತರು ತೆಗೆದುಕೊಳ್ಳುತ್ತಾರೆ. ಹೊಸ ಜಾಹೀರಾತು ನೀತಿಯಿಂದ ವಾರ್ಷಿಕ ₹500 ಕೋಟಿ ಸಂಗ್ರಹಿಸುವ ನಿರೀಕ್ಷೆ ಇದೆ.

ಖಾಸಗಿ ಪ್ರದೇಶಕ್ಕೂ ಅನುಮತಿ: ಸರ್ಕಾರಿ ರಸ್ತೆ, ವೃತ್ತ, ಕಟ್ಟಡ, ನಿವೇಶನಗಳಲ್ಲದೆ ಖಾಸಗಿ ರಸ್ತೆ, ವಾಣಿಜ್ಯ ನಿವೇಶನ, ಕಟ್ಟಡಗಳಲ್ಲೂ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಮೆಟ್ರೊ ಕಂಬಗಳು, ನಿಲ್ದಾಣಗಳು, ಮೂಲ ಸೌಕರ್ಯಗಳ ತಾಣಗಳಲ್ಲಿ ಯಾರೇ ಜಾಹೀರಾತು ಪ್ರದರ್ಶಿಸಬೇಕಾದರೂ ಬಿಬಿಎಂಪಿ ಯಿಂದಲೇ ಗುತ್ತಿಗೆ ಪಡೆಯಬೇಕು.

ವಾಹನಗಳ ಜಾಹೀರಾತಿಗೆ ಶುಲ್ಕ: ಬಿಎಂಟಿಸಿ ಬಸ್‌ಗಳು, ಸರ್ಕಾರಿ, ಖಾಸಗಿ ಸಂಸ್ಥೆಗಳೂ ಸೇರಿದಂತೆ ಯಾವುದೇ ವಾಹನಗಳಲ್ಲಿ 'ಸಂಚಾರಿ ಜಾಹೀರಾತು'ಗಳನ್ನು ಪ್ರದರ್ಶಿಸಲು ಬಿಬಿಎಂಪಿಯಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು. ಪ್ರದರ್ಶನದ ಅವಧಿ, ಉದ್ದೇಶ, ವಾಹನ ಸಂಖ್ಯೆ, ವಾಹನಗಳ ಪಟ್ಟಿಯನ್ನು ನೀಡಿ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಳ್ಳಬೇಕು. ಜಾಹೀರಾತಿಗೆ ಅನುಗುಣವಾಗಿ ತೆರಿಗೆ ಲೆಕ್ಕಹಾಕಿ, ಮೊತ್ತವನ್ನು ಏಜೆನ್ಸಿಗೆ ಬಿಬಿಎಂಪಿ ತಿಳಿಸುತ್ತದೆ.



'ಬಿ' ಖಾತಾ ಆಸ್ತಿಯಲ್ಲಿದ್ದರೆ ಶೇ 100ರಷ್ಟು ದಂಡ

ವಸತಿ ಪ್ರದೇಶ, ಕಟ್ಟಡ ಎಂದು ಆಸ್ತಿ ತೆರಿಗೆ ಪಾವತಿಸುತ್ತಿರುವ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಿದರೆ, ಆಸ್ತಿ ತೆರಿಗೆಯ ಶೇ 10ರಷ್ಟು ಮೊತ್ತವನ್ನು ದಂಡ ಹಾಕಲಾಗುತ್ತದೆ. ಬಿ-ನೋಂದಣಿ ಆಸ್ತಿಯಲ್ಲಿ ಜಾಹೀರಾತು ಪ್ರದರ್ಶಿಸಿದರೆ ಆಸ್ತಿ ತೆರಿಗೆಯ ಶೇ 100ರಷ್ಟು ದಂಡವನ್ನು ಆಸ್ತಿ ಮಾಲೀಕರು ಪಾವತಿಸಬೇಕಾಗುತ್ತದೆ. ಆಸ್ತಿಗೆ ಯಾವುದೇ ರೀತಿಯ ಖಾತೆಯನ್ನು ಹೊಂದಿಲ್ಲದಿದ್ದರೆ, ಆಸ್ತಿ ತೆರಿಗೆಯ ಎರಡು ಪಟ್ಟು ಮೊತ್ತದ ದಂಡವನ್ನು ಮಾಲೀಕರು ಪಾವತಿಸಬೇಕು.

ಜಾಹೀರಾತಿಗೆ ಎಲ್ಲೆಲ್ಲಿ ಎಷ್ಟು ದರ?

ಕರ್ನಾಟಕ ನೋಂದಣಿ ಕಾಯ್ದೆ 1957ರ ಸೆಕ್ಷನ್ 45 ಬಿ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ದರದಂತೆ ಆಯಾ ರಸ್ತೆ, ಪ್ರದೇಶ, ವೃತ್ತಗಳಿಗೆ ಜಾಹೀರಾತು ಪ್ರದರ್ಶನಕ್ಕೆ ಪ್ರತಿ ತಿಂಗಳಿಗೆ ಶುಲ್ಕ ನಿಗದಿ ಮಾಡಲಾಗಿದೆ.

ಮಾರ್ಗಸೂಚಿ ದರ (ಪ್ರತಿ ಚದರಡಿ)	ಜಾಹೀರಾತು ಶುಲ್ಕ (ಪ್ರತಿ ಚದರಡಿಗೆ/ ಪ್ರತಿ ತಿಂಗಳಿಗೆ)
₹3,000ಕ್ಕಿಂತ ಕಡಿಮೆ	₹40
₹3,000ದಿಂದ ₹5,000	₹50
₹5,000ದಿಂದ ₹10,000	₹60
₹10,000ದಿಂದ ₹20,000	₹70
₹20,000ದಿಂದ ₹50,000	₹80
₹50,000ದಿಂದ ₹1 ಲಕ್ಷ	₹90
₹1 ಲಕ್ಷದಿಂದ ₹2 ಲಕ್ಷ	₹100
₹2 ಲಕ್ಷಕ್ಕೆ ಹೆಚ್ಚು	₹110

ಎಲ್ಲೆಲ್ಲಿ ಜಾಹೀರಾತಿಗೆ ಅವಕಾಶ ಇಲ್ಲ?

ಕುಮಾರಕೃಪಾ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತ, ರಾಜಭವನ ರಸ್ತೆ, ಹೈಗ್ರೌಂಡ್ಸ್‌ನಿಂದ ಮಿನ್ಸ್ಕ ಸ್ಕ್ವೇರ್, ಸ್ಯಾಂಕಿ ರಸ್ತೆ, ಹೈಗ್ರೌಂಡ್ಸ್‌ನಿಂದ ವಿಂಡ್ಸರ್ ಹಿಲ್ಡ್ ಸಿಗ್ನಲ್, ಅಂಬೇಡ್ಕರ್ ವೀಧಿ, ಕೆ.ಆರ್. ವೃತ್ತದಿಂದ ಇನ್‌ಫೆಂಟ್ರಿ ಜಂಕ್ಷನ್, ಪೋಸ್ಟ್ ಆಫೀಸ್ ರಸ್ತೆ, ಕೆ.ಆರ್. ವೃತ್ತದಿಂದ ಎಸ್‌ಬಿಐ ವೃತ್ತ (ಕೆ.ಜಿ ರಸ್ತೆ), ಚಾಲುಕ್ಯ ವೃತ್ತ, ಮಹಾರಾಣಿ ಕಾಲೇಜ್ ರಸ್ತೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್ ಆವರಣ, ನೃಪತುಂಗ ರಸ್ತೆ, ಕೆ.ಆರ್. ವೃತ್ತದಿಂದ ಪೊಲೀಸ್ ಕಾರ್ನರ್ ಜಂಕ್ಷನ್, ಪ್ಯಾಲೇಸ್ ರಸ್ತೆ, ಎಸ್‌ಬಿಐ ವೃತ್ತದಿಂದ ಚಾಲುಕ್ಯ ವೃತ್ತದವರೆಗಿನ ರಸ್ತೆಗಳಲ್ಲಿ ಯಾವುದೇ ವಿಧವಾದ ಜಾಹೀರಾತನ್ನು ಪ್ರದರ್ಶಿಸಲು ಅನುಮತಿ ಇರುವುದಿಲ್ಲ.

ಯಾವುದೇ ಪ್ರದೇಶದಲ್ಲಿ ವೈಯಕ್ತಿಕ ಜಾಹೀರಾತುಗಳನ್ನು ಹಾಕಲು ಮುಖ್ಯ ಆಯುಕ್ತರ ಲಿಖಿತ ಅನುಮತಿ ಪಡೆದುಕೊಳ್ಳಬೇಕು. ದೇವಾಲಯ, ಮಸೀದಿ, ಗುರುದ್ವಾರ, ಚರ್ಚ್ ಮತ್ತು ಇತರ ಧಾರ್ಮಿಕ ಸ್ಥಳಗಳಿಂದ ನೂರು ಮೀಟರ್ ಒಳಗೆ, ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, ಸಂವಹನ ಗೋಪುರ, ವಿಶ್ವ ಪಾರಂಪರಿಕ ತಾಣ, ರಾಷ್ಟ್ರೀಯ ಉದ್ಯಾನಗಳು, ಅರಣ್ಯ, ಜಲಮೂಲ, ಪ್ರಾದೇಶಿಕ ಪರಿಸರ ವ್ಯವಸ್ಥೆಗಳ ಅವಶೇಷಗಳ ಪ್ರದೇಶ, ಸ್ಮಾರಕ, ವಿದ್ಯುತ್ ಕಂಬಗಳಲ್ಲಿ ಜಾಹೀರಾತು ಪ್ರದರ್ಶನವನ್ನು ನಿಷೇಧಿಸಲಾಗಿದೆ.

ವಾಹನ ಚಾಲಕರ ಏಕಾಗ್ರತೆಗೆ ಭಂಗವನ್ನು ಉಂಟು ಮಾಡುವ ಜಾಹೀರಾತು, ಸಂಚಾರ ಸಿಗ್ನಲ್ ದೀಪಗಳ ಬಣ್ಣ, ನಗರದ ವಿರೂಪಕ್ಕೆ ಕಾರಣವಾಗಬಹುದಾದ ಭಿತ್ತಿಪತ್ರ, ಗೀಚುಬರಹ, ಮರದ ಮೇಲೆ ಅಂಟಿಸಲಾದ, ಮೊಳೆ ಹೊಡೆದ, ಕಟ್ಟಿದ, ಲಗತ್ತಿಸಿದ, ಜೋಡಿಸಿದ ಜಾಹೀರಾತನ್ನು ನಿಷೇಧಿಸಲಾಗಿದೆ. ನಿಯಾನ್- ಚಿಹ್ನೆಗಳನ್ನು ನಿಷೇಧಿಸಲಾಗಿದೆ. ಎಲ್‌ಇಡಿ ಪ್ರದರ್ಶನ ಅಥವಾ ಡಿಜಿಟಲ್ ವಿಡಿಯೊ ಜಾಹೀರಾತುಗಳಿಗೆ ಅನುಮತಿ ಇಲ್ಲ.

ವಿದ್ಯುತ್ ದರ ಪರಿಷ್ಕರಣೆ: ತಿದ್ದುಪಡಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಮಾರ್ಚ್‌ನಲ್ಲಿ ವಿದ್ಯುತ್ ದರ ಪರಿಷ್ಕರಣೆ ಮಾಡಿ ಹೊರಡಿಸಿರುವ ಆದೇಶಕ್ಕೆ ತಿದ್ದುಪಡಿ ತರುವಂತೆ ಕೋರಿ ವಿದ್ಯುತ್ ಸರಬರಾಜು ಕಂಪನಿಗಳು(ಎಸ್ಕಾಂ) ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆಇಆರ್‌ಸಿ) ಸ್ವೀಕರಿಸಿದೆ.

ಜುಲೈ 8ರಂದು ಕೆಇಆರ್‌ಸಿಗೆ ಸಲ್ಲಿಸಿರುವ ಅರ್ಜಿಯಲ್ಲಿ 'ಆದಾಯ ಕೊರತೆಯ ಅಂತರವನ್ನು ಕಡಿಮೆ ಮಾಡುವುದಕ್ಕಾಗಿ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ವಿದ್ಯುತ್ ಶುಲ್ಕವನ್ನು ಹೆಚ್ಚಿಸಿ, ಕೃಷಿ ಪಂಪ್‌ಸೆಟ್‌ಗಳ ದರವನ್ನು ಕಡಿತಗೊಳಿಸುವಂತೆ ಎಸ್ಕಾಂಗಳು ಕೋರಿವೆ.

ಆದೇಶ ತಿದ್ದುಪಡಿಗೆ ಸಲ್ಲಿಸಿರುವ ಪ್ರಸ್ತಾವ ಮತ್ತು ವಿವರಗಳ ಕುರಿತು ಸಾರ್ವಜನಿಕ ಪ್ರಕಟಣೆ ಹೊರಡಿಸುವಂತೆ ಕೆಇಆರ್‌ಸಿ ಎಸ್ಕಾಂಗಳಿಗೆ ತಿಳಿಸಿದೆ. ಸಾರ್ವಜನಿಕರು ಆಕ್ಷೇಪಣೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವಿರುತ್ತದೆ. ಅದರ ಆಧಾರದ ಮೇಲೆ ಕೆಇಆರ್‌ಸಿ ಅರ್ಜಿಯ ವಿಚಾರಣೆ ಕೈಗೆತ್ತಿಕೊಳ್ಳಲಿದೆ. ಸಾರ್ವಜನಿಕ ಪ್ರಕಟಣೆ ಹೊರಡಿಸಿದ ನಂತರ ಪ್ರಸ್ತಾವನೆಯನ್ನು ವಿರೋಧಿಸುವುದಾಗಿ ಕೈಗಾರಿಕೋದ್ಯಮಿಗಳು ತಿಳಿಸಿದ್ದಾರೆ.



'ಬೆಂಗಳೂರು ಗ್ರಾಮಾಂತರ ಜಿಲ್ಲೆ' ಹೆಸರನ್ನು ಬದಲಿಸದಂತೆ ಆಗ್ರಹಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಳಿವಿಗಾಗಿ ಹೋರಾಟ ಸಮಿತಿಯವರು ಪ್ರತಿಭಟಿಸಿದರು

'ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೆಸರು ಬದಲಿಸಲು ಬಿಡಲ್ಲ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ಅಭಿವೃದ್ಧಿಯ ಹೆಸರಲ್ಲಿ ಬೆಂಗಳೂರು ಗ್ರಾಮಾಂತರ' ಹೆಸರನ್ನು 'ಬೆಂಗಳೂರು ಉತ್ತರ ಜಿಲ್ಲೆ' ಎಂದು ಬದಲಿಸುವುದನ್ನು ವಿರೋಧಿಸಿ 'ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಳಿಸಿ ಹೋರಾಟ ಸಮಿತಿಯವರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರು 'ಉಳಿಸಿ ಉಳಿಸಿ ಗ್ರಾಮಾಂತರ ಉಳಿಸಿ' ಎಂದು ಘೋಷಣೆಗಳನ್ನು ಕೂಗುತ್ತ ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ತಹಶೀಲ್ದಾರ್ ಅವರಿಗೆ ಮನವಿಪತ್ರ ಸಲ್ಲಿಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಹೋರಾಟ ಸಮಿತಿ ಅಧ್ಯಕ್ಷ ಉಮೇಶ್ ಗೌಡ, 'ಪಟ್ಟಭದ್ರರು ತಮ್ಮ ಬೇನಾಮಿ ಆಸ್ತಿಗಳ ಮೌಲ್ಯ ಹೆಚ್ಚಿಸಿಕೊಳ್ಳಲು ಜಿಲ್ಲೆ ಹೆಸರು ಬದಲಿಸಲು ಹೊರಟಿದ್ದಾರೆ. ಅಭಿವೃದ್ಧಿ ಹೆಸರಲ್ಲಿ ಅನಗತ್ಯವಾಗಿ ಜಿಲ್ಲೆಯ ಹೆಸರು ಬದಲಿಸ ಕೂಡದು' ಎಂದು ಒತ್ತಾಯಿಸಿದರು.

ಉಪಾಧ್ಯಕ್ಷ ಬಿ.ನರಸಿಂಹಯ್ಯ ಮಾತನಾಡಿದರು.

'ಹೆಸರು ಬದಲಿಸುವ ಕುರಿತು ಯಾವುದೇ ಪ್ರಕಟಣೆ ನೀಡಿಲ್ಲ. ಸಾರ್ವಜನಿಕ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿಲ್ಲ. ಈ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವುದು' ಎಂದು ತಿಳಿಸಿದರು.

ಸಮಿತಿಯ ಮುಖಂಡರಾದ ಬಿ.ಎಂ. ಗಂಗಬೈಲಪ್ಪ, ಎಚ್.ಜಿ.ರಾಜು, ಎನ್. ಆರ್.ನಾಗರಾಜು, ಎ.ಕೇಶವಮೂರ್ತಿ, ಆನಂದ ಮೌರ್ಯ, ಡಿ.ಸಿದ್ದರಾಜು, ರಂಗಸ್ವಾಮಿ, ವೆಂಕಟೇಶ್ ಚೌಥಾಯಿ ಇತರರು ಪ್ರತಿಭಟನೆಯಲ್ಲಿದ್ದರು.

ಶಾಲೆಗಳಿಗೆ ಪುಸ್ತಕ ವಿತರಣೆ

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 'ನೂರು ಶಾಲೆಗಳಿಗೆ ನೂರು ಪುಸ್ತಕ' ಯೋಜನೆ ಹಮ್ಮಿಕೊಂಡಿದ್ದು, ಸರ್ಕಾರಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಗ್ರಂಥಾಲಯ ಗಳಿಗೆ ಈ ವರ್ಷ ಉಚಿತವಾಗಿ 10 ಸಾವಿರ ಪುಸ್ತಕಗಳನ್ನು ವಿತರಿಸಲು ಮುಂದಾಗಿದೆ.

ಯೋಜನೆಯಡಿ ಈಗಾಗಲೇ 9 ಜಿಲ್ಲೆಗಳ 900 ಸರ್ಕಾರಿ ಶಾಲೆಗಳಿಗೆ 90 ಸಾವಿರ ಪುಸ್ತಕಗಳನ್ನು ವಿತರಿಸಲಾಗಿದೆ. ಈ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ (ರಾಮನಗರ) ನೂರು ಸರ್ಕಾರಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆ.23ರಂದು ಪುಸ್ತಕ ವಿತರಣಾ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಕಾರ್ಯದರ್ಶಿ ಆರ್. ದೊಡ್ಡೇಗೌಡ ಮನವಿ ಮಾಡಿದ್ದಾರೆ.

ಒಂದು ಶೀರ್ಷಿಕೆಯ ನೂರು ಪ್ರತಿಗಳನ್ನು ಆರ್. ದೊಡ್ಡೇಗೌಡ, ಕಾರ್ಯದರ್ಶಿ, ನಿಡಸಾಲೆ ಪಿ. ವಿಜಯ್, ಸಾಹಿತ್ಯ ಸುಗ್ಗಿ, ನಂ.40, 3ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು -560072 ಈ ವಿಳಾಸಕ್ಕೆ ಕಳುಹಿಸಬೇಕು. ದೂರವಾಣಿ ಮೂಲಕ ಸಂಪರ್ಕಿಸಿದರೆ ಸಂಘದ ಪ್ರತಿನಿಧಿಗಳು ಬಂದು ಪುಸ್ತಕ ಸ್ವೀಕರಿಸುತ್ತಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ: 9448753991 ಅಥವಾ 9886249672

ನಗರದಲ್ಲಿ ಇಂದು

ರಾಮಕೃಷ್ಣ-ವಿವೇಕಾನಂದ ಚಳವಳಿಯ 125ನೇ ವರ್ಷಾಚರಣೆ ಮತ್ತು ಬೇಲೂರು ಮಠದ ರಜತ ಮಹೋತ್ಸವ ಸಂಭ್ರಮ: ಯಾತ್ರೆಗೆ ಚಾಲನೆ: ಸ್ವಾಮಿ ದಿವ್ಯಾನಂದ ಮಹಾರಾಜ್, ಭಜನೆ: ಬಿಸ್ವಜಿತ್ ಪೌಲ್, ಉಪನ್ಯಾಸ: ಸ್ವಾಮಿ ನಿತ್ಯಸ್ಥಾನಂದ ಮಹಾರಾಜ್, ಚಕ್ರವರ್ತಿ ಸೂಲಿಬೆಲೆ, ಅತಿಥಿಗಳು: ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಬಿ.ಬಿ.ಕಾವೇರಿ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಹಲಸೂರು, ಬೆಳಿಗ್ಗೆ 7.30ರಿಂದ

ಗುರುದೇವ ಸ್ವಾಮಿ ಶಿವಾನಂದ ಮಹಾರಾಜ್ ಅವರ 62ನೇ ಪುಣ್ಯಸ್ಮರಣೆ: **ಉಪಸ್ಥಿತಿ:** ಸ್ವಾಮಿ ರಾಮಾತ್ಮಾನಂದ, ಆಯೋಜನೆ ಮತ್ತು ಸ್ಥಳ: ದಿ ಬೆಂಗಳೂರು ಡಿವೈನ್ ಲೈಫ್ ಸೊಸೈಟಿ, ಗುರು ವಿಲಾಸಂ, #71, ಚಿಕ್ಕ ಬಜಾರ್ ರಸ್ತೆ, ಸ್ವಾಮಿ ಶಿವಾನಂದಪುರ (ಟಸ್ಕರ್ ಟೌನ್), ಬೆಳಿಗ್ಗೆ 9ರಿಂದ

'ಗ್ರೀನೋವೇಟ್' ಕಾರ್ಯಾಗಾರ: **ಉದ್ಘಾಟನೆ:** ಬಿ.ಆರ್. ಬಾಲಗಂಗಾಧರ್, ಬಿ.ಆರ್. ಸುಪ್ರೀತ್, ಅತಿಥಿಗಳು: ಬಿ.ಎಸ್. ಪ್ರತಿಭಾ, ಹೆಲೆನ್ ರೆಸೆಲೆನ್ಸ್, ಆಯೋಜನೆ: ಝೀರೊ ವೇಸ್ಟ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಕೆಐ ವಾಸು ಆಡಿಟೋರಿಯಂ, ಮೆಟೀರಿಯಲ್ಸ್ ಎಂಜಿನಿಯರಿಂಗ್ ವಿಭಾಗ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಳಿಗ್ಗೆ 9.30

ಸಂಸ್ಕೃತ ಕಲಿಕೆಯ ಒಟಿಟಿ ಅನಾವರಣ ಮತ್ತು ಚರ್ಚಾ ಗೋಷ್ಠಿ: ಅತಿಥಿಗಳು: ಬಿ. ಮಹಾದೇವನ್, ಕ್ರಿಸ್ ಗೋಪಾಲಕೃಷ್ಣನ್, ನಿರ್ವಹಣೆ: ವಾಣಿಶ್ರೀ ರಘುಪತಿ, ಆಯೋಜನೆ: ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಜೈನ ಮಹಿಳಾ ಕನ್ನಡ ಸಾಹಿತ್ಯ ಸಮಾವೇಶ: ಉದ್ಘಾಟನೆ: ಅನಿತಾ ಸುರೇಂದ್ರಕುಮಾರ್, ಮುಖ್ಯ ಅತಿಥಿ: ಪದ್ಮ ಪ್ರಕಾಶ್, ಅಧ್ಯಕ್ಷತೆ: ನಾಗಶ್ರೀ ಮುಪ್ಪಾನೆ, ಆಯೋಜನೆ ಹಾಗೂ ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 10

ಉಚಿತ ಕಣ್ಣು ಪರೀಕ್ಷೆ ಮತ್ತು ಉಚಿತ ಕನ್ನಡಕ ವಿತರಣೆ: ಡಾ.ವಿದ್ಯಾಶಂಕರ್ ಡಿ.ಎಸ್ ಮತ್ತು ತಂಡ, ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ನಂ 74, ಐದನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

ಜಾಣಗೆರೆ ವೆಂಕಟರಾಮಯ್ಯ ಅವರ 'ನುಡಿಗೋಲು 3' ಪುಸ್ತಕ ಬಿಡುಗಡೆ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಪುಸ್ತಕ ಬಿಡುಗಡೆ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಬಿ.ಜಯಪ್ರಕಾಶ್ ಗೌಡ, ಅತಿಥಿಗಳು: ಸುನಂದಾ ಜಯರಾಮ್, ಮಾವಳ್ಳಿ ಶಂಕರ್, ಡಾ. ವಸುಂಧರಾ ಭೂಪತಿ, ಆಯೋಜನೆ: ಜಾಣಗೆರೆ ಪತ್ರಿಕೆ ಪ್ರಕಾಶನ, ಸ್ಥಳ: ಗಾನ ಪಲ್ಲವಿ ಸಭಾಂಗಣ, ಶ್ರೀಸಾಯಿ ಸ್ಪೋರ್ಟ್ಸ್, ಎರಡನೇ ಮಹಡಿ, ಕನ್ಯಾಕುಮಾರಿ ಶಾಲೆ ಹಿಂಭಾಗ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

'ಕಾನೂನು ಮತ್ತು ಅದರ ಮಿತಿಗಳು: ಕೌಟುಂಬಿಕ ಹಿಂಸೆ ಮತ್ತು ವೈವಾಹಿಕ ಕ್ರೌರ್ಯದ ಕುರಿತು ಪ್ರಾಯೋಗಿಕ ಅಧ್ಯಯನ' ವರದಿ ಬಿಡುಗಡೆ: ಅಶೋಕ್ ಬಿ. ಹಿಂಚಿಗೇರಿ, ವರದಿ ರಚನೆ: ಬಿಂದು ಎನ್. ದೊಡ್ಡಹಟ್ಟಿ, ಪ್ರಗ್ಯ ಸೋಲಂಕಿ, ಅತಿಥಿಗಳು: ಪೂರ್ಣ ರವಿಶಂಕರ್, ಸಂಗೀತಾ ರೇಗೆ, ಸರಸು ಎಸ್ತರ್ ಥಾಮಸ್, ಆಯೋಜನೆ: ಅವೇಕ್ಷಾ ಸಂಸ್ಥೆ, ಸ್ಥಳ: ಆಶೀರ್ವಾದ್ ಕೇಂದ್ರ, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 11

ಮಾನಸಿಕ ಆರೋಗ್ಯದ ಕುರಿತು ಸಮುದಾಯದಲ್ಲಿ ಜಾಗೃತಿ: ಉಪನ್ಯಾಸ: ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ತೋಟಗಾರಿಕೆ ಇಲಾಖೆ, ಸ್ಥಳ: ಲಾಲ್‌ಬಾಗ್, ಬೆಳಿಗ್ಗೆ 11

ಆಗಮ ಘಟಿಕೋತ್ಸವ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಉದಯ ಗರುಡಾಚಾರ್, ಆಯೋಜನೆ: ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಮಿತಿ, ಸ್ಥಳ: ಶೃಂಗೇರಿ ಶಾರದಾ ಕಲ್ಯಾಣ ಮಂಟಪ, ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣ, ಬಸವನಗುಡಿ, ಮಧ್ಯಾಹ್ನ 2.30

ರಜತ ಪರ್ವ ಮತ್ತು ವಿಚಾರಣ ಸಂಕಿರಣ: **ಉಪಸ್ಥಿತಿ:** ತಲ್ಲೂರು ಶಿವರಾಮ ಶೆಟ್ಟಿ, ನಮ್ರತ.ಎನ್, ಎಂ.ಪಿ.ಮಂಜುನಾಥ, ಸುರೇಶ ಜಿ.ಕೆ., ಸುರೇಂದ್ರ ಪಣಿಯೂರು, ಎಸ್.ವಿ. ಉದಯಕುಮಾರ ಶೆಟ್ಟಿ, ಎಚ್. ಸುಜಯೀಂದ್ರ ಹಂದೆ, ಯಕ್ಷಗಾನ ಪ್ರದರ್ಶನ: ಮೀನಾಕ್ಷಿ ಕಲ್ಯಾಣ, ಆಯೋಜನೆ: ರಂಗಸ್ಥಳ ಯಕ್ಷಮಿತ್ರಕೂಟ, ಸ್ಥಳ: ವೇಣುಗೋಪಾಲಕೃಷ್ಣ ಸಮುದಾಯ ಭವನ, ಶ್ರೀಗಂಧಕಾವಲು, ನಾಗರಬಾವಿ, ಮಧ್ಯಾಹ್ನ 3

ಪ್ರಮೀಳಾ ಮಾಧವ್ ಅವರು ಸಂಪಾದಿಸಿರುವ 'ಚಿಂತನ ಸೌರಭ' ಪುಸ್ತಕ ಬಿಡುಗಡೆ: ಹಂಪಾ ನಾಗರಾಜಯ್ಯ, ಕೃತಿ ಬಗ್ಗೆ ಮಾತು: ಎಲ್.ಜಿ. ಮೀರಾ, ಅತಿಥಿ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಟಿ.ಎ. ಬಾಲಕೃಷ್ಣ, ವಿಜಯ ಸಂಜೆ ಪದವಿ ಕಾಲೇಜು, ಸ್ಥಳ: ರಾಮಸ್ವಾಮಿ ಸಭಾಂಗಣ, ಕಾಲೇಜು ಆವರಣ, ಜಯನಗರ 4ನೇ ಬ್ಲಾಕ್, ಸಂಜೆ 4

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಪ್ರತಿಭಾ ನಂದಕುಮಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4



ಪ್ರತಿಭಾ ನಂದಕುಮಾರ್

ಇಂದಿರಾ ಮತ್ತು ನಾರಾಯಣದಾಸ್ ಸ್ಮರಣಾರ್ಥ ಸಂಗೀತ ಕಛೇರಿ: ಗಾಯನ: ಶ್ರೇಯಾ ವಿ. ಮೂರ್ತಿ, ತಬಲಾ: ಗುರುರಾಜ್ ಹೆಗಡೆ, ಹಾರ್ಮೋನಿಯಂ: ಸತೀಶ್ ಭಟ್, ಗಾಯನ: ವಿಶಾಲ್ ಶ್ರೀಪಾದ್ ಹೆಗಡೆ, ತಬಲಾ: ವಿಕಾಸ್ ನರೇಗಲ್, ಹಾರ್ಮೋನಿಯಂ: ಅಶ್ವಿನ್ ವಾಲ್ವಾಲ್ಕರ್, ಆಯೋಜನೆ: ಎಂಇಎಸ್ ಕಲಾವೇದಿ, ಸಪ್ತಕ, ಸ್ಥಳ: ಎಂಇಎಸ್ ಕಿಶೋರ್ ಕೇಂದ್ರ, ಮಲ್ಲೇಶ್ವರ, ಸಂಜೆ 5.30

'ಭಾಷೆಯ ಹಂಗು ಅನುವಾದ ರಂಗು: **ವಿಶೇಷ ಉಪನ್ಯಾಸ:** ವಸುಧೇಂದ್ರ, ಉಪಸ್ಥಿತಿ: ಶಾಂತಿ ಕೆ. ಅಪ್ಪಣ್ಣ, ಚಂದ್ರಶೇಖರ್ ಮದಭಾವಿ, ಸಂವಾದಕ: ಸುಧನ್ವಾ ದೇರಾಜೆ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಜಯನಗರ 4ನೇ ಬ್ಲಾಕ್, ಸಂಜೆ: 5.30

ಬಿ.ಎಂ. ಕೇಶವಮೂರ್ತಿ ನಾಡಿಗ್ ಮತ್ತು ಬಿ.ಕೆ. ಚಂದ್ರಮೌಳಿ ಸ್ಮರಣಾರ್ಥ ಸಂಗೀತ ಕಛೇರಿ: ವೀಣೆ: ಶುಭ ಸಂತೋಷ್, ಮೃದಂಗ: ವಿನೋದ್ ಶ್ಯಾಮ್, ಘಟ: ಬಿ.ಎಸ್.ರಘುನಂದನ್, ಆಯೋಜನೆ: ವಿದ್ವಾನ್ ಕೆ.ಎನ್.ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ದೇವಸ್ಥಾನ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರ ನಗರ, ಸಂಜೆ 6

ತಿಂಗಳ ನಾಟಕ ಸಂಭ್ರಮ: 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿ: ಕಾ.ತ. ಚಿಕ್ಕಣ್ಣ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಶಾಸಕ ಬಸವರಾಜ್‌ಗೆ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಶನಿವಾರ (ಜುಲೈ 19) ಬೆಳಿಗ್ಗೆ 11.30ಕ್ಕೆ ಭಾರತಿ ನಗರ ಪೊಲೀಸ್ ಠಾಣೆಗೆ ಹಾಜರಾಗಿ' ಎಂದು ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬೈರತಿ ಬಸವರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಸಂಜೆ ವಿಚಾರಣೆ ನಡೆಸಿತು.

'ಬಸವರಾಜ್ ವಿಚಾರಣೆಗೆ ಹಾಜರಾದರೆ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ (3)(4)(5) ಮತ್ತು ಅರ್ನೇಶ್ ಕುಮಾರ್, ಗೋಸ್ವಾಮಿ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪಿನ ನಿದೇಶನಗಳನ್ನು ಪಾಲಿಸಬೇಕು' ಎಂದು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು.



'ಸ್ಯಾನಿಟರಿ ಪ್ಯಾಡ್: ಬಲವಂತದ ಕ್ರಮ ಬೇಡ'

'ಸ್ಯಾನಿಟರಿ ಪ್ಯಾಡ್ ಮೇಲೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯ ರೂಪಾಂತರಗೊಳಿಸಿದ (ಮಾರ್ಫ್) ಚಿತ್ರ ಮುದ್ರಿಸಿದ ಮತ್ತು ಬಿಹಾರ ಮಹಿಳೆಯರ ಘನತೆಗೆ ಧಕ್ಕೆ ಉಂಟು ಮಾಡುವಂತೆ 'ಎಕ್ಸ್'ನಲ್ಲಿ ಅಶ್ಲೀಲ ಹೇಳಿಕೆ ನೀಡಿದ ಆರೋಪದಡಿ ದೆಹಲಿ–ಹರಿಯಾಣದ ಇಬ್ಬರ ವಿರುದ್ಧ ನಗರದಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

'ನಮ್ಮ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಪ್ರಕರಣದ ಕುರಿತಂತೆ 1ನೇ ಎಸಿಎಂಎಂ ಕೋರ್ಟ್‌ನಲ್ಲಿರುವ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ದೆಹಲಿಯ ರತನ್ ರಂಜನ್ (32) ಮತ್ತು ಹರಿಯಾಣದ ಧಾರೂಹೇರಾ ನಿವಾಸಿ ಅರುಣ್ ಕುಮಾರ್ (39) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. 'ಹೊರ ಕವಚದವರೆಗೆ ಎಲ್ಲಾ ಸರಿಯಾಗಿಯೇ ಇದೆ. ಆದರೆ, ತಾವು ಒಳಗೇನು ಇರಿಸುತ್ತಿರುವಿರಿ. ಇದಂತೂ ತಪ್ಪು ರಾಹುಲ್‌ಜಿ. ಇಲ್ನೋಡಿ, ನೀವು ಇಲ್ಲಿ ಒಳಗೇನು ಮಾಡುತ್ತಿದ್ದೀರಾ ಎಂದು...' ಎಂದು 'ಎಕ್ಸ್'ನಲ್ಲಿ ಮಾಡಲಾದ ಹೇಳಿಕೆಯನ್ನು ಆಕ್ಷೇಪಿಸಿ ನಗರದ ಪ್ರಿಯಾಂಕ ದೇವಿ ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು ನೀಡಿದ್ದರು. ದೂರಿನ ಅನ್ವಯ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 192, 336(4), 352ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಮತ್ತು ಸರ್ಕಾರದ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ವಾದ ಮಂಡಿಸಿದರು.

ಕಾಲ್ತುಳಿತ: ವಿಮಾನ ನಿಲ್ದಾಣಕ್ಕೆ ಹೋದವರು ಯಾರು?

'ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದ ಪ್ರಕರಣ ದಲ್ಲಿ ಪೊಲೀಸರು ಆರ್‌ಸಿಬಿ ಸೇವಕರಂತೆ ವರ್ತಿಸಿದ್ದಾರೆ ಎಂಬ ರಾಜ್ಯ ಸರ್ಕಾರದ ವಾದ ದುರದೃಷ್ಟಕರ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್ ವಿಕಾಸ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಪೊಲೀಸ್ ಅಧಿಕಾರಿಗಳ ಅಮಾನತು ಆದೇಶವನ್ನು ರದ್ದುಪಡಿಸಿರುವ ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಆದೇಶ ಪ್ರಶ್ನಿಸಿ ವಿಕಾಸ್ ಕುಮಾರ್ ವಿಕಾಸ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಡಿ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಅಮಾನತುಗೊಳಿಸಿದ ಆದೇಶವನ್ನು ರದ್ದುಪಡಿಸಿರುವ ಸಿಎಟಿ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, 'ಈ ಪ್ರಕರಣದಲ್ಲಿ ಸರ್ಕಾರ ಯಾವುದೇ ದಾಖಲೆಗಳಿಲ್ಲದೇ ಪೊಲೀಸರನ್ನು ಸರ್ಕಾರ ಅಮಾನತುಪಡಿಸಿದೆ. ಅಷ್ಟಕ್ಕೂ, ಆರ್‌ಸಿಬಿ ತಂಡವನ್ನು ಸ್ವಾಗತಿಸಲು ಯಾರು ವಿಮಾನ ನಿಲ್ದಾಣಕ್ಕೆ ಹೋಗಿದ್ದರು ಎಂಬ ಸಂಗತಿ ಎಲ್ಲರಿಗೂ ತಿಳಿದಿದೆ' ಎಂದು ಬಲವಾಗಿ ಕುಟುಕಿದರು.

'ಪೊಲೀಸರು ತಮ್ಮ ಕರ್ತವ್ಯವನ್ನು ಕಟ್ಟುನಿಟ್ಟಾಗಿ ನಿರ್ವಹಿಸಿದರೂ ತಪ್ಪು. ನಿರ್ವಹಿಸಿದೇ ಇದ್ದರೂ ತಪ್ಪು ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ನ್ಯಾಯಾಲಯದ ಮುಂದೆ ಎಲ್ಲವೂ ಸರಿಯಾಗಿದೆ ಎಂಬುದನ್ನು ತೋರಿಸಲು ದಾಖಲೆಗಳ ಅನುಪಸ್ಥಿತಿಯಲ್ಲಿಯೂ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಸರ್ಕಾರ ನಿಂದಿಸುತ್ತಿದೆ' ಎಂದು ಅವರು ಆಕ್ಷೇಪಿಸಿದರು. ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಲಾಗಿದೆ.

'ಈಜಿಪುರ ಮೇಲ್ಸೇತುವೆ ಮಾರ್ಚ್‌ಗೆ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು 2026ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಮೇಲ್ಸೇತುವೆಗೆ ಕಾಸ್ಟಿಂಗ್ ಮಾಡುವ ಕಾರ್ಯವನ್ನು ಶುಕ್ರವಾರ ಪರಿಶೀಲಿಸಿ ಮಾತನಾಡಿದ ಅವರು, 'ಈಜಿಪುರ ಮುಖ್ಯರಸ್ತೆಯಲ್ಲಿ 2.38 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ. ಒಟ್ಟು 762 ಸೆಗ್ಮೆಂಟ್ ಕಾಸ್ಟಿಂಗ್‌ಗಳನ್ನು ಅಳವಡಿಸಬೇಕಿದ್ದು, 437 ಸೆಗ್ಮೆಂಟ್ ಕಾಸ್ಟಿಂಗ್ ಅಳವಡಿಸಲಾಗಿದೆ. ಪ್ರತಿ ತಿಂಗಳು 45 ಸೆಗ್ಮೆಂಟ್ ಕಾಸ್ಟಿಂಗ್ ಅಳವಡಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಸೆಗ್ಮೆಂಟ್ ಕಾಸ್ಟಿಂಗ್ ಅಳವಡಿಕೆ ಕಾಮಗಾರಿಗೆ ಇನ್ನಷ್ಟು ವೇಗ ನೀಡಿ, ಈ ವರ್ಷಾಂತ್ಯಕ್ಕೆ ಪೂರ್ಣಗೊಳಿಸಬೇಕು. ಇನ್ನುಳಿದ ಕಾಮಗಾರಿಯನ್ನು 2026ರ ಮಾರ್ಚ್ ಒಳಗಾಗಿ ಪೂರ್ಣಗೊಳಿಸಬೇಕು' ಎಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು.



ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮಹೇಶ್ವರ್ ರಾವ್ ಪರಿಶೀಲಿಸಿದರು

ಸೇಂಟ್ ಜಾನ್ಸ್ ಆಸ್ಪತ್ರೆ ಬಳಿ ಎರಡು ಕಡೆ ಭೂಸ್ವಾಧೀನವಾಗಬೇಕಿದ್ದು, ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸಲಾಗಿದೆ. ರ‍್ಯಾಂಪ್ ಕಾಮಗಾರಿಯನ್ನು ಪ್ರಾರಂಭಿಸಬೇಕು ಎಂದರು.

ಈಜಿಪುರ ಮೇಲ್ಸೇತುವೆ ಕಾಮಗಾರಿಯಲ್ಲಿ ಸೆಗ್ಮೆಂಟ್ ಅನ್ನು ರಾತ್ರಿ 11ರಿಂದ ಬೆಳಿಗ್ಗೆ 5ರವರೆಗೆ ಮಾತ್ರ ಅಳವಡಿಸಲಾಗುತ್ತಿದೆ.

ಉಳಿದ ಕಾಮಗಾರಿಯನ್ನು ಸಂಚಾರ ದಟ್ಟಣೆಯ ನಡುವೆಯೂ ಮಾಡಲಾಗುತ್ತಿದೆ. ಪಾದಚಾರಿ ಮಾರ್ಗದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಮೇಲ್ಸೇತುವೆ ಕಾಮಗಾರಿ ಮುಗಿದಿರುವ ಕೆಳಭಾಗದ ರಸ್ತೆಯಲ್ಲಿ ಡಾಂಬರೀಕರಣ ಮಾಡಲಾಗಿದೆ. ಶೋಲ್ಡರ್ ಡ್ರೈನ್ ಮತ್ತು ಮೀಡಿಯನ್ ಕಾಮಗಾರಿ ನಡೆಯುತ್ತಿದೆ ಎಂದು ಯೋಜನೆಯ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ಮಾಹಿತಿ ನೀಡಿದರು.

ಒಂದೇ ಬಿಲ್‌ಗೆ ಆನ್‌ಲೈನ್–ಆಫ್‌ಲೈನ್ ಪಾವತಿ?

ಬೆಂಗಳೂರು: 'ನಮ್ಮ ಕ್ಲಿನಿಕ್‌ನ ಅಭಿವೃದ್ಧಿ ಕಾಮಗಾರಿಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲೂ ಹಣ ಬಿಡುಗಡೆ ಮಾಡಲಾಗಿದೆ' ಎಂದು ಬಿಬಿಎಂಪಿಗೆ ಲೆಕ್ಕಪರಿಶೋಧಕರ ಸಮಿತಿ ತಿಳಿಸಿದೆ.

ನಮ್ಮ ಕ್ಲಿನಿಕ್

'ನಮ್ಮ ಕ್ಲಿನಿಕ್ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಲೆಕ್ಕ ಶೀರ್ಷಿಕೆ ಪಿ–3380: ನಮ್ಮ ಕ್ಲಿನಿಕ್ ಅಡಿ ಅನುದಾನ ಮೀಸಲಾಗಿದೆ. ಈ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಮುಖ್ಯ ಆರೋಗ್ಯಾಧಿಕಾರಿ ಅಥವಾ ಮುಖ್ಯ ಲೆಕ್ಕಾಧಿಕಾರಿ ಕಚೇರಿಯಲ್ಲಿ ಮಾತ್ರ ಪಾವತಿಸಬೇಕು. ಆದರೆ, ದಕ್ಷಿಣ ಹಾಗೂ ಪಶ್ಚಿಮ ವಲಯಗಳ ವಾರ್ಡ್ 173, 174, 167, 177ರಲ್ಲಿ ಮುಖ್ಯ ಆರೋಗ್ಯಾಧಿಕಾರಿಗಳು ಆಫ್‌ಲೈನ್‌ನಲ್ಲಿ ಬಿಲ್ ಪಾವತಿ ಮಾಡಿದ್ದಾರೆ. ಅದೇ ಬಿಲ್‌ಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಿಂದ ಜಾಬ್‌ಕೋಡ್ ಮೂಲಕ ಆನ್‌ಲೈನ್‌ನಲ್ಲಿ ಹಣ ವರ್ಗಾವಣೆ ಮಾಡಿದ್ದಾರೆ. ಒಟ್ಟಾರೆ ₹12.5 ಲಕ್ಷ ಮೊತ್ತ ಎರಡು ಬಾರಿ ಪಾವತಿಯಾಗಿದೆ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಸಮಿತಿ ಶಿಫಾರಸು ಮಾಡಿದೆ ಎಂದು ತಿಳಿದುಬಂದಿದೆ.

ಭೂಸ್ವಾಧೀನ ವಿರೋಧಿಸಿ ರೈತರ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿ ಹಾಗೂ ಬಿಕ್ಕನಹೊಸಹಳ್ಳಿ ಸೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ಭೂಸ್ವಾಧೀನ ಕೈಬಿಡುವಂತೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆನೇಕಲ್ ತಾಲ್ಲೂಕು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಶುಕ್ರವಾರ ರೈತರು ಪ್ರತಿಭಟನೆ ನಡೆಸಿದರು.

ಈ ಭಾಗದ ರೈತರು 10 ಗುಂಟೆಯಿಂದ 1 ಎಕರೆಯಷ್ಟು ಜಮೀನು ಹೊಂದಿದ್ದಾರೆ. ಕೃಷಿ ಹಾಗೂ ಹೈನುಗಾರಿಕೆಯನ್ನೇ ರೈತರು ಅವಲಂಬಿಸಿದ್ದಾರೆ. ಈ ಜಮೀನು ಸ್ವಾಧೀನ ಪಡಿಸಿಕೊಂಡರೆ ರೈತರು ಬೀದಿ ಪಾಲಾಗುತ್ತಾರೆ. ಭೂಸ್ವಾಧೀನ ಕೈಬಿಡಬೇಕು ಎಂದು ರೈತರು ಆಗ್ರಹಿಸಿದರು.

ಸೊಳ್ಳೆಪುರ, ಹಂದೇಹಳ್ಳಿ, ಮುತ್ತಾನಲ್ಲೂರು, ಅಮಾನಿಕೆರೆ, ಬಿ.ಹೊಸಹಳ್ಳಿ, ಎಸ್. ಮೇಡಹಳ್ಳಿ, ಗೋಪಸಂದ್ರ, ಹಾರೋಹಳ್ಳಿ, ಕೊಮ್ಮಸಂದ್ರ, ಸಮ್ಮನಹಳ್ಳಿ ಹಾಗೂ ಅಡಿಗರ ಕಲ್ಲಹಳ್ಳಿ ಗ್ರಾಮಗಳಲ್ಲಿನ ಕೃಷಿ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಕಾನೂನು ಉಲ್ಲಂಘಿಸಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಆಕ್ರೋಶ ಹೊರಹಾಕಿದರು.

'ಯಾವುದೇ ಕಾರಣಕ್ಕೂ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಕೃಷಿ ಜಮೀನು ನೀಡುವುದಿಲ್ಲ' ಎಂದು ಹೇಳಿದ ರೈತರು, 'ನಮ್ಮ ಭೂಮಿ ನಮ್ಮ ಹಕ್ಕು' ಎಂದು ಘೋಷಣೆ ಕೂಗಿದರು. ಕೃಷಿ ಭೂಮಿಯನ್ನು ಬರಡು ಮಾಡಲು ಸರ್ಕಾರ ಮುಂದಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಹೆಸರಿನಲ್ಲಿ ನಾಲ್ಕು ಹಂತದಲ್ಲಿ ಸಾವಿರಾರು ಎಕರೆಯನ್ನು ಈ ಹಿಂದೆಯೇ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಆ ಪೈಕಿ ಶೇ 80ರಷ್ಟು ಭೂಮಿ ಖಾಲಿಯಿದೆ ಎಂದು ಹೇಳಿದರು.

ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ನೂರಾರು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಆ ಪೈಕಿ ಶೇ 20ರಷ್ಟು ಜಮೀನು ಸಹ ಬಳಕೆ ಮಾಡಿಕೊಂಡಿಲ್ಲ. ರೈತರು ಬೆಳೆಯುತ್ತಿದ್ದ ಫಲವತ್ತಾದ ಭೂಮಿ ಈಗ ಬರಡಾಗಿದೆ ಎಂದು ಅಳಲು ತೋಡಿಕೊಂಡರು.

ಕೃಷಿ ಭೂಮಿ ಸ್ವಾಧೀನದ ವಿರುದ್ಧ ರೈತರು ಆಕ್ಷೇಪಣೆಗಳನ್ನು ಸಲ್ಲಿಸುತ್ತಲೇ ಇದ್ದಾರೆ. ಆದರೆ, ಆಕ್ಷೇಪಣೆಗಳನ್ನು ಗಾಳಿಗೆ ತೂರಿ ಹೊಸದಾಗಿ ಅಧಿಸೂಚನೆಗಳನ್ನು ಹೊರಡಿಸಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದರು. ಪ್ರತಿಭಟನೆಯಲ್ಲಿ ವಿವಿಧ ಭಾಗದ ರೈತರು ಪಾಲ್ಗೊಂಡಿದ್ದರು.

ಚೋಳರ ಕಾಲದ ಐತಿಹಾಸಿಕ ಕೆರೆ: ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಕೆ

ಪಟ್ಟಂದೂರು: ಕೆರೆ ಪುನರುಜ್ಜೀವನಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೋಳರ ಕಾಲದ ಐತಿಹಾಸಿಕ ಪಟ್ಟಂದೂರು ಅಗ್ರಹಾರ ಕೆರೆಯನ್ನು ರಕ್ಷಿಸಲು ಮತ್ತು ಪುನರುಜ್ಜೀವನಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೂಲಕ ಮನವಿ ಮಾಡಿಕೊಳ್ಳಲಾಗಿದೆ.

ರಾಜ್ಯ ಸರ್ಕಾರ ವಿರುದ್ಧದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯಿತು.

'ವೈಟ್‌ಫೀಲ್ಡ್‌ನಲ್ಲಿರುವ ಪಟ್ಟಂದೂರು ಅಗ್ರಹಾರ ಕೆರೆ ಒಂದು ಸಾವಿರ ವರ್ಷದಿಂದ ಅಸ್ತಿತ್ವದಲ್ಲಿದೆ. ಈ ಕೆರೆಯನ್ನು ಚೋಳರ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ ಎಂಬುದಕ್ಕೆ ಪುರಾತತ್ವ ಇಲಾಖೆಯಲ್ಲಿ ಪುರಾವೆಗಳಿವೆ. ಕಂದಾಯ ದಾಖಲೆಗಳೂ ಈ ಜಮೀನು 'ಸರ್ಕಾರಿ ಕೆರೆ' ಪ್ರದೇಶ ಎಂದೇ ಪ್ರತಿಬಿಂಬಿಸುತ್ತವೆ. ಇಂತಹ ಖಚಿತ ಮತ್ತು ಅಧಿಕೃತ ದಾಖಲೆಗಳಿದ್ದರೂ ಈ ಪ್ರದೇಶವನ್ನು ಅತಿಕ್ರಮಣ ಮಾಡಿರುವವರು 'ಭೂ ಸುಧಾರಣಾ ಕಾಯ್ದೆಯ ಅಡಿಯಲ್ಲಿ ತಮಗೆ ಈ ಜಮೀನು ನೀಡಲಾಗಿದೆ' ಎಂಬ ಸುಳ್ಳನ್ನು ಪ್ರತಿಪಾದಿಸುತ್ತಿದ್ದಾರೆ' ಎಂದು ಅರ್ಜಿದಾರರ ಪರ ವಕೀಲ ಪ್ರಜ್ವಲ್ ಕೆ.ಆರಾಧ್ಯ ಹೇಳಿದರು.



ಪ್ರಕರಣದ ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಯಿತು.

ಐತಿಹಾಸಿಕ ಕೆರೆ: '975 ವರ್ಷಗಳಷ್ಟು ಹಳೆಯದಾದ ಪಟ್ಟಂದೂರು ಅಗ್ರಹಾರ ಕೆರೆಯನ್ನು ರಕ್ಷಿಸಬೇಕು' ಎಂದು ಸ್ಥಳೀಯ ನಿವಾಸಿಗಳ ಆಗ್ರಹವಾಗಿದೆ.

'ಕ್ರಿ.ಶ. 1043ರಲ್ಲಿ ಪಟ್ಟಂದೂರು ಅಗ್ರಹಾರ ಕೆರೆ ಮೂರು ತೂಬುಗಳನ್ನು ಹೊಂದಿತ್ತು. ರಾಜನು ನೀರಿನ ಸುತ್ತಲೂ ದುರ್ಗಾ, ಕ್ಷೇತ್ರಪಾಲ ಮತ್ತು ಗಣಪತಿಯ ಮೂರು ದೇವತೆಗಳ ವಿಗ್ರಹಗಳನ್ನು ಸ್ಥಾಪಿಸಲು ಆದೇಶಿಸಿದ್ದನು ಎಂಬುದು ಕಾಡುಗೋಡಿಯ ಸ್ಮಶಾನವೊಂದರಲ್ಲಿ ಕಲ್ಲಿನ ಮೇಲಿನ ತಮಿಳು ಲಿಪಿ ಕೆತ್ತನೆಗಳಿಂದ ತಿಳಿದುಬರುತ್ತದೆ' ಎಂದು ಇತಿಹಾಸಕಾರ ಉದಯ ಕುಮಾರ್ ಹೇಳಿದರು.

'ಬೇಸಿಗೆಯಲ್ಲಿ ಒಣಗಿ ಮಳೆಗಾಲದಲ್ಲಿ ತುಂಬುತ್ತಿದ್ದ ಈ ಕಾಲೋಚಿತ ನೀರಿನ ಮೂಲವು ಬೆಂಗಳೂರಿನ ಕೃಷಿ ಸಮುದಾಯದ ಜೀವನೋಪಾಯದ ಕೇಂದ್ರವಾಗಿತ್ತು' ಎಂದರು.

'ಅಕ್ರಮವಾಗಿ ತ್ಯಾಜ್ಯ ಸುರಿಯುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು ಕೆರೆಯ ತಳಭಾಗವನ್ನು ಸಮತಟ್ಟು ಮಾಡಿವೆ. ಬಿಬಿಎಂಪಿ ಕಣ್ಣು ಮುಚ್ಚಿಕೊಂಡಿದ್ದು ಮಾತ್ರವಲ್ಲದೆ, ಮರಗಳನ್ನು ಕಡಿದು ಈ ವರ್ಷದ ಆರಂಭದಲ್ಲಿ ಕೆರೆಯ ತಳಭಾಗದಲ್ಲಿ 80 ಅಡಿ ಉದ್ದದ ರಸ್ತೆ ನಿರ್ಮಿಸಲು ಪ್ರಾರಂಭಿಸಿತು. ಹಲವು ಭಾಗದಲ್ಲಿ ಒತ್ತುವರಿಯಾಗಿದೆ. ಅದೆಲ್ಲವನ್ನೂ ತೆರವುಗೊಳಿಸಬೇಕು' ಎಂದು ಪಟ್ಟಂದೂರು ಅಗ್ರಹಾರ ಆರ್‌ಡಬ್ಲ್ಯೂಎ ಫೆಡರೇಷನ್ ಸದಸ್ಯ ಸಂದೀಪ್ ಅನಿರುದ್ಧನ್ ಹೇಳಿದರು.

'1865ರ ಬ್ರಿಟಿಷ್ ಯುಗದ ನಕ್ಷೆಯಲ್ಲಿ ಪಟ್ಟಂದೂರು ಕೆರೆ ಮತ್ತು ಅದಕ್ಕೆ ಸಂಪರ್ಕ ಹೊಂದಿದ ರಾಜಕಾಲುವೆಗಳ ಮಾಹಿತಿ ಇದೆ. 1950ರ ಸಮೀಕ್ಷೆಯಲ್ಲಿ ಈ ಪ್ರದೇಶವನ್ನು ಕೆರೆ ಎಂದೇ ಗುರುತಿಸಲಾಗಿದೆ. ಇದು ಸರ್ಕಾರಿ ಆಸ್ತಿಯಾಗಿದ್ದರೂ, 1970ರ ದಶಕದಲ್ಲಿ ಕೆರೆಯನ್ನು ಅತಿಕ್ರಮಿಸಿ, ಕೃಷಿ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ' ಎಂಬುದು ವೈಟ್‌ಫೀಲ್ಡ್‌ನಲ್ಲಿರುವ ನಾಗರಿಕರ ಹಲವು ಗುಂಪುಗಳ ಒತ್ತಾಯವಾಗಿದೆ' ಎಂದರು.

ಪ್ರತಿಯೊಬ್ಬರಲ್ಲೂ ಸಾಮರ್ಥ್ಯವಿದೆ, ಹೊರತೆಗೆಯಬಲ್ಲಶಕ್ತಿ ಬೇಕಷ್ಟೆ.
-ಸಿದ್ಧೇಶ್ವರ ಸ್ವಾಮೀಜಿ

ಇವನಲ್ಲ ಅವನು!



'ಮದುವೆಯ ಈ ಬಂಧ ಅನುರಾಗದ ಅನುಬಂಧ, ಏಳೇಳು ಜನುಮದಲೂ ತೀರದ ಸಂಬಂಧ...' ಎನ್ನುವುದು ಕನ್ನಡದ ಎವರ್‌ಗ್ರೀನ್ ಚಿತ್ರಗೀತೆಗಳಲ್ಲಿ ಒಂದು. ಆದರೆ ಅಂತಹದ್ದೊಂದು 'ಬಂಧ'ಕ್ಕೆ ಒಡ್ಡಿಕೊಳ್ಳುವ ಮುನ್ನವೇ ಪೊಲೀಸರ 'ಬಂಧನ'ಕ್ಕೆ ಒಳಗಾಗುವಂತಹ ಕೃತ್ಯಗಳನ್ನು ಎಸಗುತ್ತಿದ್ದಾರೆ ಕೆಲವು ಹೆಣ್ಣುಮಕ್ಕಳು. ಯಾಕೆ ಹೀಗೆ? ಆ ಮನಃಸ್ಥಿತಿಗೆ ಅವರನ್ನು ತಂದು ನಿಲ್ಲಿಸುವ ಬಲವಾದ ಕಾರಣಗಳಾದರೂ ಏನು ಎಂಬುದನ್ನು ಇಲ್ಲಿ ವಿಶ್ಲೇಷಿಸಿದ್ದಾರೆ ಲೇಖಕಿ **ಅರ್ಪಣಾ ಎಚ್.ಎಸ್.**

ಪತ್ರಕರ್ತೆಯಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದ ಮಹಿಳಾ ವಿಭಾಗಕ್ಕೆ ಕೆಲವು ಬಾರಿ ಭೇಟಿ ನೀಡಿದ್ದೆ. ಆಗೆಲ್ಲಾ ಅಲ್ಲಿನ ಸಿಬ್ಬಂದಿ ಕೆಲವು ಕುಖ್ಯಾತ ಕೇಸುಗಳಿಗೆ ಸಂಬಂಧಿಸಿದ ಕೈದಿಗಳನ್ನು ಮಾಧ್ಯಮದವರಿಗೆ ಪರಿಚಯಿಸುತ್ತಿದ್ದರು- ಕೆಲವೊಮ್ಮೆ ಅವರಿಗೇ ಕಾಣುವಂತೆ, ಕೆಲವೊಮ್ಮೆ ಅವರ ಅರಿವಿಗೆ ಬಾರದಂತೆ. ವಿಶೇಷವೆಂದರೆ, ಪ್ರತಿ ಬಾರಿ ನಾನು ಜೈಲಿಗೆ ಭೇಟಿ ಕೊಟ್ಟಾಗಲೂ ಅಲ್ಲಿನ ಸಿಬ್ಬಂದಿ ಇಬ್ಬರನ್ನು ತಪ್ಪದೇ ತೋರಿಸುತ್ತಿದ್ದರು. ಒಬ್ಬಾಕೆ, ಅಶೋಕ್ ಗುತ್ತೇದಾರ್ ಕೊಲೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ಪದ್ಮಾವತಿ ಗುತ್ತೇದಾರ್, ಇನ್ನೊಬ್ಬಾಕೆ, ರಿಂಗ್‌ರೋಡ್ ಕೊಲೆ ಕೇಸಿನ ಶುಭಾ.

ಪದ್ಮಾವತಿ ಲವಲವಿಕೆಯಿಂದ ಜೈಲಿನಲ್ಲಿ ಓಡಾಡಿಕೊಂಡು, ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ, ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸುತ್ತಿದ್ದರೆ, ಶುಭಾ ಒಂದೂ ಮಾತಿಲ್ಲದೆ, ಸಣ್ಣನಗುವೂ ಇಲ್ಲದೆ, ಗಂಟು ಮುಖ ಹೊತ್ತಿರುತ್ತಿದ್ದಳು. ಆಗ ನನಗೆ ಒಂದು ಪ್ರಶ್ನೆ ಕಾಡುತ್ತಿತ್ತು, ಜೈಲಿನಲ್ಲಿ ಅದಕ್ಕಿಂತ ಹೀನಾಯ ಕೃತ್ಯ ಎಸಗಿದವರು ಇದ್ದರೂ ಇವರಿಬ್ಬರೇ ಏಕೆ ಅಲ್ಲಿ 'ಪ್ರೇಕ್ಷಣೀಯ ವಸ್ತು'ಗಳಂತೆ ಆಗಿದ್ದಾರೆ ಎಂದು.

ಸುಮಾರು 22 ವರ್ಷಗಳ ನಂತರ ಇದೇ ಶುಭಾ ಮತ್ತೆ ಬಹಳಷ್ಟು ಜನಕ್ಕೆ ನೆನಪಾಗಿದ್ದಾಳೆ. ಶುಭಾಗೆ ನೀಡಲಾಗಿದ್ದ ಜೀವಾವಧಿ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಮೊನ್ನೆ ಎತ್ತಿಹಿಡಿದ ಸುದ್ದಿ ಬರುವ ಮೊದಲೇ, ಮಾಧ್ಯಮಗಳು ಶುಭಾ ಪ್ರಕರಣವನ್ನು ನೆನಪಿಸಿಕೊಂಡಿದ್ದಕ್ಕೆ ಕಾರಣವಿತ್ತು. ಈ ವರ್ಷದ ಆರಂಭದಿಂದಲೇ, ಹೆಂಡತಿಯು ಪ್ರಿಯಕರನ ಜೊತೆ ಸೇರಿ ಗಂಡನ ಹತ್ಯೆ ಮಾಡಿದ ಕೆಲವು ಪ್ರಕರಣಗಳು ದೊಡ್ಡ ಮಟ್ಟದಲ್ಲಿ ಸುದ್ದಿ ಮಾಡಿದ್ದವು. ಸಿಮೆಂಟ್ ಡ್ರಮ್‌ನಲ್ಲಿ ಗಂಡನ ದೇಹ ದೊರಕಿದ್ದರಿಂದ ಹಿಡಿದು ಮೇಘಾಲಯ ಹನಿಮೂನ್ ಮರ್ಡರ್‌ವರೆಗೆ ಕೆಲವು ಮದುವೆಗಳು ಕೊಲೆಯಲ್ಲಿ ಕೊನೆಗೊಳ್ಳುತ್ತಿರುವುದು ಸುದ್ದಿಯಾಗುತ್ತಿದೆ.

ಒಂದೆಡೆ, ಹೆಂಡತಿಯಿಂದ ಗಂಡ ಎಷ್ಟು ಅಪಾಯದಲ್ಲಿ ಇದ್ದಾನೆಂಬ ಬಗ್ಗೆ ತಮಾಷೆಯ, ವ್ಯಂಗ್ಯದ ಸಾಲುಸಾಲು ರೀಲುಗಳು ಬರುತ್ತಿದ್ದರೆ, ಇನ್ನೊಂದೆಡೆ, ಹೆಣ್ಣಿನ ದ್ರೋಹ, ಅನೈತಿಕ ಸಂಬಂಧ, ದೇಶದ ಕಾನೂನು ಹೇಗೆ ಪುರುಷ ವಿರೋಧಿಯಾಗಿದೆ ಎಂಬ ಬಗ್ಗೆ ದೊಡ್ಡ ಮಟ್ಟದ ಚರ್ಚೆಗಳು ನಡೆಯುತ್ತಿವೆ.

ಬಹುತೇಕ ಈ ಎಲ್ಲಾ ಪ್ರಕರಣಗಳ ಒಂದು ಸಾಮಾನ್ಯ ಎಳೆಯೆಂದರೆ ಬಲವಂತದ ವಿವಾಹ. ಕುಟುಂಬದ ಒತ್ತಾಯಕ್ಕೆ ಕಟ್ಟುಬಿದ್ದು ಇಷ್ಟವಿಲ್ಲದ ಮದುವೆಗೆ ಒಪ್ಪಿ, ನಂತರ ಪ್ರಿಯಕರನ ಜೊತೆ ಸೇರಿ ಪತಿಯನ್ನು ಕೊಲೆ ಮಾಡಿರುವ ಪ್ರಕರಣಗಳೇ ಹೆಚ್ಚು. ರಿಂಗ್‌ರೋಡ್ ಕೊಲೆ ಪ್ರಕರಣ ಬೆಳಕಿಗೆ ಬಂದಾಗ ಬಹಳಷ್ಟು ಮಂದಿ ಕೇಳಿದ ಪ್ರಶ್ನೆ ಇದೇ- 'ಮದುವೆ ಇಷ್ಟವಿಲ್ಲ ಅಂದರೆ ಬೇಡ ಅನ್ನಬಹುದಿತ್ತು, ಕೊಲೆ ಮಾಡಿಸುವ ಅಗತ್ಯ ಏನಿತ್ತು?' ತೀರಾ ಸರಳವೆನಿಸುವ ಈ ಪ್ರಶ್ನೆಯ ಸಂಕೀರ್ಣತೆ ಎಷ್ಟಿದೆ ಎಂದರೆ, ಅದು ನಮ್ಮ ಸಮಾಜದ ರೀತಿ ರಿವಾಜು, ಸಂಸ್ಕೃತಿ, ಕಾನೂನು ಕಟ್ಟಳೆಗಳ ಅಡಿಪಾಯವನ್ನೇ ಪ್ರಶ್ನಿಸುವಂಥದ್ದು. 'ನನಗೆ ಈ ಮದುವೆ ಇಷ್ಟವಿಲ್ಲ' ಎಂದು ಹೇಳುವುದು, ಮದುವೆಯನ್ನು ವಿರೋಧಿಸಿ ನಿಲ್ಲುವುದು ಹೆಣ್ಣಿಗೆ ಏಕೆ ಸಾಧ್ಯವಾಗುವುದಿಲ್ಲ? ಈ ಒಂದು ಮಾತು ಹೇಳುವುದಕ್ಕಿಂತಲೂ ಕೊಲೆ ಮಾಡುವುದೇ ಸುಲಭ ಎನಿಸುವ ಮನಃಸ್ಥಿತಿ ಅಥವಾ ಪರಿಸ್ಥಿತಿ ಇದೆ ಎಂಬುದು ಎಂತಹ ದೊಡ್ಡ ಆಘಾತಕಾರಿ ಸಂಗತಿಯಲ್ಲವೇ?

ಬಹುತೇಕ ಹೆಣ್ಣುಮಕ್ಕಳಿಗೆ ಸಂಗಾತಿಯ ಆಯ್ಕೆಯ ಅವಕಾಶ ಸಿಗುತ್ತಿರುವುದೇ ಇತ್ತೀಚಿನ ದಶಕಗಳಲ್ಲಿ. ಅಂದರೆ, ಅದು ಖುದ್ದಾಗಿ ನೋಡಿ ಆಯ್ಕೆ ಮಾಡುವ ಪೂರ್ಣ ಪ್ರಮಾಣದ ಸ್ವಾತಂತ್ರ್ಯವಲ್ಲ. 'ಒಪ್ಪಿಗೆ ಇದೆಯೇನಮ್ಮಾ?' ಎಂಬ ಪ್ರಶ್ನೆಗೆ ಉತ್ತರಿಸುವ ಅರೆ ಸ್ವಾತಂತ್ರ್ಯ ಮಾತ್ರ. ಹಿಂದಿನ ಶತಮಾನದಲ್ಲಿ ಆ ಪ್ರಶ್ನೆ ಕೂಡ ಕೇಳುತ್ತಿರಲಿಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ. ಈಗ ಹೆಣ್ಣು ಓದಿಗಾಗಿ, ಕೆಲಸಕ್ಕಾಗಿ ಮನೆ ಬಿಟ್ಟು ಹೊರಗೆ ಅಡಿ ಇಡುತ್ತಿದ್ದಾಳೆ, ಗಂಡುಮಕ್ಕಳೊಂದಿಗೆ ಹೆಚ್ಚು ವ್ಯವಹರಿಸುತ್ತಿದ್ದಾಳೆ. ಪ್ರೇಮಾಂಕುರದ ಅವಕಾಶಗಳು, ಸಂದರ್ಭಗಳು ಹೆಚ್ಚಾಗುತ್ತಿವೆ. ಆದರೆ, ತಾನು ಒಲಿದವನನ್ನು ಧೈರ್ಯವಾಗಿ ವರಿಸುವ ಸಾಧ್ಯತೆ ಮಾತ್ರ ಇನ್ನೂ ಕಡಿಮೆಯೇ ಇದೆ. ಮೇಲಿನ ಬಹಳಷ್ಟು ಪ್ರಕರಣಗಳಲ್ಲಿ ಕುಟುಂಬಸ್ಥರಿಗೆ ಹೆಣ್ಣಿನ ಪ್ರೇಮ ಪ್ರಕರಣಗಳ ಅರಿವಿತ್ತು ಎಂಬುದು ಈ ಸಂಗತಿಯನ್ನು ಸಾರಿ ಹೇಳುತ್ತದೆ.

> ಹೆಣ್ಣು ಪ್ರೇಮಿಸಿರುವುದು ಗೊತ್ತಾದಾಗ, ಬೇಗ ಮದುವೆ ಮಾಡಿ 'ಮರ್ಯಾದೆ' ಉಳಿಸಿಕೊಳ್ಳುವ ಮನಃಸ್ಥಿತಿಯಲ್ಲೇ ಬಹುತೇಕ ಕುಟುಂಬಗಳು ಈಗಲೂ ಇವೆ.

ಪ್ರೇಮದಲ್ಲಿರುವ ಹೆಣ್ಣು ಏನು ಮಾಡಬಹುದು? ಮನೆಯಲ್ಲಿ ಒಪ್ಪದಿದ್ದಾಗ ಓಡಿಹೋಗಿ ಮದುವೆಯಾಗಬಹುದು. ಆದರೆ, ಮರ್ಯಾದೆಗೇಡು ಹತ್ಯೆಗಳ ಸಂಖ್ಯೆಯೇನು ಕಡಿಮೆಯೇ ನಮ್ಮ ದೇಶದಲ್ಲಿ? ಹೀಗಾಗಿ, ಬಹುತೇಕ ಹೆಣ್ಣುಮಕ್ಕಳು ತಾವು ಬಯಸಿದವನೊಂದಿಗೆ ಬದುಕುವ ಮಾರ್ಗದಲ್ಲಿ ತಾವೇ ಬಲಿಯಾಗುವ ಬದಲು, ಇನ್ನೊಬ್ಬರ ಬಲಿ ತೆಗೆದುಕೊಳ್ಳಲು ಸಿದ್ಧರಾಗುತ್ತಿದ್ದಾರೆಯೇ? ಮದುವೆಗೆ ಮೊದಲು, ಪ್ರೀತಿಸಿದ ಹುಡುಗನನ್ನು ಮದುವೆ ಆಗುತ್ತೇನೆ ಎಂದು ಹೇಳುವಷ್ಟು ಧೈರ್ಯವೇ ಇಲ್ಲದಿರುವಾಗ, ಮದುವೆಯ ನಂತರದಲ್ಲಿ ಗಂಡನಿಂದ ಬೇರಾಗಿ ಮರುಮದುವೆ ಆಗುತ್ತೇನೆ ಎಂದು ಹೇಳುವ ಧೈರ್ಯ ತೋರಿಯಾಳೇ? ಸಮಾಜದ, ಕುಟುಂಬಸ್ಥರ ಬಗೆಗೆ ಇರುವ ಈ ಭಯಕ್ಕೆ, ಅದರಿಂದ ಹುಟ್ಟುವ ಪಿತೂರಿಗೆ ಗಂಡಂದಿರು ಬಲಿಯಾಗುತ್ತಿರುವುದು ಮಾತ್ರ ವಿಪರ್ಯಾಸ.

ಗಂಡು ಮದುವೆಯ ನಂತರವೂ ಹೊರಗೊಂದು ಸಂಬಂಧ ಇಟ್ಟುಕೊಂಡು ನಿಭಾಯಿಸುವುದನ್ನು ಈಗಲೂ ಸಮಾಜ ಹೆಚ್ಚೇನೂ ಪ್ರಶ್ನಿಸುವುದಿಲ್ಲ. ಎಷ್ಟೋ ಬಾರಿ ಹೆಂಡತಿಯೂ ಅದನ್ನು ಒಪ್ಪಿ ಸುಮ್ಮನಾಗಿ ಬಿಡುತ್ತಾಳೆ. ಹೀಗಾಗಿ, ಗಂಡನ ಅನೈತಿಕ ಸಂಬಂಧ ಕೊಲೆಯಲ್ಲಿ ಕೊನೆಗೊಳ್ಳುವುದು ಕಡಿಮೆ. ಆದರೆ, ಹೆಂಡತಿಯ ಅನೈತಿಕ ಸಂಬಂಧ ಬಹುತೇಕ ಕ್ರೈಂ ನ್ಯೂಸ್ ಆಗಿಯೇ ಪರ್ಯವಸಾನ ಕಾಣುತ್ತದೆ. ಹೆಂಡತಿಯ ಅಕ್ರಮ ಸಂಬಂಧ ಗಂಡಿಗೆ ತೀವ್ರ ಅಪಮಾನದ ಸಂಗತಿ, 'ಗಂಡಸುತನ'ದ ಪ್ರಶ್ನೆ. ಹೀಗಾಗಿ, ಗಂಡ ತನ್ನ ಹೆಂಡತಿಯನ್ನು, ಆಕೆಯ ಪ್ರಿಯಕರನನ್ನು ಅಥವಾ ಇಬ್ಬರನ್ನೂ ಕೊಲೆ ಮಾಡುವ ಸುದ್ದಿಗಳು ಮೊದಲಿನಿಂದಲೂ ನಾವು ಕೇಳುತ್ತಿದ್ದವೇ. ಈಗ ಹೆಣ್ಣು ಪ್ರಿಯಕರನ ಜೊತೆ ಸೇರಿ ಗಂಡನನ್ನು ಕೊಲ್ಲುವ ಸುದ್ದಿ ಹೆಚ್ಚು ಸದ್ದು ಮಾಡುತ್ತಿದೆ. ವ್ಯತ್ಯಾಸವೆಂದರೆ, ಗಂಡು ಅನೈತಿಕ ಸಂಬಂಧದ ಪ್ರಕರಣಗಳಲ್ಲಿ ಮಾಡುವ ಕೊಲೆಗಳು ಆ ಕ್ಷಣದ ರೋಷದಿಂದ ಸಂಭವಿಸುವುದೇ ಹೆಚ್ಚು. ಇಂತಹ ಸಂದರ್ಭಗಳಲ್ಲಿ ಹೆಂಡತಿಯಿಂದ ಮೋಸಕ್ಕೊಳಗಾದ ಗಂಡಿಗೆ –ಕೊಲೆಗಾರನಾದರೂ– ಸಮಾಜದ ಸಹಾನುಭೂತಿ ಸಿಗುವುದು ಕೂಡ ಸಾಮಾನ್ಯ. ಆದರೆ, ಹೆಣ್ಣು ಮಾಡುವ ಕೊಲೆಗಳು ಬಹುತೇಕ ಕೋಲ್ಡ್ ಬ್ಲಡೆಡ್. ಇಲ್ಲಿ ಹೆಣ್ಣಿಗೆ ಕೊಲೆಯಿಂದ ಪಾರಾಗಿ, ಒಲಿದವನೊಂದಿಗೆ ಬದುಕು ಕಟ್ಟಿಕೊಳ್ಳುವ ಬಯಕೆ ಇರುವುದರಿಂದ, ಇವೆಲ್ಲಾ ಪೂರ್ವಯೋಜಿತವೇ. ಹೀಗಾಗಿ, ಇದು ಮತ್ತಷ್ಟು ಭೀಕರ ಎನಿಸುವಂಥದ್ದು.

ಮದುವೆ ಇಬ್ಬರು ವ್ಯಕ್ತಿಗಳ ನಡುವಣ ವೈಯಕ್ತಿಕ ಸಂಬಂಧಕ್ಕಿಂತ ಹೆಚ್ಚಾಗಿ ಕುಟುಂಬಗಳ ಪ್ರತಿಷ್ಠೆಯ ವಿಷಯವಾಗಿರುವುದು, ಎಂತಹ ಸನ್ನಿವೇಶವೇ ಇರಲಿ, ವಿಚ್ಛೇದನವೆಂದರೆ ಅದು ನಾಚಿಕೆಗೇಡಿನ ಸಂಗತಿ ಎಂಬ ಭಾವನೆ ಇರುವುದು ವಿಷಮ ಪರಿಸ್ಥಿತಿಗಳಿಗೆ, ಹೀನಾಯ ಅಪರಾಧಗಳಿಗೆ ದಾರಿ ಮಾಡಿಕೊಡುತ್ತಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ?

ಒಂದು ಹೆಣ್ಣಿಗೆ, ತನ್ನವರ ಬಳಿ 'ನನಗೆ ಈ ಮದುವೆ ಬೇಡ' ಎಂದು ಹೇಳುವುದಕ್ಕಿಂತ, ಒಬ್ಬ ಅಮಾಯಕ ವ್ಯಕ್ತಿಯ ಕೊಲೆ ಮಾಡುವುದೇ ಹೆಚ್ಚು ಸುಲಭ ಎನಿಸುತ್ತದೆ ಎಂದಾದರೆ, ನಮ್ಮ ಸಾಮಾಜಿಕ ವ್ಯವಸ್ಥೆಯ ಅಡಿಪಾಯ ಎಷ್ಟು ಕೊಳೆತಿದೆ ಎಂಬ ಬಗ್ಗೆ ಯೋಚಿಸಬೇಕಲ್ಲವೇ?

ಭಾವನೆ ನಿಯಂತ್ರಿಸಿ ಪ್ರಬುದ್ಧರಾಗಿ



'ಎಮೋಷನ್ ಈಸ್' ದ ಎನಿಮಿ ಆಫ್ ಲಾಜಿಕ್' ಎಂಬ ಮಾತಿದೆ. ಭಾವನೆಗಳು ಅತಿರೇಕಕ್ಕೆ ಹೋದಾಗ ಮೊದಲು ಬಲಿಯಾಗುವುದೇ ತರ್ಕ. ಮನಸ್ಸು ಭಾವನೆಗಳನ್ನು ನಿಯಂತ್ರಿಸುವಷ್ಟು ಪ್ರಬುದ್ಧವಾಗಿ ಇಲ್ಲದೇ ಇದ್ದಾಗ ಅತಿರೇಕದ ಕೃತ್ಯಗಳನ್ನು ಮಾಡುತ್ತಾರೆ.

ರಿಂಗ್‌ರೋಡ್ ಶುಭಾ ಅಥವಾ ಹನಿಮೂನ್ ಹತ್ಯೆಯ ಸೋನಂ ಪ್ರಕರಣಗಳಲ್ಲಿ ಇಬ್ಬರೂ ಉನ್ನತ ಶಿಕ್ಷಣ ಪಡೆದಿರುವ ಮೇಲ್ಮಧ್ಯಮ ವರ್ಗದ ಹೆಣ್ಣುಮಕ್ಕಳೇ. ಪುರುಷಪ್ರಧಾನ ಸಮಾಜದ ಭಾವನಾತ್ಮಕ ಬೆದರಿಕೆಗೆ ಹಲವು ಸಲ ಹೆಣ್ಣುಮಕ್ಕಳು ಬಲಿಯಾಗುವುದು ನಿಜ. ಆದರೆ ಇಲ್ಲಿ ಅದು ಮಾತ್ರ ಕಾರಣವಾಗಿರುವ ಸಾಧ್ಯತೆ ಕಡಿಮೆ. ವ್ಯಕ್ತಿತ್ವ ದೋಷವಿರುವವರು ಸಮಾಜದ ಧೋರಣೆಗಳನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಾರೆ. ಅವರಿಗೆ ಸರಿ–ತಪ್ಪುಗಳ ನಡುವಿನ ವ್ಯತ್ಯಾಸದ ಅರಿವಿರುವುದಿಲ್ಲ. ವಿವೇಚನಾರಹಿತರಾಗಿ ಇರುತ್ತಾರೆ. ಸಿಕ್ಕಿಹಾಕಿಕೊಂಡರಷ್ಟೇ ತಪ್ಪು, ಇಲ್ಲದಿದ್ದರೆ ತಪ್ಪೇ ಅಲ್ಲ ಅನ್ನುವುದು ಅವರ ನಂಬಿಕೆಯಾಗಿರುತ್ತದೆ.

ಇಂಥಾ ಕ್ರೌರ್ಯ ಎಸಗುವವರು ಭಾರಿ ಚತುರರಾಗಿಯೇ ಇರುತ್ತಾರೆ ಎಂದೇನಿಲ್ಲ. ಇದು ಲೋ ಐ.ಕ್ಯು. ಕ್ರೈಂ. ಸಿನಿಮಾ, ಧಾರಾವಾಹಿಗಳಿಂದ ಪ್ರೇರಿತರಾಗಿಯೂ ಇಂಥ ಕೃತ್ಯ ಎಸಗಿರುವ ಸಾಧ್ಯತೆ ಇರುತ್ತದೆ. ಪ್ರೀತಿ ಕುರುಡಾಗಿರಬಹುದು, ಆದರೆ ಕ್ರೂರವಾಗಲು ಸಾಧ್ಯವಿಲ್ಲ. ಎಲ್ಲಿ ಕ್ರೌರ್ಯ ಇರುವುದೋ ಅದು ಪ್ರೀತಿಯಾಗದು.

ಜೀವನ ಎಂದ ಮೇಲೆ ಸಮಸ್ಯೆಗಳು, ಸಂದಿಗ್ಧ ಪರಿಸ್ಥಿತಿಗಳು ಇದ್ದೇ ಇರುತ್ತವೆ. ಕೊಲೆ ಇವುಗಳಿಗೆ ಪರಿಹಾರವಲ್ಲ ಎಂಬುದನ್ನು ಅರಿಯಬೇಕು. ಸಾಯುವುದು ಮತ್ತು ಸಾಯಿಸುವ ಆಲೋಚನೆಗಳೇ ಸರಿಯಲ್ಲ. ಇಂತಹ ಆಲೋಚನೆಗಳಿಂದ ನೋವು, ಸಂಕಟ, ಭರಿಸಲಾಗದ ನಷ್ಟ. ಹಾಗಾಗಿ, ಎಂಥ ಸಂದರ್ಭದಲ್ಲಾದರೂ ಒಳಗಿನ ಒತ್ತಡ ಹಾಗೂ ಸಂದಿಗ್ಧ ಸ್ಥಿತಿಯನ್ನು ನಿರ್ವಹಿಸುವ ಕಲೆಯನ್ನು ಸಿದ್ಧಿಸಿಕೊಳ್ಳಬೇಕು. ಸಂಯಮದಿಂದ ಇರಬೇಕಾದ, ಪ್ರಶಾಂತ ಮನಃಸ್ಥಿತಿಯನ್ನು ರೂಢಿಸಿಕೊಳ್ಳಬೇಕಾದ ಅಗತ್ಯವನ್ನು ಮನಗಾಣಬೇಕು.

ಡಾ. ಅರುಣಾ ಯಡಿಯಾಳ್
ಮನೋವೈದ್ಯೆ, ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜು ಮಂಗಳೂರು

ಸ್ಪಂದನ



ಡಾ. ವೀಣಾ ಎಸ್. ಭಟ್

ಗರ್ಭಕೋಶ ದಪ್ಪಗಾಗಿದೆಯೇ?

ನನಗೆ 29 ವರ್ಷ. ಮದುವೆಯಾಗಿ 12 ವರ್ಷ ಆಗಿದೆ. ಸರಿಯಾಗಿ ಮುಟ್ಟು ಆಗುತ್ತದೆ. ಆದರೆ ಮುಟ್ಟು ನಿಂತು ಎರಡು–ಮೂರು ದಿನಗಳಾದ ಮೇಲೆ ಮತ್ತೆ ಸ್ವಲ್ಪ ರಕ್ತಸ್ರಾವ ಕಾಣಿಸಿಕೊಳ್ಳುತ್ತದೆ, ಮತ್ತೆ ನಿಲ್ಲುತ್ತದೆ. ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ, ಗರ್ಭಕೋಶ ಸ್ವಲ್ಪ ದಪ್ಪಗಾಗಿದೆ ಎಂದು ತಿಳಿಸಿದ್ದಾರೆ. ಇದರಿಂದ ಏನಾದರೂ ತೊಂದರೆ ಇದೆಯೇ?

ಆಶಾ, ಮೈಸೂರು

ನೀವು ಒಮ್ಮೆ ಸ್ವೆಕ್ಯೂಲಂ ಪರೀಕ್ಷೆ ಮಾಡಿಸಿಕೊಳ್ಳಿ. ಕೆಲವೊಮ್ಮೆ ಗರ್ಭಕೋಶದ ಬಾಯಲ್ಲಿ ಪಾಲಿಪ್‌ನಂತಹ ತೊಂದರೆ ಇದ್ದರೆ ಹೀಗೆ ಆಗಬಹುದು. ಇನ್ನು ಕೆಲವು ಬಾರಿ ಕಾಪರ್–ಟಿಯಂತಹ ಉಪಕರಣ ಇದ್ದಾಗ ಅಥವಾ ಹಾರ್ಮೋನುಗಳ ಏರುಪೇರಿನಿಂದಲೂ ಈ ರೀತಿಯಾಗುತ್ತದೆ. ತಜ್ಞವೈದ್ಯರನ್ನೊಮ್ಮೆ ಸಂಪರ್ಕಿಸಿ.

ನೀವೂ ಬರೆಯಬಹುದು

ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು. ನಮ್ಮ ಇ- ಮೇಲ್ ಐ.ಡಿ– bhoomika@prajavani.co.in

---

ಮನೆಯಲ್ಲೇ ತಯಾರಿಸಿ ಕ್ಲೀನರ್ ಲಿಕ್ವಿಡ್

• ಹರ್ಷಾ ಕಾಮತ್



ಮನೆಯನ್ನು ಸ್ವಚ್ಛಗೊಳಿಸಲು ನಾವು ಅನೇಕ ಬಗೆಯ ಕ್ಲೀನರ್ ಲಿಕ್ವಿಡ್‌ಗಳನ್ನು ಅಂಗಡಿಯಿಂದ ತಂದು ಬಳಸುತ್ತೇವೆ. ಆದರೆ ಕಡಿಮೆ ಬೆಲೆಯಲ್ಲಿ ಬಗೆ ಬಗೆಯ ಲಿಕ್ವಿಡ್‌ಗಳನ್ನು ಖುದ್ದಾಗಿ ಮನೆಯಲ್ಲಿಯೇ ತಯಾರಿಸಬಹುದು. ಇಲ್ಲಿದೆ ಅವುಗಳನ್ನು ತಯಾರಿಸುವ ಸುಲಭ ವಿಧಾನ:

1. **ಅಡುಗೆ ಕೋಣೆಯಲ್ಲಿ ಬಳಸಿ**– ಬಾಟಲಿಯಲ್ಲಿ ಒಂದು ಕಪ್ ನೀರು, ಕಾಲು ಕಪ್ ಕ್ಲೀನಿಂಗ್ ವೈಟ್ ವಿನೆಗರ್ (ಇದು ಲಭ್ಯವಿಲ್ಲದಿದ್ದರೆ ಅಡುಗೆಗೆ ಬಳಸುವ ವಿನೆಗರ್ ಅನ್ನೇ ಬಳಸಬಹುದು), ಮೂರ್ನಾಲ್ಕು ಹನಿ ಲಿಕ್ವಿಡ್ ಡಿಟರ್ಜೆಂಟ್ ಹಾಕಿದರೆ ಕ್ಲೀನಿಂಗ್ ಲಿಕ್ವಿಡ್ ರೆಡಿ. ಈ ದ್ರವವನ್ನು ಕಪಾಟು, ಫ್ರಿಜ್, ಅಡುಗೆ ಕೋಣೆಯ ಸಜ್ಜಾವನ್ನು ಸ್ವಚ್ಛಗೊಳಿಸಲು ಬಳಸಬಹುದು.
2. **ಜಿಡ್ಡು ಹೋಗಲಾಡಿಸಲು ಹೀಗೆ ಮಾಡಿ:** ಒಂದು ಕಪ್ ಬಟ್ಟೆಸೋಪಿನ ಪುಡಿ ಅಥವಾ ಲಿಕ್ವಿಡ್, 4 ಚಮಚ ಅಡುಗೆ ಉಪ್ಪು, ಒಂದು ಚಮಚ ಟೂತ್‌ಪೇಸ್ಟ್, ಅರ್ಧ ಕಪ್ ಕ್ಲೀನಿಂಗ್ ವೈಟ್ ವಿನೆಗರ್ ಮಿಕ್ಸ್ ಮಾಡಿ. ಅದನ್ನು ಸ್ಪ್ರೇ ಬಾಟಲಿಯಲ್ಲಿ ಹಾಕಿಡಿ.
3. **ನೊಣಗಳ ಕಾಟವೇ?:** ಒಂದು ಬಾಟಲಿಯಲ್ಲಿ ಒಂದು ಕಪ್ ವಿನೆಗರ್, ಅದರಲ್ಲಿ ಮುಳುಗುವಷ್ಟು ಕಿತ್ತಳೆಹಣ್ಣಿನ ಸಿಪ್ಪೆಯನ್ನು ಹಾಕಿ. ಈ ಬಾಟಲಿಯನ್ನು ಮುಚ್ಚಿ, 15 ದಿನ ಬಿಸಿಲಿನಲ್ಲಿ ಇಡಿ. ನಂತರ ಅದನ್ನು ಸೋಸಿ, ನೊಣ ಬರುವ ಕಡೆ ಸ್ಪ್ರೇ ಮಾಡಬಹುದು.
4. **ಸಿಪ್ಪೆಯಿಂದ ಮಾಡಬಹುದು ಬಯೊ ಎನ್‌ಜೈಮ್**– ಇದೊಂದು ಉತ್ತಮವಾದ ಕ್ಲೆನ್ಸರ್. ಇದನ್ನು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ನೆಲ ಒರೆಸಲು ಉಪಯೋಗಿಸಬಹುದು. ಒಂದು ದೊಡ್ಡ ಬಾಟಲಿಯಲ್ಲಿ ಒಂದು ಕಪ್ ಬೆಲ್ಲ, ಯಾವುದೇ ತರಕಾರಿ ಅಥವಾ ಹಣ್ಣಿನ ಸಿಪ್ಪೆ ಮೂರು ಕಪ್ (ಬಾಳೆಹಣ್ಣು, ಕಿತ್ತಳೆ, ಮೋಸಂಬಿ, ನಿಂಬೆಹಣ್ಣು, ಈರುಳ್ಳಿ, ಬೆಳ್ಳುಳ್ಳಿಯ ಯಾವುದಾದರೂ ಸಿಪ್ಪೆ ಬಳಸಬಹುದು. ಒಂದೇ ಬಗೆಯ ತರಕಾರಿ ಸಿಪ್ಪೆಯಾದರೂ ಸರಿ, ಮಿಶ್ರ ತರಕಾರಿ ಸಿಪ್ಪೆಯೂ ನಡೆದೀತು. ಬೇರೆ ಬೇರೆಯಾಗಿಯೂ ಉಪಯೋಗಿಸಬಹುದು ಅಥವಾ ಎಲ್ಲ ಬಗೆಯ ಸಿಪ್ಪೆಯನ್ನೂ ಒಂದರಲ್ಲೇ ಹಾಕಬಹುದು), 10 ಕಪ್ ನೀರು ಹಾಕಿ ಬಾಟಲಿಯನ್ನು ಮೂರು ತಿಂಗಳು ಮುಚ್ಚಿಡಬೇಕು.

ಪ್ರತಿದಿನ ಒಮ್ಮೆ ಮುಚ್ಚಳವನ್ನು ತೆಗೆದು ಪುನಃ ಮುಚ್ಚಿಡಬೇಕು. ದಿನಾಲೂ ಅದರಲ್ಲಿ ಗ್ಯಾಸ್ ತುಂಬುತ್ತದೆ. ಆದ್ದರಿಂದ ದಿನಕ್ಕೊಮ್ಮೆ ಮುಚ್ಚಳ ತೆಗೆಯದಿದ್ದರೆ ಬಾಟಲಿ ಒಡೆದುಹೋಗುವ ಸಂಭವ ಇರುತ್ತದೆ. ಮೂರು ತಿಂಗಳಾದ ನಂತರ ಸೋಸಿ ಉಪಯೋಗಿಸಿ. ಇದನ್ನು ಗಿಡಗಳಿಗೆ ಫರ್ಟಿಲೈಜರ್ ರೀತಿ ಕೂಡ ಉಪಯೋಗಿಸಬಹುದು.

5. **ನೆಲ ಒರೆಸುವ ಲಿಕ್ವಿಡ್:** ಒಂದು ಕಪ್ ನೀರಿಗೆ ನಾಲ್ಕು ಚಮಚ ಉಪ್ಪು, ಎರಡು ಚಮಚ ಅಡುಗೆ ಸೋಡ, ಅರ್ಧ ಕಪ್ ವೈಟ್ ವಿನೆಗರ್, ಐದು ಕರ್ಪೂರ ಹಾಕಿ ಬೆರೆಸಿ ಉಪಯೋಗಿಸಿ. ಇದನ್ನು ಕೂಡಲೇ ಉಪಯೋಗಿಸಬಹುದು. ಪರಿಮಳಭರಿತ ಆಗಬೇಕಾದರೆ ಎರಡು ಮೂರು ಹನಿ ಎಸೆನ್ಷಿಯಲ್ ಆಯಿಲ್ ಅನ್ನು ಬೆರೆಸಬಹುದು.
6. **ಬಹೂಪಯೋಗಿ ಅಂಟುವಾಳ ಕಾಯಿ ನೀರು:** ಎರಡು ಲೀಟರ್ ನೀರಿಗೆ 35 ಅಂಟುವಾಳ ಕಾಯಿಯನ್ನು ಹಾಕಿ. ಅರ್ಧ ಪ್ರಮಾಣ ಬರುವವರೆಗೆ, ಅಂದರೆ ಒಂದು ಲೀಟರ್ ಆಗುವವರೆಗೆ ಕುದಿಸಿ ನಂತರ ಅದರ ಬೀಜವನ್ನು ಬಿಸಾಡಿ. ಬೀಜ ತೆಗೆದ ಕಾಯಿಯನ್ನು ಪುನಃ ನೀರಿನಲ್ಲಿ ಹಾಕಿ ಸರಿಯಾಗಿ ಕಿವುಚಿ ತೆಗೆಯಿರಿ. ಬಳಿಕ ಅದನ್ನು ಸೋಸಿ ಅನೇಕ ರೀತಿಯಲ್ಲಿ ಈ ನೀರನ್ನು ಉಪಯೋಗಿಸಬಹುದು–

ಎ. ನೆಲ ಒರೆಸುವ ಲಿಕ್ವಿಡ್– ಮೂರು ಕಪ್ ಅಂಟುವಾಳ ಕಾಯಿ ನೀರು, ಎರಡು ಕಪ್ ವಿನೆಗರ್, ಎರಡು ಚಮಚ ಕಲ್ಲುಪ್ಪು ಬೆರೆಸಿ ಉಪಯೋಗಿಸಿ.

ಬಿ. ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು ಬೇರೇನೂ ಬೆರೆಸದೆ ಬರೀ ಅಂಟುವಾಳ ಕಾಯಿಯ ನೀರನ್ನಷ್ಟೇ ಉಪಯೋಗಿಸಬಹುದು.

ಸಿ. ಲೋಹದ ಪಾತ್ರೆಯನ್ನು ತೊಳೆಯಲು ಒಂದು ಕಪ್ ಅಂಟುವಾಳ ಕಾಯಿ ನೀರು ಹಾಗೂ ಒಂದು ಕಪ್ ವಿನೆಗರ್ ಬೆರೆಸಿ ಉಪಯೋಗಿಸಿ. ವಿನೆಗರ್ ಬದಲು ಹುಣಿಸೆಹಣ್ಣನ್ನೂ ಬಳಸಬಹುದು.

ಡಿ. ಹ್ಯಾಂಡ್‌ವಾಷ್ ಲಿಕ್ವಿಡ್. ಒಂದು ಕಪ್ ಅಂಟುವಾಳ ಕಾಯಿ ನೀರು, ಸ್ವಲ್ಪ ಆ್ಯಲೊವೆರಾ ಜೆಲ್ ಬೆರೆಸಿ ಉಪಯೋಗಿಸಿ.



ಘಮ್ಮಂಬು ಬಿರಿಯಾನಿ ಮಾಡುಕಾತ್ ಬನಿ

ರಸಾಸ್ವಾದ

ಅಡುಗೆಯನ್ನೇನೋ ಮಾಡಿದ್ದಾಯಿತು; ಇನ್ನು ಈ ಅಡುಗೆಮನೆಯನ್ನು ಕ್ಲೀನ್ ಮಾಡುವುದು ಹೇಗಪ್ಪಾ, ಅಯ್ಯೋ... ಇಷ್ಟೊಂದು ಬೆಳ್ಳುಳ್ಳಿ ಸುಲಿಬೇಕಲ್ಲ; ಎಷ್ಟೊತ್ತಾಗುತ್ತೋ ಏನೊ, ಸಿಂಕ್‌ನಲ್ಲಿ ಯಾವಾಗ್ಲೂ ಪಾಚಿ ಕಟ್ಟಿಕೊಳ್ಳುತ್ತೆ; ಶುಚಿಯಾಗಿಡೋದು ಹೇಗೆ? ಟೊಮೆಟೊ ಬೇಗ ಹಾಳಾಗುತ್ತೆ, ಫ್ರೆಷ್ ಆಗಿಡಲು ಏನ್ ಮಾಡ್ಬೇಕು, ತೆಂಗಿನಕಾಯಿ ಮಿಕ್ಕಿದೆ, ಹಾಳಾಗದಂತೆ ಇಡೋದು ಹೇಗೆ? ಚಪಾತಿ ಹೇಗೆ ಲಟ್ಟಿಸಿದ್ರೂ ಒರಟಾಗೇ ಇರುತ್ತೆ, ಅದು ಮೃದುವಾಗಿ ಬರುವಂತೆ ಮಾಡೋದು ಹೇಗೆ? ಚಳಿಗಾಲದಲ್ಲಿ ದೋಸೆ ಹಿಟ್ಟು ಉಬ್ಬಿ ಬರೋದೇ ಇಲ್ವಲ್ಲ...

ಅಡುಗೆ ಮನೆಯೆಂಬೋ 'ಅರಮನೆ'ಯಲ್ಲಿ (ಕೆಲವರಿಗೆ ಅದು 'ಸೆರೆಮನೆ'ಯಂತೆಯೂ ಭಾಸವಾಗಬಹುದು!) ಪಾಕ ತಯಾರಿಗೂ ಹೊರತಾದ ಇಂತಹ ಅನೇಕ ಸಂಗತಿಗಳು ಹೆಂಗಳೆಯರನ್ನು ನಿತ್ಯ ಕಾಡುತ್ತವೆ. ಉದರದ ಹಸಿವು ನೀಗಿಸಲು ಏನಾದರೊಂದು ಅಡುಗೆ ಮಾಡಿಟ್ಟರಷ್ಟೇ ಸಾಕೆ? ಇಲ್ಲ, ಅದರಾಚೆಗೂ ತಾನಾಗೇ ಒದಗಿಬರುವ ಕೆಲಸಗಳನ್ನು ಅಚ್ಚುಕಟ್ಟಾಗಿ, ಅಲ್ಪ ಸಮಯದಲ್ಲೇ ಮಾಡಿ ಮುಗಿಸುವ ನಿತ್ಯದ ಸವಾಲು ಗೃಹಿಣಿಯದ್ದು. ಇಂತಹ ಸಣ್ಣ ಸಣ್ಣ ಸಂಗತಿಗಳಿಗೂ ಕನ್ನಡಿ ಹಿಡಿದು, ಫಟಾಫಟ್ ಎಂದು ಅಡುಗೆ ಮಾಡಿ ಮುಗಿಸೋಣ ಎನ್ನುತ್ತಾರೆ 'ಅಮ್ಮೀಸ್ ಕುಕರಿ' ಯೂಟ್ಯೂಬ್ ಚಾನೆಲ್‌ನ ಲತಾ ಶೆಟ್ಟಿ.

'ಅಡುಗೆ' ಒಂದು ಕಷ್ಟದ ಕೆಲಸ ಎಂದು ಮೂಗು ಮುರಿಯುವವರಿಗೆ, ದಿನವಿಡೀ ಅಡುಗೆ ಮನೆಯಲ್ಲೇ ಠಿಕಾಣಿ ಹೂಡುವವರಿಗೆ ಸುಲಭದಲ್ಲಿ, ರುಚಿಕಟ್ಟಾಗಿ ಪಾಕ ತಯಾರಿಸುವ ವಿಧಾನವನ್ನು ಹೇಳಿಕೊಡುತ್ತಲೇ ಅಡುಗೆಮನೆಯ ಇತರ ಕೆಲಸಗಳನ್ನು ಕರಗತ ಮಾಡಿಕೊಳ್ಳುವ ಗುಟ್ಟನ್ನೂ ರಟ್ಟು ಮಾಡುತ್ತಾರೆ ಲತಾ. ಜೊತೆಗೆ, ಅಡುಗೆ ಮನೆಗೇ ಅಂಟಿಕೊಂಡು ತಮ್ಮ ಸೌಂದರ್ಯಪ್ರಜ್ಞೆಯನ್ನೇ ಮರೆತ ವನಿತೆಯರಿಗೆ ಮನೆಯಲ್ಲೇ ಸೌಂದರ್ಯವನ್ನು ಇಮ್ಮಡಿಗೊಳಿಸಿಕೊಳ್ಳುವ ಕಿವಿಮಾತಿಗೂ ದನಿಯಾಗುತ್ತಾರೆ. ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗ ಮಾಡಿಕೊಂಡೇ ಯೂಟ್ಯೂಬ್ ಚಾನೆಲ್ ನಿರ್ವಹಿಸುತ್ತಿರುವ ಲತಾ, ಉದ್ಯೋಗಸ್ಥ ಹೆಣ್ಣುಮಕ್ಕಳ ಧಾವಂತದ ಬದುಕನ್ನು ಸ್ವತಃ ಅನುಭವಿಸಿದವರು. ಅಂತಹ ಮಿತಿಗಳನ್ನು ಮೀರಿ ಬೆಳೆಯಬಯಸುವ ಹೆಣ್ಣುಮಕ್ಕಳಿಗಾಗಿ ಬಹಳಷ್ಟು ಸಲಹೆಗಳು ಅವರ ಬಳಿ ಇವೆ.



ಲತಾ ಶೆಟ್ಟಿ

'ಹೆಣ್ಣುಮಕ್ಕಳು ಅಡುಗೆ ಮನೆಗೇ ಸೀಮಿತವಾಗಬಾರದು. ಅದರಾಚೆಗೂ ಆಕೆಗೊಂದು ಪ್ರಪಂಚವಿದೆ. ಅದನ್ನು ಆಕೆಯೇ ರೂಪಿಸಿಕೊಳ್ಳಬೇಕು. ಅಡುಗೆ ಮನೆಯ ಕೆಲಸ ಆಕೆಗೆ ಸುಲಭ ಎನಿಸಿದರೆ ಅಲ್ಲಿಂದ ಬೇಗ ಹೊರಬರಲು ಸಾಧ್ಯ. ಹಾಗಾಗಿಯೇ ಅಲ್ಲಿ ಕಾಡುವ ಸಣ್ಣಪುಟ್ಟ ಸಮಸ್ಯೆಗಳನ್ನೂ ಒರೆಗೆ ಹಚ್ಚಿ ಪರಿಹಾರ ಹುಡುಕುವ ಪ್ರಯತ್ನ ಮಾಡಿದ್ದೇನೆ' ಎನ್ನುವ ಅವರು, 5 ಲಕ್ಷಕ್ಕೂ ಹೆಚ್ಚು ಪಾಕಪ್ರಿಯರನ್ನು ತಮ್ಮ ಚಾನೆಲ್‌ನತ್ತ ಸೆಳೆದಿದ್ದಾರೆ. ಅವರು ಕೊಡುವ ಸಣ್ಣ ಸಣ್ಣ ಟಿಪ್ಸ್‌ಗಳ ವಿಡಿಯೊಗಳು 9 ಕೋಟಿಗೂ ಹೆಚ್ಚು ವೀಕ್ಷಣೆ ಕಂಡಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಲತಾ ಶೆಟ್ಟಿ, ತುಳುನಾಡಿನ ಸಸ್ಯಾಹಾರ, ಮಾಂಸಾಹಾರದ ಅಡುಗೆಗಳ ತಯಾರಿಯಲ್ಲಿ ಸಿದ್ಧಹಸ್ತರು. ಕರಾವಳಿ ಭಾಗದ ಸಾಂಪ್ರದಾಯಿಕ ಹಾಗೂ ಸಮಕಾಲೀನ ತಿನಿಸುಗಳಲ್ಲಿ, ಮಾಡಲು ಕಷ್ಟ ಎನಿಸುವಂತಹವನ್ನು ಸರಳವಾದ ರೀತಿಯಲ್ಲಿ ಇಷ್ಟಪಟ್ಟು ಮಾಡುವಂತೆ ಹೇಳಿಕೊಡುವ ಇರಾದೆಯನ್ನು ತಮ್ಮ ಚಾನೆಲ್‌ನಲ್ಲಿರುವ ಸ್ವವಿವರದಲ್ಲಿ ಉಲ್ಲೇಖಿಸಿದ್ದಾರೆ. ಕನ್ನಡ, ತುಳು, ಕುಂದಾಪುರ ಕನ್ನಡ ಶೈಲಿಯಲ್ಲಿ ಹೇಳಿಕೊಡುವುದು ಅವರ ಚಾನೆಲ್‌ನ ವಿಶೇಷ.

ಮೃದು ಚಪಾತಿ, ಬಗೆ ಬಗೆ ದೋಸೆ

ಲತಾ ಅವರು ತಯಾರಿಸಿರುವ ತರಹೇವಾರಿ ಚಪಾತಿ, ದೋಸೆಗಳು ಅವರ ಪ್ರಯೋಗಶೀಲತೆಗೆ ನಿದರ್ಶನದಂತಿವೆ. ಹಿಟ್ಟನ್ನು ಹೇಗೆ ಕಲಸಿದರೂ ಎಷ್ಟು ನಾದಿದರೂ ಚಪಾತಿ ಮೃದುವಾಗಿ ಬಾರದು ಎನ್ನುವವರಿಗೆ ಲತಾ ಹೇಳುವುದು ಹೀಗೆ: ಚಪಾತಿ ಹಿಟ್ಟಿಗೆ ಉಗುರು ಬೆಚ್ಚಗಿನ ನೀರು, ಸ್ವಲ್ಪ ಹಾಲು ಅಥವಾ ಮೊಸರು ಹಾಕಿ ಕಲಸಿ ಕೊನೆಯಲ್ಲಿ ಎಣ್ಣೆ ಸವರಿ ಇಡಬೇಕು. ಲಟ್ಟಿಸುವಾಗ ಒತ್ತಿ ಲಟ್ಟಿಸದೆ ಹಗೂರಕ್ಕೆ ಉಜ್ಜಬೇಕು.

ಮಸಾಲ ಚಪಾತಿ, ಈರುಳ್ಳಿ ಮಸಾಲ ಚಪಾತಿ, ಎಂಟು ಪದರದ ಚಪಾತಿ, ಮಸಾಲ ಗೋಧಿ ದೋಸೆ, ಟೊಮೆಟೊ ಮಸಾಲ ಗೋಧಿ ದೋಸೆ, ಈರುಳ್ಳಿ ಗೋಧಿ ದೋಸೆ, ಈರುಳ್ಳಿ–ಮೆಂತೆ– ಬೆಲ್ಲದ ದೋಸೆ... ಹೀಗೆ ಗೋಧಿ ಹಿಟ್ಟು ಅವರ ಪಾಕ ಪ್ರಯೋಗಕ್ಕೆ ಹಲವು ಬಗೆಯಲ್ಲಿ ಒಡ್ಡಿಕೊಂಡಿದೆ. ಮಂಗಳೂರು ಶೈಲಿಯ ಕೋಳಿ ಸಾರು, ಚಿಕನ್ ಸುಕ್ಕ, ಫಿಷ್ ತವಾ ಫ್ರೈ, ಕುಡ್ಲ ಫಿಷ್ ಫ್ರೈ, ಬಂಗುಡೆ ಮೀನು ಸಾರು, ತಂದೂರಿ ಚಿಕನ್, ಮಂಗಳೂರು ಕೋರಿ ಗಸ್ಸಿ, ಚಿಕನ್ ಘೀ ರೋಸ್ಟ್, ಘಮ ಘಮ ಬಿರಿಯಾನಿ... ಹೀಗೆ ತುಳುನಾಡಿನ ಸಾಂಪ್ರದಾಯಿಕ ಮಾಂಸಾಹಾರದ ಜೊತೆಗೆ, ಇದಕ್ಕೆ ಬೇಕಾಗುವ ಮಸಾಲ ಪುಡಿ ತಯಾರಿಸಿಕೊಳ್ಳುವುದನ್ನೂ ಹೇಳಿಕೊಟ್ಟಿದ್ದಾರೆ.

ಅಡುಗೆಗೆ ಬೆಳ್ಳುಳ್ಳಿ ಸಿಪ್ಪೆ ಬಿಡಿಸುವುದೆಂದರೆ ಬಹುತೇಕರಿಗೆ ರೇಜಿಗೆ. ಮೊದಲು ಬೆಳ್ಳುಳ್ಳಿಯಲ್ಲಿನ ತೆಳು ಪದರವನ್ನು ತೆಗೆದು, ಎಸಳುಗಳನ್ನು ಉಗುರುಬೆಚ್ಚಗಿನ ನೀರಿನಲ್ಲಿ ನಾಲ್ಕೈದು ನಿಮಿಷ ನೆನೆಸಿಟ್ಟರೆ, ಸಿಪ್ಪೆಯನ್ನು ಸುಲಭದಲ್ಲಿ ಬೇರ್ಪಡಿಸಬಹುದು. ಸಾಂಬಾರ್‌ಗೆ ಉಪ್ಪು ಹೆಚ್ಚಾದರೆ ಎರಡು ಚಮಚ ಅಕ್ಕಿಹಿಟ್ಟು ಅಥವಾ ಹುರಿಗಡಲೆ ಹಿಟ್ಟನ್ನು ನೀರಲ್ಲಿ ಕಲಸಿ ಹಾಕಿದರೆ ಉಪ್ಪಿನ ಪ್ರಮಾಣ ಕಡಿಮೆಯಾಗುತ್ತದೆ. ವಿನೆಗರ್ ಅಥವಾ ನಿಂಬೆರಸ, ಅಡುಗೆ ಸೋಡ, ಉಪ್ಪು ಬೆರೆಸಿ ಕಲಸಿ ಗ್ಯಾಸ್ ಕಟ್ಟೆ, ಟೈಲ್ಸ್‌ಗೆ ಸ್ಪ್ರೇ ಮಾಡಿ ಬಟ್ಟೆಯಲ್ಲಿ ಒರೆಸಿದರೆ ಅವು ಫಳಫಳ ಹೊಳೆಯುತ್ತವೆ

ಹಾಗೇ ಮುಖ ಕಾಂತಿಯುತವಾಗಿರಲು, ಕೂದಲು ಉದುರುವಿಕೆ ತಡೆಯಲು, ಮುಖದಲ್ಲಿನ ಕಪ್ಪುಕಲೆ, ಕಣ್ಣಿನ ಸುತ್ತ ಕಪ್ಪಾಗಿರುವುದನ್ನು ಸರಿಪಡಿಸಲು... ಹೀಗೆ ಲಲನೆಯರ ಸೌಂದರ್ಯವರ್ಧನೆಗೆ ಪೂರಕವಾದ ನಾನಾ ಬಗೆಯ ಟಿಪ್ಸ್‌ಗಳು ಅವರ ಬಳಿ ಇವೆ.

ಸುಮಾ ಬಿ.



ಹೀಗೆ ಮಾಡಿ ತಂದೂರಿ ಸ್ಟೈಲ್ ಚಿಕನ್ ಡ್ರೈ

ಅಲ್ಪ ಸಮಯದಲ್ಲಿ, ಕಡಿಮೆ ಪದಾರ್ಥ ಬಳಸಿ ಹೋಟೆಲ್ ಶೈಲಿಯಲ್ಲಿ ಮನೆಯಲ್ಲೇ ತಂದೂರಿ ಸ್ಟೈಲ್ ಚಿಕನ್ ಫ್ರೈ ಮಾಡಿ ಎನ್ನುತ್ತಾರೆ ಲತಾ ಶೆಟ್ಟಿ.

ಅರ್ಧ ಕೆ.ಜಿ. ಚಿಕನ್ ತಯಾರಿಸಲು: ಐದಾರು ಹಸಿ ಮೆಣಸಿನಕಾಯಿ, ಐದಾರು ಎಸಳು ಬೆಳ್ಳುಳ್ಳಿ, ಒಂದು ಇಂಚಷ್ಟು ಶುಂಠಿ, ಸ್ವಲ್ಪ ಪುದಿನ, ಕೊತ್ತಂಬರಿ ಸೊಪ್ಪು ಇದಷ್ಟನ್ನೂ ಸ್ವಲ್ಪ ನೀರು ಹಾಕಿ ಮಿಕ್ಸಿಯಲ್ಲಿ ಪೇಸ್ಟ್ ಮಾಡಿಕೊಳ್ಳಬೇಕು. ಈ ಪೇಸ್ಟ್ ಅನ್ನು ಒಂದು ಪಾತ್ರೆಗೆ ಹಾಕಿ ಅದಕ್ಕೆ 3-4 ಚಮಚ ಮೊಸರು, ಕಾಳು ಮೆಣಸಿನ ಪುಡಿ, ಗರಂ ಮಸಾಲಾ, ಚಿಕನ್ ಮಸಾಲಾ ಪುಡಿ, ಜೀರಿಗೆ ಪುಡಿ, ದನಿಯಾ ಪುಡಿ, ಅರಿಶಿನ ಪುಡಿ, ಖಾರದ ಪುಡಿ ಹಾಗೂ ಉಪ್ಪು (ಎಲ್ಲವೂ ಒಂದೊಂದು ಚಮಚ), ಎರಡು ಚಮಚ ನಿಂಬೆಹಣ್ಣಿನ ರಸ ಸೇರಿಸಿ ಚೆನ್ನಾಗಿ ಕಲಸಬೇಕು.

ಅದಕ್ಕೆ ಚೆನ್ನಾಗಿ ತೊಳೆದಿರುವ ಚಿಕನ್ ಅನ್ನು ನೀರಿನ ಪಸೆ ಇಲ್ಲದಂತೆ ಮಾಡಿ ಮಸಾಲೆಗೆ ಹಾಕಿ ಕೈಯಿಂದ ಚೆನ್ನಾಗಿ ಕಲಸಿ 15ರಿಂದ 30 ನಿಮಿಷ ಹಾಗೇ ಬಿಡಬೇಕು. ಬಳಿಕ ಬಾಣಲೆಯಲ್ಲಿ ತುಪ್ಪ ಅಥವಾ ಬೆಣ್ಣೆ ಹಾಕಿ ಕಲೆಸಿಟ್ಟಿರುವ ಚಿಕನ್ ಮಸಾಲ ಹಾಕಬೇಕು. 4–5 ನಿಮಿಷ ತಾಟು ಮುಚ್ಚಿ ಬೇಯಿಸಿ, ಮಗುಚಿ ಮತ್ತೆ ಬೇಯಿಸಬೇಕು. ನೀರಿನ ಪಸೆ ಇಂಗುವವರೆಗೆ ರೋಸ್ಟ್ ಮಾಡಿದರೆ ತಂದೂರಿ ಸ್ಟೈಲ್ ಚಿಕನ್ ಡ್ರೈ ಸವಿಯಲು ಸಿದ್ಧ.

ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿ ಮಳೆ

ಕರಾವಳಿಯಲ್ಲಿ ತಗ್ಗಿದ ಮಳೆ: ಅವಘಡದಲ್ಲಿ ಮೂವರ ಸಾವು
ಕೊಡಗಿನಲ್ಲಿ 'ರೆಡ್ ಅಲರ್ಟ್' ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು, ಧಾರವಾಡ, ಉತ್ತರ ಕನ್ನಡ, ಬೀದರ್ ಜಿಲ್ಲೆಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ.

ಆದರೆ, ಕರಾವಳಿಯಲ್ಲಿ ಶುಕ್ರವಾರದಂದು ಮಳೆ ಪ್ರಮಾಣ ತುಸು ತಗ್ಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

ಹುಬ್ಬಳ್ಳಿ ವರದಿ: ಧಾರವಾಡ, ಉತ್ತರ ಕನ್ನಡ ಮತ್ತು ಗದಗ ಜಿಲ್ಲೆಯ ಬಹುತೇಕ ಕಡೆ ಶುಕ್ರವಾರ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆ ಕರಾವಳಿ ಭಾಗದಲ್ಲಿ ಆಗಾಗ ಬಿರುಸಿನ ಮಳೆ ಸುರಿಯಿತು. ಮಲೆನಾಡು ಭಾಗದಲ್ಲಿ ನಿರಂತರ ಮಳೆಯಾಗುತ್ತಿದೆ. ಭಟ್ಕಳ, ಹೊನ್ನಾವರ, ಕುಮಟಾ ಭಾಗದಲ್ಲಿ ಹಳ್ಳಗಳು ಭರ್ತಿಯಾಗಿವೆ. ಜಿಲ್ಲೆಯ ಸೂಪಾ, ಕದ್ರಾ ಜಲಾಶಯಗಳಿಗೆ ಒಳಹರಿವಿನ ಪ್ರಮಾಣ 20 ಸಾವಿರ ಕ್ಯೂಸೆಕ್ ಮೀರಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಮತ್ತು ಸುತ್ತಮುತ್ತಲೂ ಮಳೆಯಾಯಿತು. ಹುಬ್ಬಳ್ಳಿಯಲ್ಲಿ ಕೆಲ ಕಡೆ ರಸ್ತೆಗಳು ಜಲಾವೃತವಾಗಿದ್ದವು. ಗದಗ ಜಿಲ್ಲೆಯ ಗಜೇಂದ್ರಗಡ, ನರಗುಂದ ಭಾಗದಲ್ಲಿ ಮಳೆಯಾಯಿತು.

ಕೊಪ್ಪಳ, ಬೀದರ್‌ನಲ್ಲಿ ಉತ್ತಮ: ಕೊಪ್ಪಳ ಜಿಲ್ಲೆಯಾದ್ಯಂತ ಶುಕ್ರವಾರ ಉತ್ತಮ ಮಳೆಯಾಗಿದ್ದು, ಮಳೆ ಕೊರತೆಯಿಂದ ಆತಂಕದಲ್ಲಿದ್ದ ರೈತರಿಗೆ ಇದರಿಂದ ಖುಷಿಯಾಗಿದೆ.

ಕೊಪ್ಪಳ, ಮುನಿರಾಬಾದ್, ಗಂಗಾವತಿ ಭಾಗದಲ್ಲಿ ಜೋರು ಮಳೆ ಬಂದಿದೆ. ಹಲವು ದಿನಗಳ ಬಿಡುವಿನ ನಂತರ ಬೀದರ್ ಜಿಲ್ಲೆಯ ಹಲವೆಡೆ ಶುಕ್ರವಾರ ಉತ್ತಮ ಮಳೆಯಾಗಿದೆ. ಬೀದರ್ ನಗರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ವಿದ್ಯುತ್ ಸಹಿತ ಸುಮಾರು ಒಂದು ಗಂಟೆ ಜೋರಾಗಿ ಮಳೆ ಸುರಿದಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಸಾಧಾರಣ ಮಳೆಯಾಯಿತು. ಭಾರಿ ಮಳೆ ಮುನ್ಸೂಚನೆ ಇದ್ದು, ಹವಾಮಾನ ಇಲಾಖೆ ಶನಿವಾರ (ಜುಲೈ 19) ರೆಡ್ ಅಲರ್ಟ್ ಘೋಷಿಸಿದೆ. ಭಾಗಮಂಡಲದಲ್ಲಿ 4 ಸೆಂ.ಮೀ ಮಳೆಯಾಗಿದೆ.

ಕೊಡಗು ಜಿಲ್ಲೆಯ ಗಡಿ ಭಾಗ ಕರಿಕೆ–ಕೇರಳದ ಕಾಸರಗೋಡಿನ ಪಾಣತ್ತೂರು ಮಧ್ಯೆ ಹರಿಯುವ ಮಂಜಾಡ್ಕ ನದಿಯಲ್ಲಿ ಬೆಳಗಾವಿಯ ಯುವಕ ದುರುಗಪ್ಪ ಮಾದಾರ (19) ಎಂಬುವವರು ಬೈಕ್ ಸಮೇತ ಕೊಚ್ಚಿ ಹೋಗಿರುವ ಶಂಕೆ ಇದ್ದು, ನದಿಯಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಹುಬ್ಬಳ್ಳಿ ದಾಜಿಬಾನ್‌ಪೇಟೆಯ ರಸ್ತೆ ಮಳೆಯಿಂದಾಗಿ ಜಲಾವೃತವಾಗಿತ್ತು –ಪ್ರಜಾವಾಣಿ ಚಿತ್ರ

ಮಳೆ: ದಂಪತಿ, ಕಾರ್ಮಿಕನ ಶವ ಪತ್ತೆ

ಮಂಗಳೂರು: ನಗರದಲ್ಲಿ ಮಧ್ಯಾಹ್ನದ ನಂತರ ಮಳೆಯ ತೀವ್ರತೆ ಹೆಚ್ಚಾಯಿತು. ಉಳ್ಳಾಲ ಬಳಿಯ ಪಿಲಾರು ರಾಜಕಾಲುವೆ ಕಾಲುಸಂಕ ದಾಟುವಾಗ ಬುಧವಾರ ನೀರು ಪಾಲಾಗಿದ್ದ ಕೂಲಿಕಾರ್ಮಿಕ, ಸೋಮೇಶ್ವರ ಗ್ರಾಮದ ಕುಂಪಲ ಆಶ್ರಯ ಕಾಲೊನಿಯ ಕೇಶವ ಶೆಟ್ಟಿ (64) ಅವರ ಮೃತದೇಹ ಶುಕ್ರವಾರ ರಾಜಕಾಲುವೆಯಲ್ಲಿ ಪತ್ತೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನ ಹೊಡೆಯಾಲದಲ್ಲಿ ಹಳ್ಳ ಉಕ್ಕಿ ಹರಿದು ಗುರುವಾರ ನೀರಿನಲ್ಲಿ ಕೊಚ್ಚಿಹೋಗಿದ್ದ ಈಶ್ವರ (65), ಲತಾ (55) ದಂಪತಿಯ ಶವಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123.12	17,705	15,600
ಹಾರಂಗಿ	2,859	2,856.69	4,511	4,878
ಕಬಿನಿ	2,284.00	2,282.51	24,180	17,292
ಹೇಮಾವತಿ	2,922	2,920.97	9,491	9,650
ಲಿಂಗನಮಕ್ಕಿ	1,819	1,802.60	19,647	6,650
ಸೂಪಾ (ಮೀ)	564	546.51	20,314	5,157.94
ವಾಣಿ	595	587.60	2,153	-
ತುಂಗಭದ್ರಾ	1,633	1,626.06	33,844	33,486
ಮಲಪ್ರಭಾ	2,079.50	2,072.40	6,906	194
ಘಟಪ್ರಭಾ	2175	2,169.75	10,076	11,750
ಭದ್ರಾ *	186	178.3	16,017	3,679
ಆಲಮಟ್ಟಿ (ಮೀ)	519.6	518.10	95,868	89,074
ನಾರಾಯಣಪುರ (ಮೀ)	492.25	491.38	90,000	96,750

* ನೆಲಮಟ್ಟದಿಂದ

ಇಎಸ್‌ಐ ನೋಂದಣಿಗೆ ಒಂದು ಬಾರಿ ಅವಕಾಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಡಿಸೆಂಬರ್ 31ರ ವರೆಗೆ ವಿಮೆ ನೋಂದಣಿಗೆ ಅವಕಾಶ
- ಇಎಸ್‌ಐಸಿ, ಶ್ರಮ ಸುವಿಧಾ, ಪೋರ್ಟಲ್‌ನಲ್ಲಿ ನೋಂದಣಿ
- ನೋಂದಣಿ ಪೂರ್ವ ಅವಧಿಯ ದಾಖಲೆಗಳ ಪರಿಶೀಲನೆ ಇಲ್ಲ

ಬೆಂಗಳೂರು: ಕಾರ್ಮಿಕರ ವಿಮಾ ಯೋಜನೆಗೆ ನೋಂದಣಿ ಮಾಡದೇ ಇರುವ ಉದ್ಯೋಗದಾತರು ಯಾವುದೇ ಹಿಂಬಾಕಿ ಮತ್ತು ಪರಿಶೀಲನೆ ಇಲ್ಲದೆ, ನೋಂದಣಿ ಮಾಡಿಸಲು ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ಒಂದು ಬಾರಿಯ ಅವಕಾಶ ನೀಡಿದೆ.

ಹತ್ತು ಮತ್ತು ಅದಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಸಂಸ್ಥೆ, ಕಾರ್ಖಾನೆಗಳು ಇಎಸ್‌ಐ ನೋಂದಣಿ ಮಾಡಿಸುವುದು ಹಾಗೂ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ವಂತಿಗೆ ಕಟ್ಟುವುದು ಕಡ್ಡಾಯ. ಅಂತಹ ಸಂಸ್ಥೆಗಳು ಆರಂಭವಾದ 15 ದಿನಗಳ ಒಳಗೆ ನೋಂದಣಿ ಮಾಡಿಸಬೇಕು ಎಂದು ಇಎಸ್‌ಐ ಕಾಯ್ದೆ ಹೇಳುತ್ತದೆ.

'ಹೆಚ್ಚಿನ ಉದ್ಯೋಗದಾತರು ತಮ್ಮ ಕಾರ್ಮಿಕರ ಇಎಸ್‌ಐ ನೋಂದಣಿ ಮಾಡಿಸುವುದಿಲ್ಲ. ಇದರಿಂದಾಗಿ ಕಾರ್ಮಿಕರು ಸಾಮಾಜಿಕ ಭದ್ರತಾ ಸವಲತ್ತುಗಳು, ಆರೋಗ್ಯ ವಿಮೆಯಂತಹ ಸವಲತ್ತುಗಳನ್ನು ಕಳೆದುಕೊಳ್ಳುತ್ತಾರೆ. ಹೀಗೆ ವಿಮೆ ವಂಚಿತರಾದ ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಗೆ ತರಲು ವಿಶೇಷ ಯೋಜನೆ ರೂಪಿಸಲಾಗಿದೆ' ಎಂದು ಇಎಸ್‌ಐಸಿ ಪ್ರಾದೇಶಿಕ ನಿರ್ದೇಶಕ ಮನೋಜ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ರಾಜ್ಯದಲ್ಲಿ 35 ಲಕ್ಷದಷ್ಟು ಕಾರ್ಮಿಕರು ಇಎಸ್‌ಐ ನೋಂದಣಿ ಹೊಂದಿದ್ದು, 1.40 ಕೋಟಿ ಮಂದಿ ಅದರ ವ್ಯಾಪ್ತಿಯಲ್ಲಿದ್ದಾರೆ. ಈ ಮೊದಲು, ನೋಂದಣಿ ಮಾಡಿಸದೇ ಇದ್ದ ಉದ್ಯೋಗದಾತರಿಂದ ವಂತಿಗೆ ಹಿಂಬಾಕಿ ವಸೂಲಿ ಮಾಡಲಾಗುತ್ತಿತ್ತು. ಈಗ ಹಿಂಬಾಕಿ ಇಲ್ಲದೆಯೇ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಉದ್ಯೋಗ ಪ್ರೋತ್ಸಾಹ ಯೋಜನೆ: 'ಮೊದಲ ಬಾರಿಗೆ ಉದ್ಯೋಗ ಪಡೆದು ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯಲ್ಲಿ (ಇಪಿಎಫ್‌ಒ) ನೋಂದಣಿ ಮಾಡಿಸಿದವರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದೇ ಆಗಸ್ಟ್ 1ರಿಂದ ಜಾರಿಯಾಗಲಿದೆ' ಎಂದು ಮನೋಜ್ ಕುಮಾರ್ ಅವರು ತಿಳಿಸಿದರು.

'ಮೊದಲ ಬಾರಿಗೆ ಮಾಸಿಕ ₹15,000 ವೇತನ ಪಡೆದವರು ಯೋಜನೆಯ ಪ್ರಯೋಜನ ಪಡೆಯಬಹುದು' ಎಂದು ಮಾಹಿತಿ ನೀಡಿದರು.

'ಸಿ.ಎಂ ಅಳಿವು–ಉಳಿವಿನ ಸಮಾವೇಶ'

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಳಿವು–ಉಳಿವಿನ ಸಮಾವೇಶವನ್ನು ಮೈಸೂರಿನಲ್ಲಿ ನಡೆಸಲಾಗುತ್ತಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬ ಮಾತು ಆ ಪಕ್ಷದಲ್ಲೇ ಕೇಳಿ ಬರುತ್ತಿದ್ದ ಕಾರಣ ಆರಂಭದಿಂದಲೇ ಸರ್ಕಾರಕ್ಕೆ ಅಸ್ಥಿರತೆ ಕಾಡುತ್ತಲೇ ಇದೆ. ಈ ಸಮಾವೇಶದಿಂದ ಯಾವುದೇ ಉಪಯೋಗವಿಲ್ಲ ಎಂದರು.

ವಾಲ್ಮೀಕಿ ನಿಗಮದ ಹಗರಣ, 2,500 ರೈತರ ಆತ್ಮಹತ್ಯೆ, 1,200 ನವಜಾತ ಶಿಶುಗಳ ಸಾವು, ಬಾಣಂತಿಯರ ಸಾವು, ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಆತ್ಮಹತ್ಯೆ, ಘಟನೆಗಳನ್ನು ಸಂಭ್ರಮಿಸಲು ಸಮಾವೇಶವೇ ಎಂದು ಪ್ರಶ್ನಿಸಿದರು.

22 ಸಾವಿರ ಡ್ರಗ್ಸ್ ಪೆಡ್ಲರ್ಸ್ ಸೆರೆ

ಚಂಡೀಗಢ (ಪಿಟಿಐ): ಮಾದಕ ವಸ್ತುಗಳ ವಿರುದ್ಧದ ಪಂಜಾಬ್ ರಾಜ್ಯ ಸರ್ಕಾರದ ಅಭಿಯಾನದ ಅಡಿಯಲ್ಲಿ ಈವರೆಗೆ ಸುಮಾರು 22,377 ಮಂದಿ ಮಾದಕ ದ್ರವ್ಯ ಕಳ್ಳಸಾಗಣೆದಾರರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು.

ನಿಧನ ವಾರ್ತೆ

ಮಹಾಬಲೇಶ್ವರ್



ಬೆಂಗಳೂರು: ನಗರದ ಹೊಸಕೆರೆಹಳ್ಳಿಯ ನಿವಾಸಿ, ಭೂವಿಜ್ಞಾನ ವಿಷಯದ ನಿವೃತ್ತ ಪ್ರಾಧ್ಯಾಪಕ ಬಿ.ಮಹಾಬಲೇಶ್ವರ್ (83) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಸಂಜೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1942ರ ಜನವರಿ 25ರಂದು ಮಂಗಳೂರಿನಲ್ಲಿ ಜನಿಸಿದ ಮಹಾಬಲೇಶ್ವರ್ ಅವರು, ಮದ್ರಾಸ್‌ನ ರಾಮಕೃಷ್ಣ ಮಿಷನ್ ಶಾಲೆಯಲ್ಲಿ ಪ್ರೌಢಶಿಕ್ಷಣ, ಆಂಧ್ರದ ಅನಂತಪುರದಲ್ಲಿ ಕಾಲೇಜು ಶಿಕ್ಷಣ ಮತ್ತು ತಿರುಪತಿ ಶ್ರೀವೆಂಕಟೇಶ್ವರ ವಿಶ್ವವಿದ್ಯಾಲಯದಿಂದ ಎಂಎಸ್‌ಸಿ ಪದವಿ ಪಡೆದರು. 1970ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದರು.

1962ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿದ ಮಹಾಬಲೇಶ್ವರ್ ಅವರು 35 ವರ್ಷಕ್ಕೂ ಹೆಚ್ಚು ಕಾಲ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ನಂತರ ಸಿಂಡಿಕೇಟ್ ಸದಸ್ಯರಾಗಿಯೂ ಕೆಲಸ ಮಾಡಿದ್ದರು.

ಸುಮಾರು 20ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಬ್ರಿಟನ್, ಫ್ರಾನ್ಸ್, ಜರ್ಮನಿ, ಜಪಾನ್, ಅಮೆರಿಕ ಸೇರಿದಂತೆ ಅನೇಕ ದೇಶಗಳ ಭೂವಿಜ್ಞಾನಿಗಳೊಂದಿಗೆ ಕೆಲಸ ಮಾಡಿ ವಿಶ್ವಮಟ್ಟದಲ್ಲೂ ಖ್ಯಾತಿ ಪಡೆದಿದ್ದರು.

2002ರಲ್ಲಿ ನಿವೃತ್ತಿಯಾದ ನಂತರವೂ ತಮ್ಮ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಜೊತೆಗೆ, ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯ ಉಪಾಧ್ಯಕ್ಷರಾಗಿ, ಸಂಸ್ಥೆ ಪ್ರಕಟಿಸುವ ನಿಯತಕಾಲಿಕಕ್ಕೆ ಸಂಪಾದಕರಾಗಿ ಕೆಲಸ ಮಾಡಿದ್ದರು.

ಚಟಕೆ ಸುದ್ದಿ

ವಿದ್ಯುತ್ ಪ್ರವಹಿಸಿ ಮೂವರ ಸಾವು

ಕೆಂಭಾವಿ (ಯಾದಗಿರಿ): ಸದಬ ಗ್ರಾಮದಲ್ಲಿ ಜಮೀನಿನಲ್ಲಿ ಶುಕ್ರವಾರ ಕೆಲಸ ಮಾಡುತ್ತಿದ್ದ ಮೂವರು ವಿದ್ಯುತ್ ಪ್ರವಹಿಸಿ ಮೃತಪಟ್ಟಿದ್ದಾರೆ. ಈರಪ್ಪ (40), ಸುರೇಶ (23), ದೇವು ಅಗತೀರ್ಥ (30) ಮೃತರು.



ಟ್ರಾನ್ಸ್‌ಫಾರ್ಮರ್ ಹತ್ತಿರ ಇದ್ದ ಸರ್ವಿಸ್ ತಂತಿ ತುಳಿದಿದ್ದರಿಂದ ಮೊದಲು ಒಬ್ಬರಿಗೆ ವಿದ್ಯುತ್ ಆಘಾತವಾಗಿದೆ. ರಕ್ಷಿಸಲು ಹೋದ ಮತ್ತೊಬ್ಬರಿಗೂ ವಿದ್ಯುತ್ ಪ್ರವಹಿಸಿದೆ. ಇಬ್ಬರನ್ನು ರಕ್ಷಿಸಲು ಹೋದ ಮೂರನೇ ವ್ಯಕ್ತಿಯೂ ವಿದ್ಯುತ್ ಆಘಾತದಿಂದ ಸ್ಥಳದಲ್ಲಿಯೇ ಅಸುನೀಗಿದ್ದಾರೆ. ಮೃತರಲ್ಲಿ ಇಬ್ಬರು ಸದಬ, ಒಬ್ಬರು ಅಗತೀರ್ಥ ಕ್ಯಾಂಪ್ ನಿವಾಸಿಗಳು. ಕುಟುಂಬಸ್ಥರ ರೋದನ ಮುಗಿಲು ಮುಟ್ಟಿತ್ತು. ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂ.ಎಂ ಹಿಲ್ಸ್‌ಗೆ ಭಾಸ್ಕರ್ ಡಿಸಿಎಫ್

ಬೆಂಗಳೂರು: ಮಲೆ ಮಹದೇಶ್ವರ (ಎಂ.ಎಂ ಹಿಲ್ಸ್) ವನ್ಯಜೀವಿಧಾಮದ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಭಾಸ್ಕರ್ ಬಿ. ಅವರನ್ನು ವರ್ಗಾವಣೆ ಮಾಡಲಾಗಿದೆ. ಮಲೆ ಮಹದೇಶ್ವರ ಬೆಟ್ಟದಲ್ಲಿ ಐದು ಹುಲಿಗಳ ಅಸ್ವಾಭಾವಿಕ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪ ಆರೋಪದ ಮೇಲೆ ಈ ಹಿಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ವೈ.ಚಕ್ರಪಾಣಿ ಅವರನ್ನು ಸರ್ಕಾರ ಅಮಾನತುಗೊಳಿಸಿತ್ತು.

ದ್ವಿಭಾಷಾ ನೀತಿ ಬೆಂಬಲಿಸಿ 50 ಸಾವಿರ ಸಹಿ

ಬೆಂಗಳೂರು: ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೆ ತರಬೇಕು ಎಂದು ಒತ್ತಾಯಿಸಿ 'ನಮ್ಮ ನಾಡು ನಮ್ಮ ಆಳ್ವಿಕೆ' ಪಕ್ಷವು 50,000 ಜನರ ಸಹಿ ಸಂಗ್ರಹಿಸಿದೆ. ಈ ವಿಚಾರವಾಗಿ ಆನ್‌ಲೈನ್‌ನಲ್ಲಿ ಸಹಿ ಸಂಗ್ರಹ ಅಭಿಯಾನ ಆರಂಭಿಸಿದ್ದ ಪಕ್ಷವು, ಸಂಬಂಧಿತ ಮನವಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದೆ.

ನಮ್ಮ ನಾಡು ನಮ್ಮ ಆಳ್ವಿಕೆಯ ಕವಿರಾಜ್ ಅವರು ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದು, 'ನಾವು ರೂಪಿಸಿದ್ದ ಆನ್‌ಲೈನ್ ಅರ್ಜಿಗೆ 50 ಸಾವಿರ ಜನರು ಸಹಿ ಮಾಡಿದ್ದು, ಇದೊಂದು ಮಹತ್ವದ ಮೈಲುಗಲ್ಲು. ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಲುಪಿಸುವುದು ನಮ್ಮ ಜವಾಬ್ದಾರಿಯಾಗಿತ್ತು. ಅದನ್ನು ಮಾಡಿದ್ದೇವೆ' ಎಂದಿದ್ದಾರೆ.

'50 ಸಾವಿರ ಕನ್ನಡಿಗರ ಬೆಂಬಲದ ಸಹಿ ಹಾಕಿಸಿದ್ದೇವೆ ಅಂದಾಗ, ಎಲ್ಲಿ ಹಾಕ್ಸಿದ್ರಿ? ಹ್ಯಾಗೆ? ಎಂದು ಕುತೂಹಲದೊಂದಿಗೆ ಕೇಳಿದರು. ದ್ವಿಭಾಷಾ ನೀತಿ ಜಾರಿಗೆ ತಂದರೆ ಕನ್ನಡದ ಮಕ್ಕಳಿಗೆ ಸಹಾಯ ಆಗುತ್ತದೆ ಎಂದಾಗ, ಮುಖ್ಯಮಂತ್ರಿ ಅವರು ಸಮ್ಮತಿ ಎಂಬಂತೆ ತಲೆ ಆಡಿಸಿದರು' ಎಂದು ಬರೆದಿದ್ದಾರೆ.

ಪರಿಶಿಷ್ಟ ಬಾಲಕಿಗೆ ನಿಂದನೆ ದೇಗುಲದಿಂದ ಹೊರಕ್ಕೆ: ದೂರು

ಗುಬ್ಬಿ: ತಾಲ್ಲೂಕಿನ ತೊರೇಹಳ್ಳಿ ಬೇವಿನಗುಡ್ಡಪ್ಪ ಸ್ವಾಮಿ (ಆಂಜನೇಯ ಸ್ವಾಮಿ) ದೇವಸ್ಥಾನ ಪ್ರವೇಶಿಸಿದ್ದ ಪರಿಶಿಷ್ಟ ಜಾತಿ ಬಾಲಕಿಯನ್ನು ನಿಂದಿಸಿ, ದೇಗುಲದಿಂದ ಹೊರಗಡೆ ಕಳುಹಿಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. 'ಬೇವಿನಗುಡ್ಡಪ್ಪ ಅಭಿವೃದ್ಧಿ ಟ್ರಸ್ಟ್‌ನವರು ಮಗಳನ್ನು ಅವಾಚ್ಯವಾಗಿ ನಿಂದಿಸಿದ್ದಾರೆ. ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಬಾಲಕಿಯ ತಾಯಿ ದೊಡ್ಡಮ್ಮ ಗುರುವಾರ ತಹಶೀಲ್ದಾರ್‌ಗೆ ದೂರು ನೀಡಿದ್ದಾರೆ.

'ದೇವಸ್ಥಾನದಲ್ಲಿ ಹಿಂದಿನಿಂದಲೂ ಪರಿಶಿಷ್ಟರಿಗೆ ಪ್ರವೇಶ ನೀಡುತ್ತಿಲ್ಲ. ಸಮುದಾಯ ಭವನದಲ್ಲಿ ಊಟಕ್ಕೆ ಹೊರಗೆ ಕೂರಿಸುತ್ತಾರೆ. ಜಾತ್ರೆ ವೇಳೆ ದೇವರ ಮೂರ್ತಿಗಳನ್ನು ಪರಿಶಿಷ್ಟರ ಬೀದಿಗೆ ಕಳುಹಿಸುವುದಿಲ್ಲ' ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಇಲಾಖೆ ಬಯಸಿದರೆ ಎಸ್‌ಐಟಿ ರಚನೆ'

ಧರ್ಮಸ್ಥಳ ಪ್ರಕರಣ: ಸರ್ಕಾರದ ಮೇಲೆ ಯಾವುದೇ ಒತ್ತಡವಿಲ್ಲ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಕೊಲೆ ಕೃತ್ಯದ ಆರೋಪ ಕುರಿತ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಪೊಲೀಸ್ ಇಲಾಖೆಯವರು ಹೇಳಿದರೆ ಮಾಡುತ್ತೇವೆ. ಈ ಕುರಿತು ಸರ್ಕಾರದ ಮೇಲೆ ಯಾವುದೇ ಒತ್ತಡವಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಈ ಬಗ್ಗೆ ಯಾರೇ ಒತ್ತಡ ಹಾಕಿದರೂ, ಯಾರ ಮಾತೂ ಕೇಳುವುದಿಲ್ಲ. ಕಾನೂನು ಪಾಲಿಸುತ್ತೇವೆ' ಎಂದು ಹೇಳಿದರು.



ಸೆಪ್ಟೆಂಬರ್‌ನಲ್ಲಿ ಕ್ರಾಂತಿ ಆಗುತ್ತದೆ ಎಂದು ನಾನೇನೂ ಹೇಳಿರಲಿಲ್ಲ. ಯಾರು ಹೇಳಿದ್ದಾರೆಯೋ ಅವರನ್ನೇ ಕೇಳಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ತನಿಖೆಗೆ ಎಸ್‌ಐಟಿ ರಚಿಸಬೇಕೆಂಬ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರ ಹೇಳಿಕೆ ಕುರಿತು, 'ನಾವು ಪರವೂ ಇಲ್ಲ, ವಿರೋಧವೂ ಇಲ್ಲ. ಇಲಾಖೆಯವರ ವರದಿ ಆಧರಿಸಿ ಎಸ್‌ಐಟಿ ರಚಿಸುತ್ತೇವೆ. ಶನಿವಾರದೊಳಗೆ ಎಲ್ಲವೂ ಗೊತ್ತಾಗಲಿದೆ' ಎಂದರು.

'ದೂರುದಾರ 10 ವರ್ಷ ತಲೆಮರೆಸಿಕೊಂಡಿದ್ದ. ಈಗ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾನೆ. ತಾನೇ ಹೂತು ಹಾಕಿದ್ದೇನೆ ಎಂದೆಲ್ಲಾ ಹೇಳಿದ್ದಾನೆ. ಆ ಜಾಗಕ್ಕೆ ಕರೆದುಕೊಂಡು ಹೋದರೆ ಹೆಣಗಳನ್ನು ತೋರಿಸುತ್ತೇನೆ ಎಂದೂ ಹೇಳಿದ್ದಾನೆ. ಪೊಲೀಸರು ಏನು ಹೇಳುತ್ತಾರೆಯೋ ನೋಡೋಣ' ಎಂದು ಹೇಳಿದರು.

'ಪ್ರಕರಣದಲ್ಲಿ ತನಿಖೆ ಸರಿಯಾಗಿ ಆಗುತ್ತಿಲ್ಲ' ಎಂಬ ಗೋಪಾಲಗೌಡರ ಹೇಳಿಕೆ ಕುರಿತು, 'ಕಾನೂನು ರೀತಿ ಮಾಡಬೇಕಲ್ಲವೇ? ಎತ್ತು, ಈಯ್ತು ಅಂದ್ರೆ ಕೊಟ್ಟಿಗೆಗ್ ಕಟ್ಟು ಅನ್ನೊಕಾಯ್ತುದಾ?' ಎಂದು ಹೇಳಿದರು.

ಮುಖ್ಯಮಂತ್ರಿ ಅವರು ಹೇಳಿದ್ದು..:

- 'ದಲಿತರಿಗೆ ಸ್ಥಾನ ಬಿಟ್ಟುಕೊಡಲಿ ಎಂದು ಹೇಳುತ್ತಿರುವ ಬಿ.ವೈ.ವಿಜಯೇಂದ್ರ ಮೊದಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು ದಲಿತರಿಗೆ ಬಿಟ್ಟುಕೊಡಲಿ, ಮೋದಿ ಪ್ರಧಾನಿ ಸ್ಥಾನ ನೀಡಲಿ. ನಮ್ಮಲ್ಲಿ ಎಲ್ಲರೂ ಆಗಿದ್ದಾರೆ. ಕಾಂಗ್ರೆಸ್ ಮಾತ್ರ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ, ಬಿಜೆಪಿಯಲ್ಲ
- 'ಬೆಂಗಳೂರಿನಲ್ಲಿ ಶಾಲೆಗಳಿಗೆ ಬಾಂಬ್ ಬೆದರಿಕೆ ಒಡ್ಡಿರುವುದು ಗಮನಕ್ಕೆ ಬಂದಿದೆ. ಹುಸಿ ಬಾಂಬ್ ಕರೆ, ಸುಳ್ಳು ಮಾಹಿತಿ, ಪ್ರಚೋದನೆ ನೀಡುವುದು ತಡೆಯಲೆಂದೇ ಕಾನೂನು ತರುತ್ತಿದ್ದೇವೆ.
- 'ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ–2ರ (ಬ್ರಿಜೇಶ್ ಕುಮಾರ್ ಆಯೋಗ) ಅವಧಿ ಮತ್ತೊಂದು ವಿಸ್ತರಿಸಿರುವ ಕೇಂದ್ರದ ಕ್ರಮದ ಬಗ್ಗೆ ನಮ್ಮ ವಿರೋಧವಿಲ್ಲ. ಇದರಿಂದ ನಾವು ಕೊಡಬೇಕಾದ ನೀರಿನ ಪಾಲಿನ ಪ್ರಮಾಣ ಜಾಸ್ತಿಯೇನೂ ಆಗುವುದಿಲ್ಲ.
- 'ಬೆಂಗಳೂರಿನಲ್ಲಿನ ನಡೆದ ಕಾಲ್ತುಳಿತ ಕುರಿತು ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಆಯೋಗವು ವರದಿ ಕೊಟ್ಟಿದೆ. ಎಲ್ಲ ಸಚಿವರಿಗೂ ಪ್ರಮುಖಾಂಶಗಳ ಪ್ರತಿ ಕೊಟ್ಟಿದ್ದೇವೆ. ಓದಿಕೊಂಡು ಬನ್ನಿ. ಮುಂದಿನ ಸಭೆಯಲ್ಲಿ ಚರ್ಚಿಸೋಣ ಎಂದಿದ್ದೇನೆ'.


ಸುದ್ದಿ 2 ನಿಮಿಷ

ರಾಜ್ಯಕ್ಕೆ 750 ಇ.ವಿ ಬಸ್ ಪೂರೈಕೆ ಸಚಿವ ರಾಮಲಿಂಗಾರೆಡ್ಡಿ

ಹುಬ್ಬಳ್ಳಿ: 'ಬೆಳಗಾವಿ, ಮೈಸೂರು, ಶಿವಮೊಗ್ಗ ಸೇರಿ ರಾಜ್ಯದ ಏಳು ನಗರಗಳಿಗೆ ತಲಾ 100ರಂತೆ ಮತ್ತು ಒಂದು ನಗರಕ್ಕೆ 50 ವಿದ್ಯುತ್ ಚಾಲಿತ (ಇವಿ) ಬಸ್‌ಗಳನ್ನು ಕೇಂದ್ರ ಸರ್ಕಾರ ಒದಗಿಸಲಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

'ಕೇಂದ್ರ ಸರ್ಕಾರವೇ ನೇರವಾಗಿ ಟೆಂಡರ್ ಕರೆದು, ಚಾಲಕರನ್ನೂ ನೇಮಿಸಲಿದೆ. ಕಂಡಕ್ಟರ್‌ಗಳನ್ನು ನೇಮಿಸಿ, ಬಾಡಿಗೆ ಆಧಾರದಲ್ಲಿ ನಾವು ಬಸ್ ಬಳಸಬಹುದು' ಎಂದು ಶುಕ್ರವಾರ ಇಲ್ಲಿ ತಿಳಿಸಿದರು.

'ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಪ್ರಸಕ್ತ ವರ್ಷ 700 ಬಸ್ ನೀಡಲಾಗುತ್ತದೆ. 300 ಬಸ್‌ಗಳ ಖರೀದಿಗೆ ಈಗಾಗಲೇ ಟೆಂಡರ್ ಆಗಿದೆ' ಎಂದು ಹೇಳಿದರು.



'ಐದು ವರ್ಷ ಅವಧಿ ಪೂರ್ಣಗೊಳಿಸುವೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪಕ್ಷದ ಹೈಕಮಾಂಡ್ ಗರಂ ಆಗಿದೆ ಎಂಬುದು ಊಹಾಪೋಹ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟದ್ದು' ಎಂದರು.

ಭೂಸ್ವಾಧೀನ ರದ್ದು: ದೇಶದ ರೈತ ಹೋರಾಟಕ್ಕೆ ಸ್ಫೂರ್ತಿ

ಬೆಂಗಳೂರು: 'ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ 1,777 ಎಕರೆ ಭೂ ಸ್ವಾಧೀನ ವಿರುದ್ಧದ ಹೋರಾಟದ ಗೆಲುವು, ಕರ್ನಾಟಕ ಮತ್ತು ದೇಶದಾದ್ಯಂತ ಇರುವ ರೈತರಿಗೆ ದೊರೆತ ಬಹುದೊಡ್ಡ ಜಯ' ಎಂದು ಭಾರತೀಯ ರೈತ ಚಳವಳಿಗಳ ಸಮನ್ವಯ ಸಮಿತಿ ಬಣ್ಣಿಸಿದೆ.

'ಈ ಹೋರಾಟದ ಗೆಲುವು ಭೂ ಸ್ವಾಧೀನ ಕೈಬಿಡುವಂತೆ ದೇವನಹಳ್ಳಿ ತಾಲ್ಲೂಕಿನ 13 ಹಳ್ಳಿಗಳ ರೈತರು ಸಂಯುಕ್ತ ಹೋರಾಟ–ಕರ್ನಾಟಕ ಸಂಘಟನೆಯ ನೇತೃತ್ವದಲ್ಲಿ ಹತ್ತಾರು ಸಂಘಟನೆಗಳ ಬೆಂಬಲದೊಂದಿಗೆ ನಡೆಸಿದ ಏಕತೆ ಮತ್ತು ಶಾಂತಿಯುತ ಪ್ರತಿಭಟನೆಯ ಫಲವಾಗಿದೆ' ಎಂದು ಸಮಿತಿ ತಿಳಿಸಿದೆ. ಹೋರಾಟಗಾರರ ಈ ವಿಜಯೋತ್ಸವವನ್ನು ದೇಶದಾದ್ಯಂತ ಆಚರಿಸುವ ಮೂಲಕ ಕೃಷಿ ಭೂಮಿ, ರೈತರ ಜೀವನೋಪಾಯ ಮತ್ತು ಆಹಾರ ಸಾರ್ವಭೌಮತ್ವವನ್ನು ರಕ್ಷಿಸುವ ಹೋರಾಟಗಳನ್ನು ಬಲಪಡಿಸುವಂತೆ ರೈತ ಸಂಘಟನೆಗಳು ಮತ್ತು ಜನಚಳವಳಿಗಳಿಗೆ ಐಸಿಸಿಎಫ್‌ಎಂ ಕರೆ ನೀಡಿದೆ.

'ರಿಯಲ್ ಎಸ್ಟೇಟ್ ಹಿತಾಸಕ್ತಿಗಳಿಗಾಗಿ ಫಲವತ್ತಾದ ಕೃಷಿ ಜಮೀನು ಸ್ವಾಧೀನಪಡಿಸಿಕೊಳ್ಳುವುದರ ವಿರುದ್ಧ ರೈತರು ಎತ್ತಿದ ಧ್ವನಿಯನ್ನು ಆಲಿಸುವ ಹಾಗೂ ರೈತರ ಸಾಂವಿಧಾನಿಕ, ಕಾನೂನು ಬದ್ಧ ಹಕ್ಕುಗಳನ್ನು ಎತ್ತಿ ಹಿಡಿದಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಐಸಿಸಿಎಫ್‌ಎಂ ಶ್ಲಾಘಿಸುತ್ತದೆ' ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಯುಧ್‌ವೀರ್‌ಸಿಂಗ್ ಮತ್ತು ಭಾರತೀಯ ಕಿಸಾನ್ ಒಕ್ಕೂಟದ ರಾಷ್ಟ್ರೀಯ ವಕ್ತಾರ ರಾಕೇಶ್‌ಸಿಂಗ್ ಟಿಕಾಯತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಇಟಿ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕಾಲೇಜು, ಕೋರ್ಸ್‌ಗಳ ಆಯ್ಕೆಗಳನ್ನು ದಾಖಲಿಸುವ ಅವಧಿಯನ್ನು ಜುಲೈ 22ರವರೆಗೆ ವಿಸ್ತರಿಸಲಾಗಿದೆ.



ಎಂಜಿನಿಯರಿಂಗ್, ದಂತ ವೈದ್ಯಕೀಯ, ಪಶು ವೈದ್ಯಕೀಯ, ಕೃಷಿ ವಿಜ್ಞಾನ, ಬಿ.ಎಸ್‌ಸಿ ನರ್ಸಿಂಗ್ ಸೇರಿದಂತೆ ಹಲವು ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿ ಸಿದ್ಧವಾಗಿದ್ದು, ಲಭ್ಯವಿರುವ ಎಲ್ಲ ಕೋರ್ಸ್‌ಗಳಿಗೂ ಆಯ್ಕೆಗಳನ್ನು ದಾಖಲಿಸಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವೈದ್ಯಕೀಯ, ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ, ಫಾರ್ಮಸಿ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿ ಬಂದ ನಂತರ ಆಯ್ಕೆ ನಮೂದಿಸಲು ಅವಕಾಶ ನೀಡಲಾಗುವುದು. ಕೊನೆ ದಿನಾಂಕದವರೆಗೆ ಎಷ್ಟು ಬಾರಿಯಾದರೂ ಬದಲಿಸಿಕೊಳ್ಳಬಹುದು. ಆದರೆ, ಅಂತಿಮವಾಗಿ ಬದಲಿಸಿದ ವಿವರಗಳನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂದು ವಿವರಿಸಿದ್ದಾರೆ.

ಡಿಸಿಇಟಿ ಸೀಟು ಹಂಚಿಕೆ ಪ್ರಕಟ: ಎಂಜಿನಿಯರಿಂಗ್ ಎರಡನೇ ವರ್ಷಕ್ಕೆ ನೇರ ಪ್ರವೇಶ ಕಲ್ಪಿಸುವ ಡಿಪ್ಲೊಮಾ ಸಿಇಟಿ ಮೊದಲ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಸೀಟು ಹಂಚಿಕೆಯಾದವರು ಜುಲೈ 19ರಂದು ಮಧ್ಯಾಹ್ನ 3ರ ಒಳಗೆ ತಮಗೆ ಸೂಕ್ತ ಎನಿಸಿದ ಕಾಲೇಜು, ಕೋರ್ಸ್‌ಗಳನ್ನು ದಾಖಲಿಸಬೇಕು. ಯಾವುದೇ ಆಯ್ಕೆ ದಾಖಲಿಸದೇ ಸುಮ್ಮನಿದ್ದರೂ ನಂತರದ ಸುತ್ತುಗಳಿಗೆ ಅವರನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರಾಧಿಕಾರ ಹೇಳಿದೆ.

ಹೋರಾಟಕ್ಕೆ ಕಲೆಯ ಮೆರುಗು

ಪ್ರಜಾವಾಣಿ ಚಿತ್ರ **ತಾಜುದ್ದೀನ್ ಆಜಾದ್**



ಪರಿಶಿಷ್ಟ ಜಾತಿಯ ಬೇಡಜಂಗಮರು ಎಂದು ನಕಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಕ್ರಾಂತಿಕಾರಿ) ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ನಡೆಸಿದ ಪ್ರತಿಭಟನೆಯಲ್ಲಿ ಕಲಾವಿದರು ಪೌರಾಣಿಕ ವೇಷಗಳಲ್ಲಿ ಗಮನ ಸೆಳೆದರು

ಪಿ.ಟಿ.ಸಿ.ಎಲ್: ಸರ್ಕಾರ ಪರಿಣತ ವಕೀಲರನ್ನು ನೇಮಿಸಲು ಆಗ್ರಹ

ಬೇಡಿಕೆ ಈಡೇರಿಕೆ: ದಸಂಸ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟರ ಪಿ.ಟಿ.ಸಿ.ಎಲ್ ಕಾಯ್ದೆಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿಯನ್ನು ಮಾನ್ಯ ಮಾಡದ ಕಂದಾಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಶುಕ್ರವಾರ ಪ್ರತಿಭಟನೆ ನಡೆಸಿತು.

ಹೈಕೋರ್ಟ್‌ನಲ್ಲಿ ಪಿ.ಟಿ.ಸಿ.ಎಲ್ ಪ್ರಕರಣಗಳು ವಜಾಗೊಳ್ಳುತ್ತಿವೆ. ಹಾಗಾಗಿ ರಾಜ್ಯ ಸರ್ಕಾರ ಪರಿಣತ ವಕೀಲರನ್ನು ನೇಮಿಸಿ, ಈ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಭೂ ಹೀನ ತಳ ಸಮುದಾಯದವರು ಉಳುಮೆ ಮಾಡುತ್ತಿರುವ ಬಗರ್ ಹುಕುಂ ಸಾಗುವಳಿ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಬೇಕು. ವಿನಾಕಾರಣ ವಜಾಗೊಳಿಸಿರುವ ಬಗರ್ ಹುಕುಂ ಸಾಗುವಳಿಯ ಅರ್ಜಿಗಳನ್ನು ಮರು ಪರಿಶೀಲಿಸಬೇಕು ಎಂದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಇಂದಿರಾ ಕೃಷ್ಣಪ್ಪ ನೇತೃತ್ವದಲ್ಲಿ ಶುಕ್ರವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು ನಗರ ಜಿಲ್ಲೆ, ಪೂರ್ವ ತಾಲ್ಲೂಕಿನ ಕಾಡುಗೋಡಿ ಪ್ಲಾಂಟೇಷನ್‌ನಲ್ಲಿ ಪರಿಶಿಷ್ಟ ಜಾತಿಯವರಿಗೆ ಜಮೀನು ಮಂಜೂರಾಗಿದೆ. ಆದರೆ, ಅರಣ್ಯ ಅಧಿಕಾರಿಗಳು ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇದನ್ನು ತಡೆಯಬೇಕು. ಅಧಿಕಾರಿಗಳ ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣ ನಿರ್ವಹಣೆಗೆ ಸರ್ಕಾರ ಸ್ಥಾಪಿಸಿರುವ ಡಿಸಿಆರ್‌ಇ ಪೊಲೀಸ್ ಠಾಣೆಗಳಿಗೆ ಅಗತ್ಯವಿರುವ ಸಿಬ್ಬಂದಿ ಮತ್ತು ಮೂಲಸೌಕರ್ಯ ಒದಗಿಸಬೇಕು

ಮಾವಳ್ಳಿ ಶಂಕರ್, ಸಂಸ, ಪ್ರಧಾನ ಸಂಚಾಲಕ

ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿರ್ವಹಣೆಗೆ ಪ್ರತ್ಯೇಕ ನಿರ್ದೇಶನಾಲಯ ಅಥವಾ ಏಕ ಗವಾಕ್ಷಿ ಯೋಜನೆ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಮಿತಿ ಸಂಘಟನಾ ಸಂಚಾಲಕ ಕಾರಳ್ಳಿ ಶ್ರೀನಿವಾಸ್, ಸದಸ್ಯರಾದ ಜಿಗಳ ಶ್ರೀರಾಮ್, ನಿರ್ಮಲಾ, ಸಂಪಂಗಿರಾಮ್, ಪ್ರೊ. ಬಿ.ಕೃಷ್ಣಪ್ಪ ಟ್ರಸ್ಟ್ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ ಪಾಲ್ಗೊಂಡಿದ್ದರು.



'ಸಹಪಾಠಿಗಳು': ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರಿನಲ್ಲಿ ಕಣ್ವ ಫೌಂಡೇಷನ್‌ನ ಡಾ.ಎಚ್‌.ಎಂ.ವೆಂಕಟಪ್ಪ (ಎಡದಿಂದ ಮೊದಲನೆಯವರು) ಅವರು ನಿರ್ಮಿಸಿರುವ ಶ್ರೀಮತಿ ಚನ್ನಮ್ಮ ಮಂಚೇಗೌಡ ಕರ್ನಾಟಕ ಪಬ್ಲಿಕ್ ಶಾಲೆ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ಡಾ.ಸಿ.ಎನ್‌.ಮಂಜುನಾಥ್ ಅವರು ತರಗತಿ ಕೊಠಡಿಯಲ್ಲಿ ವಿದ್ಯಾರ್ಥಿಗಳಂತೆ ಕುಳಿತು ಖುಷಿಯಾಗಿ ಮಾತನಾಡಿದರು

ಹಿಮಾಚಲ: ಮಳೆಗೆ 250 ರಸ್ತೆಗಳಲ್ಲಿ ಸಂಚಾರ ಸ್ಥಗಿತ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, 250 ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಂಡಿದೆ. ಹವಾಮಾನ ಇಲಾಖೆಯ ಸ್ಥಳೀಯ ಕಚೇರಿಯು ಹಲವು ಪ್ರದೇಶಗಳಲ್ಲಿ ಭಾನುವಾರದ ವರೆಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ತೆಕ್ಕಲಕೋಟೆ: ಪುರಾತನ ವಸ್ತು ಪತ್ತೆ

ಪ್ರಾಗೈತಿಹಾಸಿಕ ಕಾಲದ ನೆಲೆಗಳಲ್ಲಿ ಉತ್ಖನನ, ಅಧ್ಯಯನ

• ಚಾಂದ್ ಬಾಷ

ತೆಕ್ಕಲಕೋಟೆ (ಬಳ್ಳಾರಿ): ಪಟ್ಟಣದ ದಕ್ಷಿಣ ದಿಕ್ಕಿನಲ್ಲಿನ ಬೆಟ್ಟಗುಡ್ಡಗಳಲ್ಲಿ ನಡೆಯುತ್ತಿರುವ ಉತ್ಖನನದ ವೇಳೆ ಅಪರೂಪದ ವಸ್ತುಗಳು ಸಿಕ್ಕಿವೆ. ಅಮೆರಿಕದ ಹಾರ್ಟ್‌ವಿಕ್ ವಿ.ವಿಯ ಪ್ರೊ. ನಮಿತಾ ಎಸ್.ಸುಗಂಧಿ ನೇತೃತ್ವದ ಐವರು ತಜ್ಞರ ತಂಡ ಪ್ರಾಗೈತಿಹಾಸಿಕ ಕಾಲದ ನೆಲೆಗಳ ಅಧ್ಯಯನ ನಡೆಸಿದೆ.

ವಿವಿಧ ಗಾತ್ರದ ಅರೆಯುವ ಕಲ್ಲುಗುಂಡು, ಪ್ರಾಣಿಗಳ ಬೇಟೆಗೆ ಬಳಸುವ ಗುಂಡುಗಳು, ಚೂಪಾದ ಕೊಡಲಿಯಾಕಾರದ, ಚಪ್ಪಟೆ ಆಕಾರದ ಆಯುಧಗಳು, ಮಣ್ಣಿನ ಹೂಜಿಯ ತುಂಡು, ಮಣ್ಣಿನ ಪಾತ್ರೆಗಳ ಚೂರುಗಳು ಸಿಕ್ಕಿವೆ.

'ತೆಕ್ಕಲಕೋಟೆ ಸುತ್ತಮುತ್ತಲ ಹಿರೇಹರ್ಲ, ಗೌಡರ ಮೂಲೆ ಹಾಗೂ ಬಾಳೇತೋಟ ಸ್ಥಳವು ಜಗತ್ತಿನ ನಾಗರಿಕತೆ ಚರಿತ್ರೆಯ ದೃಷ್ಟಿಯಿಂದ ಮಹತ್ವದ ಜಾಗ. ಆದಿಮಾನವರು ಹಣ್ಣು ಹೆಕ್ಕಿ ತಿನ್ನುವ ಮತ್ತು ಪ್ರಾಣಿ ಬೇಟೆಯಾಡುವ ಹಂತದಿಂದ ಸಾಗಿ, ಒಂದೆಡೆ ನೆಲೆ ನಿಂತು ಕೃಷಿ ಮಾಡುವ ಮತ್ತು ಪಶುಪಾಲನೆ ಮಾಡುವ ಹಂತಕ್ಕೆ ದಾಟಿದರು. ಆ ತಿರುವಿನ ಘಟ್ಟದಲ್ಲಿ ಉದಯಿಸಿದ ಜನವಸತಿಗಳಲ್ಲಿ ತೆಕ್ಕಲಕೋಟೆಯೂ ಒಂದು' ಎಂದು ತಜ್ಞರು ತಿಳಿಸಿದರು.

ಇದು ಪೂರ್ವ-ಐತಿಹಾಸಿಕ ಮತ್ತು ನವಶಿಲಾಯುಗದ ತಾಣ. ಇಲ್ಲಿನ ಬೆಟ್ಟಗಳಲ್ಲಿ ಶಿಲಾ ವರ್ಣಚಿತ್ರ, ಕಲ್ಲಿನ ರೇಖಾಚಿತ್ರ ಮತ್ತು ಕುಟ್ಟು ಚಿತ್ರಗಳ ವಿವಿಧ ಅವಶೇಷಗಳು ಕಾಣಸಿಗುತ್ತವೆ. ಹಳೇ ಶಿಲಾಯುಗ, ಮಧ್ಯಯುಗ ಮತ್ತು ಲೋಹಯಗದಲ್ಲಿ ಜನರು ಇಲ್ಲಿ ನೆಲಸಿದ್ದರು ಎಂಬುದಕ್ಕೆ ಇಲ್ಲಿ ಪುರಾವೆಗಳಿವೆ.

'ಸದ್ಯ ಉತ್ಖನನ ನಡೆದಿರುವ ಸ್ಥಳಗಳಲ್ಲಿ ಕೃಷಿ ಚಟುವಟಿಕೆ, ಪಶುಸಂಗೋಪನೆ, ಮಡಿಕೆ ಹಾಗೂ ಕಬ್ಬಿಣದ ಉತ್ಪನ್ನ, ಕಲ್ಲಿನ ಆಯುಧ ತಯಾರಿಕಾ ಘಟಕ ಇತ್ತು, ಜನರು ನೀರಿನ ಸದ್ಬಳಕೆ ಹಾಗೂ ನಿರ್ವಹಣೆ ತಿಳಿದಿದ್ದರು ಎಂಬುದು ಗೊತ್ತಾಗುತ್ತದೆ' ಎಂದು ಪ್ರೊ. ನಮಿತಾ ಎಸ್.ಸುಗಂಧಿ ತಿಳಿಸಿದರು.

ತಂಡದಲ್ಲಿ ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ವಿನಾಯಕ, ಅಶೋಕ ವಿಶ್ವವಿದ್ಯಾಲಯದ ಆಕಾಶ್ ಶ್ರೀನಿವಾಸ, ಮೊಹಾಲಿಯ ಮಿಹಿರ್ ತಂಗಸಾಲಿ, ವೈಷಿ ರಾಯ್, ದೆಹಲಿಯ ದೇವೇಂದ್ರ ಸಿಂಗ್ ಚೌಧರಿ, ಸಂಶೋಧನಾರ್ಥಿ ಅಶೋಕ್ ಅಬಕಾರಿ ಅಲ್ಲದೆ ವಿವಿಧ ರಾಜ್ಯಗಳ 16 ಸಂಶೋಧನಾರ್ಥಿಗಳು ಇದ್ದಾರೆ.



ತೆಕ್ಕಲಕೋಟೆ ಸಮೀಪ ಉತ್ಖನನ ಕಾರ್ಯ



ತೆಕ್ಕಲಕೋಟೆ ಸಮೀಪ ಉತ್ಖನನ ಸ್ಥಳದಲ್ಲಿ ಪತ್ತೆಯಾದ ವಸ್ತುಗಳು

ಮುಖ್ಯಾಂಶಗಳು

- ಒಟ್ಟು 16 ಸಂಶೋಧನಾರ್ಥಿಗಳಿಂದ ಅಧ್ಯಯನ
- ವಿವಿಧ ಗಾತ್ರಗಳ ಆಯುಧಗಳು ಪತ್ತೆ

'ಒಮ್ಮೆಗೆ ಪರಿಹಾರ ಪಾವತಿಗೆ ಒಪ್ಪಿಗೆ'

ಕೃಷ್ಣಾ ಮೇಲ್ದಂಡೆ: ರೈತರು, ಜನಪ್ರತಿನಿಧಿಗಳ ಸಭೆಗೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಹಂತ–3ರ ಯೋಜನೆಗಳ ಅನುಷ್ಠಾನಕ್ಕಾಗಿ ಅಗತ್ಯವಿರುವ ಭೂಸ್ವಾಧೀನದಿಂದ ಜಮೀನು ಕಳೆದುಕೊಳ್ಳುವವರಿಗೆ ಏಕಗಂಟಿನಲ್ಲಿ ಪರಿಹಾರದ ಮೊತ್ತ ಪಾವತಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ಸೂಚಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಆ ಭಾಗದ ರೈತರು, ಅಧಿಕಾರಿಗಳು, ಜನಪ್ರತಿನಿಧಿಗಳ ಜತೆ ಮಾತುಕತೆ ನಡೆಸಲು ಮುಖ್ಯಮಂತ್ರಿಯವರು ಸಚಿವ ಸಂಪುಟ ಸಭೆಯಲ್ಲಿ ಸಮ್ಮತಿಸಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಸಂಪುಟ ಸಭೆಯಲ್ಲಿ ಈ ವಿಷಯದ ಕುರಿತು ಸುದೀರ್ಘ ಚರ್ಚೆ ನಡೆಯಿತು. ಆದಷ್ಟು ಬೇಗ ಪರಿಹಾರ ದರದ ವಿಷಯವನ್ನು ಇತ್ಯರ್ಥಗೊಳಿಸಬೇಕು. ಈಗಾಗಲೇ ವಿಳಂಬವಾಗಿರುವುದರಿಂದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಬೇಕು ಎಂದು ಉತ್ತರ ಕರ್ನಾಟಕ ಭಾಗದ ಸಚಿವರು ಒತ್ತಾಯಿಸಿದರು' ಎಂದು ಅವರು ಹೇಳಿದರು.

ಕೃಷ್ಣಾ ಮೇಲ್ದಂಡೆ ಹಂತ–3ರ ನೀರು ಹಂಚಿಕೆಯ ತೀರ್ಪು ಬಂದು 15 ವರ್ಷ ಕಳೆದಿದೆ. ಕೇಂದ್ರ ಸರ್ಕಾರ ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ಈ ಮಧ್ಯೆ ನ್ಯಾಯಮಂಡಳಿಯ ಅವಧಿಯನ್ನು ಇನ್ನೂ ಒಂದು ವರ್ಷ ವಿಸ್ತರಿಸಿರುವ ಕ್ರಮ ಸರಿಯಲ್ಲ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಇದನ್ನು ಪ್ರತಿಭಟಿಸಬೇಕು ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು.

'ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಮೂರನೇ ಹಂತದ ಯೋಜನೆಗಳ ಕಾಮಗಾರಿಗಳನ್ನು ಆರಂಭಿಸಿ ಸಕಾಲದಲ್ಲಿ ಪೂರ್ಣಗೊಳಿಸಬೇಕು. ಅದಕ್ಕೂ ಮೊದಲು ಭೂಸ್ವಾಧೀನದ ವಿಷಯವನ್ನು ಇತ್ಯರ್ಥಗೊಳಿಸಬೇಕು. ಪರಿಹಾರದ ಮೊತ್ತವನ್ನು ನಿರ್ಧರಿಸಲು ಅಧಿಕಾರಿಗಳು, ರೈತ ಮುಖಂಡರು ಮತ್ತು ಶಾಸಕರು ಸಭೆಯನ್ನು ಕರೆದು ಮಾತುಕತೆ ನಡೆಸಬೇಕು. ಈ ಕುರಿತು ಒಂದು ಪ್ರಸ್ತಾವನೆಯನ್ನು ಮುಂದಿನ ಸಚಿವ ಸಂಪುಟದ ಮುಂದಿಡಿ ಎಂದು ಸಿದ್ದರಾಮಯ್ಯ ಸೂಚಿಸಿದರು' ಎಂದು ಪಾಟೀಲ ಹೇಳಿದರು.

ಕೃಷ್ಣಾ ನ್ಯಾಯಮಂಡಳಿ 2010ರಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆ ಮಾಡಿದೆ. ಆ ತೀರ್ಪಿನ ಪ್ರಕಾರ, ಶೇ 65ರಷ್ಟು ಹೆಚ್ಚುವರಿ ಹರಿವನ್ನು ಅವಲಂಬಿಸಿ ಮಹಾರಾಷ್ಟ್ರಕ್ಕೆ 81 ಟಿಎಂಸಿ ಅಡಿ, ಕರ್ನಾಟಕಕ್ಕೆ 177 ಟಿಎಂಸಿ ಅಡಿ ಮತ್ತು ಆಂಧ್ರಪ್ರದೇಶಕ್ಕೆ 190 ಟಿಎಂಸಿ ಅಡಿ ನೀರು ಹಂಚಿಕೆ ಮಾಡಲಾಗಿದೆ. ಮೂರನೇ ಹಂತವನ್ನು ಅನುಷ್ಠಾನ ಗೊಳಿಸಿದರೆ, ಉತ್ತರ ಕರ್ನಾಟಕ ಭಾಗದ ವಿಜಯಪುರ, ಬಾಗಲಕೋಟೆ, ರಾಯಚೂರು, ಕಲಬುರಗಿ, ಯಾದಗಿರಿ, ಕೊಪ್ಪಳ ಮತ್ತು ಗದಗ ಜಿಲ್ಲೆಗಳ 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

'ಮನೆ ಮನೆಗೆ ಪೊಲೀಸ್' ಕಾರ್ಯಕ್ರಮಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಚಾಲನೆ

ಪೊಲೀಸ್ ಗಸ್ತು ಸಿಬ್ಬಂದಿಗೆ ಟ್ಯಾಬ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸರು ಜಾರಿಗೆ ತಂದಿರುವ 'ಮನೆ-ಮನೆಗೆ ಪೊಲೀಸ್' ನೂತನ ಕಾರ್ಯಕ್ರಮಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಅವರು ಗೋವಿಂದರಾಜನಗರದಲ್ಲಿ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ದೇಶದಲ್ಲಿಯೇ ಪ್ರಥಮ ಬಾರಿಗೆ ಮನೆ-ಮನೆಗೆ ಪೊಲೀಸ್ ಎಂಬ ವಿನೂತನ ಕಾರ್ಯಕ್ರಮ ಅನುಷ್ಠಾನಕ್ಕೆ ತರಲಾಗಿದೆ. ಬೇರೆ ಯಾವ ರಾಜ್ಯದಲ್ಲಿಯೂ ಸಹ ಈ ರೀತಿಯ ಕಾರ್ಯಕ್ರಮ ಇಲ್ಲ. ಇದುವರೆಗೂ ಪೊಲೀಸರು ಬಡಾವಣೆಗಳಲ್ಲಿ, ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ನಡೆಸುತ್ತಿದ್ದರು. ಮುಂದಿನ ದಿನಗಳಲ್ಲಿ ಯಾವ ಮನೆಗೆ ಯಾರು ಬಂದಿದ್ದಾರೆ, ಮನೆಯವರು ಏನು ಕೆಲಸ ಮಾಡುತ್ತಿದ್ದಾರೆ. ಯಾವ ಸಮಸ್ಯೆಗಳಿವೆ ಎಂಬ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಈ ದತ್ತಾಂಶ ಪೊಲೀಸರ ಬಳಿ ಇರಲಿದೆ' ಎಂದು ಹೇಳಿದರು.

'ನೆರೆ-ಹೊರೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದರೆ, ಮಕ್ಕಳಿಗೆ ತೊಂದರೆ ಆಗುತ್ತಿದ್ದರೆ, ಮಾದಕ ವಸ್ತುಗಳ ಮಾರಾಟ ನಡೆಯುತ್ತಿದ್ದರೆ ಆ ಮಾಹಿತಿಯನ್ನು ಪೊಲೀಸರ ಜತೆಗೆ ನಾಗರಿಕರು ಹಂಚಿಕೊಳ್ಳಬಹುದು. ಗಸ್ತು ಸಿಬ್ಬಂದಿಗೆ ಟ್ಯಾಬ್ ವ್ಯವಸ್ಥೆ ಕಲ್ಪಿಸಲಾಗುವುದು' ಎಂದರು.

'ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮದ ಕುರಿತು ಸಾರ್ವಜನಿಕರಿಂದ ಪ್ರತಿಕ್ರಿಯೆ ಪಡೆದುಕೊಳ್ಳಲಾಗುವುದು. ನಂತರ, ಬದಲಾವಣೆ ಮಾಡುವುದಿದ್ದರೆ ಸರಿಪಡಿಸುತ್ತೇವೆ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಟೋಯಿಂಗ್ ವ್ಯವಸ್ಥೆ ಮರು ಜಾರಿ ಮಾಡಲಾಗುವುದು. ಪೊಲೀಸ್ ಸಿಬ್ಬಂದಿಯೇ ಟೋಯಿಂಗ್ ಮಾಡಲಿದ್ದಾರೆ. ಟೋಯಿಂಗ್‌ಗೆ ಪಾಲಿಕೆಯಿಂದ ವಾಹನಗಳನ್ನು ನೀಡಲಾಗುವುದು' ಎಂದು ಹೇಳಿದರು.

ನಿರ್ಭಯಾ ಯೋಜನೆ ಅಡಿ ನಗರದಲ್ಲಿ ಹಲವು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. 50 ಸೇಫ್ ಐ- ಲ್ಯಾಂಡ್‌ಗಳನ್ನು ಸ್ಥಾಪಿಸಲಾಗಿದೆ. ಡ್ರಗ್ಸ್ ಮುಕ್ತ ಬೆಂಗಳೂರು ಮಾಡುತ್ತೇವೆ ಎಂದರು.



'ಮನೆ ಮನೆಗೆ ಪೊಲೀಸ್' ಕಾರ್ಯಕ್ರಮದ ಸ್ಟಿಕರ್ ಅನ್ನು ಬೆಂಗಳೂರಿನ ಗೋವಿಂದರಾಜನಗರದ ಮನೆಯೊಂದರ ಬಾಗಿಲಿಗೆ ಗೃಹ ಸಚಿವ ಜಿ.ಪರಮೇಶ್ವರ ಅಂಟಿಸಿದರು

ಮಹಿಳೆಯರು ತೊಂದರೆಯಲ್ಲಿದ್ದಾಗ ಪೊಲೀಸರು ಕೂಡಲೇ ಸ್ಪಂದಿಸುತ್ತಿದ್ದಾರೆ. ಬೆಂಗಳೂರನ್ನು ಮಹಿಳೆಯರ ಸುರಕ್ಷತಾ ನಗರವನ್ನಾಗಿ ಮಾಡುತ್ತೇವೆ

ಜಿ.ಪರಮೇಶ್ವರ, ಗೃಹ ಸಚಿವ

ಇದೇ ವೇಳೆ ಕೆಲವು ಜಿಲ್ಲೆಗಳ ಎಸ್‌ಪಿ ಹಾಗೂ ಪೊಲೀಸ್ ಕಮಿಷನರ್‌ಗಳೊಂದಿಗೆ ಸಂವಾದ ನಡೆಸಿ ಕಾರ್ಯಕ್ರಮದ ಕುರಿತು ಮಾಹಿತಿ ಪಡೆದುಕೊಂಡರು. ಬಳಿಕ ಕೈಪಿಡಿ ಬಿಡುಗಡೆ ಮಾಡಲಾಯಿತು.

ಪೊಲೀಸ್ ಅಧಿಕಾರಿಗಳ ಜತೆಗೆ ಗೋವಿಂದರಾಜನಗರದ ಮನೆಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಸಚಿವರು ಮಾಹಿತಿ ಪಡೆದುಕೊಂಡರು.

ಶಾಸಕ ಪ್ರಿಯಕೃಷ್ಣ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹಾಜರಿದ್ದರು.

ಚುಟುಕೆ ಸುದ್ದಿ

ಲಾಲೂ ಮನವಿ ತಿರಸ್ಕರಿಸಿದ 'ಸುಪ್ರೀಂ'



ನವದೆಹಲಿ (ಪಿಟಿಐ): 'ಉದ್ಯೋಗಕ್ಕಾಗಿ ಜಮೀನು ಹಗರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣದ ವಿಚಾರಣೆಗೆ ತಡೆ ನೀಡುವಂತೆ' ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ಸಿಬಿಐ ದಾಖಲಿಸಿರುವ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕ್ರಿಯೆಗಳಿಗೆ ತಡೆ ನೀಡುವಂತೆ ಕೋರಿ ಲಾಲು ಪ್ರಸಾದ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸಿಬಿಐನ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ತ್ವರಿತಗೊಳಿಸುವಂತೆ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರಿದ್ದ ಪೀಠವು ದೆಹಲಿ ಹೈಕೋರ್ಟ್‌ಗೆ ಸೂಚಿಸಿತು.

ಎಫ್‌ಐಆರ್ ರದ್ದುಗೊಳಿಸುವಂತೆ ಲಾಲೂ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ಸಿಬಿಐಗೆ ನೋಟಿಸ್ ನೀಡಿದ್ದು, ಆಗಸ್ಟ್ 12ರಂದು ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಜಾಮೀನು ಅರ್ಜಿ ಪೂರ್ವಾಪರ ಮಾಹಿತಿ ಕಡ್ಡಾಯ

ನವದೆಹಲಿ: ಆರೋಪಿಗಳು ಸಲ್ಲಿಸುವ ಜಾಮೀನು ಅರ್ಜಿಗಳಲ್ಲಿ ಅವರ ಹಿಂದಿನ ಕ್ರಿಮಿನಲ್ ಪೂರ್ವಾಪರಗಳ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂಬ ನಿಯಮವನ್ನು ದೇಶದ ಎಲ್ಲ ಹೈಕೋರ್ಟ್‌ಗಳು ಅಳವಡಿಸಿಕೊಳ್ಳಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಸೂಚಿಸಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಈ ಸಂಬಂಧ ರೂಪಿಸಿರುವ ನಿಯಮಗಳು ಮತ್ತು ಆದೇಶಗಳನ್ನು ಉಲ್ಲೇಖಿಸಿದ ಸುಪ್ರೀಂ ಕೋರ್ಟ್, ಇದನ್ನು ಎಲ್ಲ ಹೈಕೋರ್ಟ್‌ಗಳು ಅಳವಡಿಸಿಕೊಳ್ಳಬೇಕು ಎಂದು ಹೇಳಿತು.

ರಾಜಸ್ಥಾನ ಹೈಕೋರ್ಟ್ ನೀಡಿದ ಕಟ್ಟುನಿಟ್ಟಿನ ಆದೇಶಗಳ ವಿರುದ್ಧ ಜಿಲ್ಲಾ ನ್ಯಾಯಾಧೀಶರ ವೃಂದದ ನ್ಯಾಯಾಂಗ ಅಧಿಕಾರಿ ಕೌಶಲ್ ಸಿಂಗ್ ಅವರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆಗೆ ಅನುಮತಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂಜಯ್ ಕರೋಲ್ ಮತ್ತು ಸಂದೀಪ್ ಮಹ್ತಾ ಅವರ ಪೀಠವು ಈ ಕುರಿತು ಸೂಚನೆ ನೀಡಿದೆ.

'ಹೈಕಮಾಂಡ್ ಬೆದರಿಸಲು ಸಮಾವೇಶ'

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿ ನಡೆಸುತ್ತಿರುವುದು ಸಾಧನಾ ಸಮಾವೇಶವಲ್ಲ, ಹೈಕಮಾಂಡ್‌ಗೆ ಬ್ಲಾಕ್‌ಮೇಲ್ ಮಾಡುವ ಸಮಾವೇಶ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನವದೆಹಲಿಯಲ್ಲಿ ತಮ್ಮನ್ನು ಭೇಟಿಯಾಗಲು ಸಿದ್ದರಾಮಯ್ಯ ಅವರಿಗೆ ರಾಹುಲ್ ಗಾಂಧಿ ಸಮಯವನ್ನೇ ಕೊಡಲಿಲ್ಲ. ಹೀಗಾಗಿ ಸವಾಲು ಹಾಕಲೆಂದು ಸಮಾವೇಶ ಮಾಡುತ್ತಿದ್ದಾರೆ' ಎಂದು ದೂರಿದರು.

'ನವೆಂಬರ್‌ನಲ್ಲಿ ರಾಜ್ಯದಲ್ಲಿ ಮಹತ್ವದ ರಾಜಕೀಯ ಬೆಳವಣಿಗೆ ನಡೆಯುವುದು ನಿಶ್ಚಿತ. ತಂತ್ರ-ಕುತಂತ್ರಗಳಿಗೆ ಅದರದೇ ಆದ ಇತಿಮಿತಿ ಇರುತ್ತದೆ. ಈಗ ಸಿದ್ದರಾಮಯ್ಯ ರಾಜೀನಾಮೆ ಕೊಡಲೇಬೇಕಾದ ಸನ್ನಿವೇಶ ನಿರ್ಮಾಣವಾಗಿದೆ' ಎಂದರು.

'ಕೆಪಿಸಿಸಿ ಹೊಸ ಅಧ್ಯಕ್ಷರ ಆಯ್ಕೆ ಬಗ್ಗೆ ಚರ್ಚಿಸಿಲ್ಲ'




ಸತೀಶ ಜಾರಕಿಹೊಳಿ

ಬೆಳಗಾವಿ: 'ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಸರ್ಕಾರ ಎರಡು ವರ್ಷಗಳಲ್ಲಿ ಜಾರಿಗೆ ತಂದ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿಗೆ ಪ್ರತಿ ಶಾಸಕರಿಗೆ ನಿಗದಿಪಡಿಸಿದ ನಿಧಿ ಬಗ್ಗೆ ಚರ್ಚೆ ಆಗಿದೆ ಹೊರತು, ಕೆಪಿಸಿಸಿ ಹೊಸ ಅಧ್ಯಕ್ಷರ ಆಯ್ಕೆ ಬಗ್ಗೆ ಅಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಬೆಂಗಳೂರಿನಲ್ಲಿ ಆರ್‌ಸಿಬಿ ತಂಡದ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತ ಮತ್ತು ಸಾವುನೋವಿಗೆ ಕಾರಣವಾದ ಬಗ್ಗೆ ತನಿಖಾ ವರದಿ ಸಲ್ಲಿಕೆಯಾಗಿದೆ. ಸರ್ಕಾರ ಇದನ್ನು ಅಧ್ಯಯನ ಮಾಡಿ ಕ್ರಮ ಕೈಗೊಳ್ಳುತ್ತದೆ. ಈ ಕಾರ್ಯಕ್ರಮ ಆಯೋಜನೆಗೆ ಆರ್‌ಸಿಬಿ ತಂಡದವರು ಲೋಕೋಪಯೋಗಿ ಸೇರಿ ಯಾವುದೇ ಇಲಾಖೆಯಿಂದ ಯಾವುದೇ ಅನುಮತಿ ಪಡೆದಿಲ್ಲ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ನ್ಯಾ. ವರ್ಮಾ 'ಸುಪ್ರೀಂ' ಮೊರೆ

ನಗದು ಪತ್ತೆ ಪ್ರಕರಣ: ವಿಚಾರಣಾ ಸಮಿತಿ ವರದಿ ಅನೂರ್ಜಿತಗೊಳಿಸಲು ಕೋರಿಕೆ



ಯಶವಂತ್ ವರ್ಮಾ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರು ನಗದು ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಂತರಿಕ ವಿಚಾರಣಾ ಸಮಿತಿ ನೀಡಿರುವ ವರದಿಯನ್ನು ಅನೂರ್ಜಿತಗೊಳಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಸುಪ್ರೀಂ ಕೋರ್ಟ್‌ನ ಈ ಹಿಂದಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸಂಜೀವ್ ಖನ್ನಾ ಅವರು ಮಾಡಿರುವ ಶಿಫಾರಸುಗಳನ್ನು ರದ್ದುಗೊಳಿಸುವಂತೆಯೂ ಅವರು ಕೋರಿದ್ದಾರೆ.

'ನಿವಾಸದಲ್ಲಿ ನಗದು ಪತ್ತೆ ಪ್ರಕರಣದಲ್ಲಿ ವರ್ಮಾ ವಿರುದ್ಧದ ಆರೋಪಗಳು ಸಾಬೀತಾಗಿವೆ' ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಚಾರಣಾ ಸಮಿತಿ ತಿಳಿಸಿತ್ತು. ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ಆರಂಭಿಸುವಂತೆ ಸಂಜೀವ್ ಖನ್ನಾ ಅವರು ಶಿಫಾರಸು ಮಾಡಿದ್ದರಲ್ಲದೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು.

ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಜುಲೈ 21ರಂದು ಆರಂಭವಾಗುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಯೋಜಿಸಿದೆ.

ವಿಚಾರಣಾ ಸಮಿತಿಯು ತನಗೆ ಪೂರ್ಣ ಮತ್ತು ನ್ಯಾಯಯುತ ರೀತಿಯಲ್ಲಿ ವಾದ ಮಂಡಿಸಲು ಅವಕಾಶ ನೀಡದೆ ವರದಿ ಸಲ್ಲಿಸಿದೆ ಎಂದು ವರ್ಮಾ ಅವರು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ. ಸಮಿತಿಯ ವರದಿಯಲ್ಲಿರುವ ಅಂಶಗಳು 'ಪೂರ್ವನಿರ್ಧರಿತ ನಿರೂಪಣೆ'ಗಳನ್ನು ಆಧರಿಸಿವೆ ಎಂದು ಆರೋಪಿಸಿದ್ದಾರೆ. ಅವರ ಅರ್ಜಿಯನ್ನು ವಿಚಾರಣೆಗಾಗಿ ಪೀಠದ ಮುಂದೆ ಇನ್ನೂ ಪಟ್ಟಿ ಮಾಡಿಲ್ಲ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಸಂದರ್ಭದಲ್ಲಿ ವರ್ಮಾ ಅವರ ಅಧಿಕೃತ ನಿವಾಸದಲ್ಲಿ ನಗದು ಪತ್ತೆಯಾದ ಆರೋಪ ಕೇಳಿಬಂದಿತ್ತು.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ನೇತೃತ್ವದ ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡಿದ್ದ ವಿಚಾರಣಾ ಸಮಿತಿಯು 10 ದಿನ ವಿಚಾರಣೆ ನಡೆಸಿತ್ತು. 55 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, ಘಟನಾ ಸ್ಥಳಕ್ಕೆ ಭೇಟಿ ನೀಡಿ 64 ಪುಟಗಳ ಈ ವರದಿಯನ್ನು ಸಿದ್ಧಪಡಿಸಿತ್ತು.

'ನಗದು ಪತ್ತೆಯಾಗಿದ್ದ ಕೊಠಡಿಯನ್ನು ವರ್ಮಾ ಹಾಗೂ ಅವರ ಕುಟುಂಬಸ್ಥರು ಗೋಪ್ಯವಾಗಿ ನಿರ್ವಹಿಸುತ್ತಿದ್ದರು ಎಂಬುದು ಸಾಬೀತಾಗಿದೆ. ಈ ಅಪರಾಧವು ಅವರ ಪದಚ್ಯುತಿಯನ್ನು ಪ್ರತಿಪಾದಿಸುವಷ್ಟು ಗಂಭೀರವಾದುದು' ಎಂದು ಸಮಿತಿ ವರದಿಯಲ್ಲಿ ತಿಳಿಸಿತ್ತು.

> ನ್ಯಾಯಮೂರ್ತಿ ವರ್ಮಾ ಅವರ ಪದಚ್ಯುತಿಗೆ ಎಲ್ಲಾ ಪಕ್ಷಗಳು ಮುಂದಾಗಿವೆ. ಆದ್ದರಿಂದ ಇದು ಸಂಸತ್ತಿನ ಒಮ್ಮತದ ನಿಲುವು ಆಗಿದೆ
> **ಕಿರಣ್ ರಿಜಿಜು**, ಸಂಸದೀಯ ವ್ಯವಹಾರಗಳ ಸಚಿವ

> ನ್ಯಾ.ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಬೆಂಬಲಿಸುತ್ತೇವೆ. ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದರು ಸಹಿ ಹಾಕಲಿದ್ದಾರೆ
> **ಜೈರಾಮ್ ರಮೇಶ್**, ಕಾಂಗ್ರೆಸ್ ಮುಖಂಡ

'ಸರ್ಕಾರದ ಪಾತ್ರವಿಲ್ಲ; ಸಂಸದರ ತೀರ್ಮಾನ'

ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಸಂಸತ್‌ನಲ್ಲಿ ಮಂಡಿಸುವುದು ಸಂಪೂರ್ಣವಾಗಿ ಸಂಸದರಿಗೆ ಸಂಬಂಧಿಸಿದ ವಿಚಾರವಾಗಿದ್ದು, ಇದರಲ್ಲಿ ಸರ್ಕಾರದ ಯಾವುದೇ ಪಾತ್ರವಿಲ್ಲ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ.

ವರ್ಮಾ ವಿರುದ್ಧದ ಆರೋಪಗಳನ್ನು ಪರಿಶೀಲಿಸಲು ಈ ಹಿಂದಿನ ಸಿಜೆಐ ಸಂಜೀವ್ ಖನ್ನಾ ಅವರು ರಚಿಸಿದ್ದ ಆಂತರಿಕ ವಿಚಾರಣಾ ಸಮಿತಿಯು ಈಗಾಗಲೇ ತನ್ನ ವರದಿ ಸಲ್ಲಿಸಿದೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ನ್ಯಾಯಮೂರ್ತಿ ವರ್ಮಾ ಅವರು ವಿಚಾರಣಾ ಸಮಿತಿಯ ವರದಿಯನ್ನು ಒಪ್ಪದೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಮೊರೆ ಹೋದರೆ ಅದು ಅವರ ವಿಶೇಷಾಧಿಕಾರ ಎಂದು ಸಚಿವರು ಹೇಳಿದ್ದಾರೆ.

'ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಗಳನ್ನು ಪದಚ್ಯುತಗೊಳಿಸುವ ಅಧಿಕಾರ ಸಂಸತ್ತಿಗೆ ಇದೆ. ನ್ಯಾಯಮೂರ್ತಿಯೊಬ್ಬರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಅಂಗೀಕರಿಸಲು ಲೋಕಸಭೆಯಲ್ಲಿ ಕನಿಷ್ಠ 100 ಮತ್ತು ರಾಜ್ಯಸಭೆಯಲ್ಲಿ 50 ಸದಸ್ಯರ ಬೆಂಬಲದ ಅಗತ್ಯವಿದೆ' ಎಂದಿದ್ದಾರೆ.

ನಿಮಿಷ ಪ್ರಿಯಾ ರಕ್ಷಣೆಗೆ ಸರ್ವ ಪ್ರಯತ್ನ: ಕೇಂದ್ರ



ನಿಮಿಷ

ನವದೆಹಲಿ (ಪಿಟಿಐ): ಕೇರಳದ ನರ್ಸ್ ನಿಮಿಷ ಪ್ರಿಯಾ ಅವರಿಗೆ ವಿಧಿಸಲಾಗಿದ್ದ ಗಲ್ಲುಶಿಕ್ಷೆ ಜಾರಿಯನ್ನು ಯೆಮನ್‌ನ ಅಧಿಕಾರಿಗಳು ಮುಂದೂಡಿದ್ದಾರೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ತಿಳಿಸಿದೆ.

ಗಲ್ಲು ಶಿಕ್ಷೆಯಿಂದ ನಿಮಿಷ ಪ್ರಿಯಾ ಅವರನ್ನು ರಕ್ಷಿಸಿ, ಭಾರತಕ್ಕೆ ಕರೆತರಲು ರಾಜತಾಂತ್ರಿಕ ಮಾರ್ಗ ಬಳಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯನ್ನು ಸುಪ್ರೀಂಕೋರ್ಟ್ ಶುಕ್ರವಾರ ನಡೆಸಿತು.

ಕೇಂದ್ರದ ಪರವಾಗಿ ಹಾಜರಾದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, 'ನಿಮಿಷ ಪ್ರಿಯಾ ಸುರಕ್ಷಿತವಾಗಿ ಭಾರತಕ್ಕೆ ಮರಳುವುದನ್ನು ಕೇಂದ್ರ ಸರ್ಕಾರ ಬಯಸುತ್ತದೆ. ಈ ನಿಟ್ಟಿನಲ್ಲಿ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ' ಎಂದು ಕೋರ್ಟ್‌ಗೆ ತಿಳಿಸಿದರು.

'ಈ ಪ್ರಕರಣದಲ್ಲಿ ಸರ್ಕಾರವು ಸಾಕಷ್ಟು ಕಾಳಜಿ ವಹಿಸಿ, ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ನಡೆಸುತ್ತಿರುವುದು ಗಮನಕ್ಕೆ ಬಂದಿದೆ' ಎಂದು ನ್ಯಾಯಮೂರ್ತಿ ವಿಕ್ರಂ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಿತು. ಮುಂದಿನ ವಿಚಾರಣೆಯನ್ನು ಆಗಸ್ಟ್ 14ಕ್ಕೆ ಮುಂದೂಡಿತು.

2017ರಲ್ಲಿ ಯೆಮನ್‌ನ ನಾಗರಿಕ ತಲಾಲ್ ಅಬ್ದೋ ಮಹ್ದಿ ಹತ್ಯೆ ಮಾಡಿದ ಆರೋಪದ ಮೇಲೆ ಕೇರಳದ ಪಾಲಕ್ಕಾಡ್ ಜಿಲ್ಲೆಯ ಕೊಲ್ಲಂಗೋಡ್‌ನ ನಿವಾಸಿ ನಿಮಿಷ ಪ್ರಿಯಾ ಅವರಿಗೆ ಗಲ್ಲುಶಿಕ್ಷೆ ವಿಧಿಸಲಾಗಿತ್ತು. ಈ ಮೊದಲು ಅವರಿಗೆ ಜುಲೈ 16ರಂದು ಗಲ್ಲುಶಿಕ್ಷೆ ಜಾರಿ ನಿಗದಿಯಾಗಿತ್ತು. 38 ವರ್ಷದ ನಿಮಿಷ ಪ್ರಿಯಾ ಸದ್ಯ ಯೆಮನ್‌ನ ರಾಜಧಾನಿ ಸನಾದಲ್ಲಿ ಜೈಲಿನಲ್ಲಿ ಬಂಧಿಯಾಗಿದ್ದಾರೆ.

ತಬ್ಲಿಗಿ ಪ್ರಕರಣ: 70 ಜನ ಆರೋಪಮುಕ್ತ

ಕೋವಿಡ್–19 ಸೋಂಕು ಹರಡಲು ಕಾರಣವಾಗಿತ್ತು ಎನ್ನಲಾಗಿದ್ದ ತಬ್ಲಿಗಿ ಜಮಾತ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವಿದೇಶಿಯರಿಗೆ ಆಶ್ರಯ ನೀಡಿದ ಆರೋಪ ಎದುರಿಸುತ್ತಿದ್ದ 70 ಭಾರತೀಯರ ವಿರುದ್ಧದ ಪ್ರಕರಣವನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದೆ.

ತಮ್ಮ ವಿರುದ್ಧ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಆರೋಪಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಮೂರ್ತಿ ನೀನಾ ಬನ್ಸಲ್ ಕೃಷ್ಣ ಅವರು, 'ಆರೋಪಿಗಳಲ್ಲಿ ಕೋವಿಡ್ ಸೋಂಕು ಪತ್ತೆಯಾಗಿರುವ ಬಗ್ಗೆ ಮತ್ತು ಅವರು ನಿರ್ಲಕ್ಷ್ಯ ವಹಿಸಿ ಅಥವಾ ಕಾನೂನುಬಾಹಿರವಾಗಿ ಕೋವಿಡ್ ಸೋಂಕು ಹರಡಲು ಕಾರಣವಾಗಿರುವುದಕ್ಕೆ ಯಾವುದೇ ಪುರಾವೆಗಳಿಲ್ಲ' ಎಂದು ಹೇಳಿದ್ದಾರೆ.

'ಅರ್ಜಿದಾರರ ವಿರುದ್ಧದ ಕಾನೂನು ಕ್ರಮವನ್ನು ಮುಂದುವರಿಸುವುದು ಕಾನೂನು ದುರುಪಯೋಗಕ್ಕೆ ಸಮವಾಗಿರುತ್ತದೆ. ಹಾಗಾಗಿ ಅವರನ್ನು ಪ್ರಕರಣದಿಂದ ಮುಕ್ತಗೊಳಿಸಲಾಗುವುದು' ಎಂದು ನ್ಯಾಯಪೀಠ ತಿಳಿಸಿದೆ.

2020ರಲ್ಲಿ ದೆಹಲಿಯಲ್ಲಿ ನಡೆದಿದ್ದ ತಬ್ಲಿಗಿ ಜಮಾತ್‌ನಿಂದ ಕೋವಿಡ್ ಸೋಂಕು ಹಬ್ಬಿತ್ತು ಎಂದು ಆರೋಪಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗಿಯಾದವರಿಗೆ ಆಶ್ರಯ ನೀಡಿದ ಆರೋಪದಡಿ 70 ಮಂದಿ ಭಾರತೀಯರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

'ಪಹಲ್ಗಾಮ್ ದಾಳಿಯ ಬಗ್ಗೆ ಚರ್ಚೆ ನಡೆಯಲಿ'

ನವದೆಹಲಿ (ಪಿಟಿಐ): 'ಜುಲೈ 21ರಿಂದ ಆರಂಭಗೊಳ್ಳಲಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ ಮತ್ತು ಚೀನಾದ ಬಗೆಗಿನ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಬಗ್ಗೆ ಚರ್ಚೆಗೆ ಕನಿಷ್ಠ ಎರಡು ದಿನವಾದರೂ ಅವಕಾಶ ಕಲ್ಪಿಸಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದರು.

'ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ಬಗ್ಗೆಯೂ ಅಧಿವೇಶನದಲ್ಲಿ ಚರ್ಚೆ ನಡೆಯಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷದ ಈ ಎಲ್ಲ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ನೀಡಬೇಕು' ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆ ಬಗ್ಗೆ ಸೇನೆಯ ಹಿರಿಯ ಅಧಿಕಾರಿಗಳು ಮಹತ್ವದ ಹೇಳಿಕೆಗಳನ್ನು ನೀಡಿದ್ದು ಈ ಬಗ್ಗೆಯೂ ಚರ್ಚೆ ನಡೆಯಬೇಕು. ಚೀನಾದ ವಿಚಾರವೂ ಮಹತ್ವದ್ದಾಗಿದೆ. ಈಗ 'ಮೇಕ್ ಇನ್ ಇಂಡಿಯಾ'ವು 'ಮೇಡ್ ಇನ್ ಚೈನಾ' ಮೇಲೆ ಅವಲಂಬಿತವಾಗಿದೆ. ಈ ಎಲ್ಲ ವಿಚಾರಗಳನ್ನು ಚರ್ಚೆಗೆ ಒಳಪಡಿಸಬೇಕು' ಎಂದು ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

'ಸಂಸತ್ತಿನಲ್ಲಿ ಒಮ್ಮತ ಮೂಡಿಸಿ, ರಾಜಮಾರ್ಗ ರೂಪಿಸುವುದು ಸರ್ಕಾರದ ಕೆಲಸ. ಆದರೆ, ಕಳೆದ 11 ವರ್ಷಗಳಲ್ಲಿ ಇಂತಹ ಯಾವುದೇ ಬೆಳವಣಿಗೆಗಳು ನಡೆದಿಲ್ಲ. ಬದಲಿಗೆ ಪ್ರಧಾನಿ ಮೋದಿ ಅವರು ತಮ್ಮದೇ ಮಾರ್ಗದಲ್ಲಿ ಮುನ್ನಡೆಯುತ್ತಿದ್ದಾರೆ' ಎಂದು ಹೇಳಿದರು.

ಇಂದು ಇಂಡಿಯಾ ಕೂಟದ ಸಭೆ: ಮುಂಗಾರು ಅಧಿವೇಶನಕ್ಕೆ ಸಂಬಂಧಿಸಿದಂತೆ 'ಇಂಡಿಯಾ' ಕೂಟದ ಮಿತ್ರಪಕ್ಷಗಳು ಶನಿವಾರ ಆನ್‌ಲೈನ್ ಮೂಲಕ ಸಭೆ ನಡೆಸಲಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.



ಹರಿದ್ವಾರದ ಹರ್ ಕೀ ಪೌಡಿಯಲ್ಲಿ ಶ್ರಾವಣ ಮಾಸದ ಅಂಗವಾಗಿ ಗಂಗಾ ಜಲ ಸಂಗ್ರಹಿಸಲು ಶುಕ್ರವಾರ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಪಿಟಿಐ ಚಿತ್ರ


ಅಮರನಾಥ ಯಾತ್ರೆ ಮತ್ತೆ ಶುರು

ಜಮ್ಮು (ಪಿಟಿಐ): ಭಾರಿ ಮಳೆ ಮತ್ತು ಭೂಕುಸಿತದಿಂದಾಗಿ ತಾತ್ಕಾಲಿಕ ಸ್ಥಗಿತಗೊಂಡಿದ್ದ ಅಮರನಾಥ ಯಾತ್ರೆ ಶುಕ್ರವಾರ ಮತ್ತೆ ಆರಂಭಗೊಂಡಿತು. 7,900 ಯಾತ್ರಾರ್ಥಿಗಳ ಹೊಸ ತಂಡ ಜಮ್ಮು ಮೂಲಕ ದಕ್ಷಿಣ ಕಾಶ್ಮೀರದ ಹಿಮಾಲಯದ 3,880 ಮೀಟರ್ ಎತ್ತರದಲ್ಲಿರುವ ಗುಹಾ ಮಂದಿರಕ್ಕೆ ತೆರಳಿತು.

5957 ಪುರುಷರು, 1613 ಮಹಿಳೆಯರು, 26 ಮಕ್ಕಳು, 310 ಸಾಧುಗಳಿದ್ದ ತಂಡಕ್ಕೆ ಸಿಆರ್‌ಪಿಎಫ್ (ಕೇಂದ್ರೀಯ ಮೀಸಲು ಪೊಲೀಸ್ ಪಡೆ) ಮತ್ತು ಪೊಲೀಸರ ಬೆಂಗಾವಲು ಕಲ್ಪಿಸಲಾಗಿತ್ತು.

ಜುಲೈ 2ರಿಂದ ಈವರೆಗೆ 1.09 ಲಕ್ಷಕ್ಕೂ ಹೆಚ್ಚು ಯಾತ್ರಾರ್ಥಿಗಳು ಜಮ್ಮು ಶಿಬಿರದಿಂದ ದೇಗುಲಕ್ಕೆ ತೆರಳಿದ್ದಾರೆ. ಈವರೆಗೆ 2.50 ಲಕ್ಷ ಯಾತ್ರಾರ್ಥಿಗಳು ದರ್ಶನ ಪಡೆದಿದ್ದಾರೆ. ನೋಂದಣಿ ಕೇಂದ್ರಗಳಲ್ಲಿ ಇನ್ನೂ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 38 ದಿನಗಳ ಅಮರನಾಥ ಯಾತ್ರೆಯು ಆಗಸ್ಟ್ 9ರಂದು ಅಂತ್ಯಗೊಳ್ಳಲಿದೆ.

ಭಾರಿ ಮಳೆ ಕಾರಣದಿಂದಾಗಿ ಜಮ್ಮು, ಪಹಲ್ಗಾಮ್ ಮತ್ತು ಬಾಲ್ತಾಲ್ ಶಿಬಿರಗಳ ಬಳಿ ಯಾತ್ರೆಯನ್ನು ಗುರುವಾರ ಸ್ಥಗಿತಗೊಳಿಸಲಾಗಿತ್ತು.



ಜಮ್ಮು–ಕಾಶ್ಮೀರದ ಅನಂತನಾಗ್ ಜಿಲ್ಲೆಯ ಶೇಷನಾಗ ಪ್ರದೇಶದಲ್ಲಿ ಅಮರನಾಥ ಯಾತ್ರಾರ್ಥಿಗಳಿಗೆ ಪರ್ವತ ರಕ್ಷಣಾ ತಂಡದ ಸದಸ್ಯರು ಮಾರ್ಗದರ್ಶನ ಮಾಡಿದರು.

ವಿಶೇಷ ನ್ಯಾಯಾಲಯ ಸ್ಥಾಪನೆ ಕೇಂದ್ರ, ಮಹಾರಾಷ್ಟ್ರಕ್ಕೆ ತರಾಟೆ

ನವದೆಹಲಿ (ಪಿಟಿಐ): ವಿಶೇಷ ಕಾಯ್ದೆಗಳಡಿ ದಾಖಲಾದ ಪ್ರಕರಣಗಳ ವಿಚಾರಣೆಗೆ ತ್ವರಿತವಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸದ ಕೇಂದ್ರ ಸರ್ಕಾರ ಹಾಗೂ ಮಹಾರಾಷ್ಟ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, 'ಎನ್‌ಐಎ ಕಾಯ್ದೆ ಮತ್ತು ಇತರ ವಿಶೇಷ ಕಾಯ್ದೆಗಳಡಿ ತ್ವರಿತವಾಗಿ ವಿಚಾರಣೆ ನಡೆಸಲು ಅಗತ್ಯ ಮೂಲಸೌಕರ್ಯಗಳೊಂದಿಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಲ್ಲಿ ಸಂಬಂಧಪಟ್ಟ ಪ್ರಾಧಿಕಾರವು ವಿಫಲವಾದಾಗ, ಶೀಘ್ರವಾಗಿ ವಿಚಾರಣೆ ಪೂರ್ಣಗೊಳಿಸಲು ಸಾಧ್ಯ ಆಗದಿರುವ ಕಾರಣದಿಂದಾಗಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಬೇಕಾದ ಪರಿಸ್ಥಿತಿ ನ್ಯಾಯಾಲಯಕ್ಕೆ ಎದುರಾಗುತ್ತದೆ' ಎಂದು ಹೇಳಿದೆ.

ನಕ್ಸಲ್ ಪರ ಸಹಾನುಭೂತಿ ಹೊಂದಿದ್ದಾರೆ ಎಂಬ ಆರೋಪ ಹೊತ್ತಿರುವ ಮಹಾರಾಷ್ಟ್ರದ ಗಡ್‌ಚಿರೋಲಿಯ ಕೈಲಾಶ್ ರಾಮಚಂದಾನಿ ಅವರ ಜಾಮೀನು ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಈ ಆದೇಶ ಹೊರಡಿಸಿದೆ.

ಈ ಹಿಂದೆಯೂ ಜಾಮೀನು ಅರ್ಜಿ ತಿರಸ್ಕರಿಸಿದ್ದನ್ನು ಉಲ್ಲೇಖಿಸಿದ ಸುಪ್ರೀಂ ಕೋರ್ಟ್, 'ಎನ್‌ಐಎ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯ ಸ್ಥಾಪಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಫಲವಾದರೆ, ಮುಂದಿನ ವಿಚಾರಣೆಯಲ್ಲೇ ಈ ಅರ್ಜಿಯನ್ನು ಪರಿಗಣಿಸಬೇಕು' ಎಂದಿದೆ.

ವಿಶೇಷ ನ್ಯಾಯಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ಮಹಾರಾಷ್ಟ್ರ ಸರ್ಕಾರಕ್ಕೆ ಕೊನೆಯ ಅವಕಾಶ ನೀಡಲಾಗಿದೆ ಎಂದ ನ್ಯಾಯಪೀಠವು, ವಿಚಾರಣೆಯನ್ನು ನಾಲ್ಕು ವಾರ ಮುಂದೂಡಿದೆ.

ಛತ್ತೀಸಗಢ: ಆರು ನಕ್ಸಲರ ಹತ್ಯೆ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ಭದ್ರತಾ ಪಡೆ ಸಿಬ್ಬಂದಿ ಶುಕ್ರವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಆರು ನಕ್ಸಲರು ಮೃತಪಟ್ಟಿದ್ದಾರೆ.

'ಅಬುಜಾಮಡ್ ಪ್ರದೇಶದ ಅರಣ್ಯದಲ್ಲಿ ನಕ್ಸಲರು ಸಕ್ರಿಯರಾಗಿರುವ ಬಗ್ಗೆ ದೊರೆತ ಮಾಹಿತಿಯ ಆಧಾರದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸಲಾಗಿತ್ತು. ಈ ವೇಳೆ ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಹತರಾದ ನಕ್ಸಲರ ಶವ, ಎಕೆ 47, ಎಸ್‌ಎಲ್‌ಆರ್ ರೈಫಲ್, ಇತರ ಶಸ್ತ್ರಾಸ್ತ್ರ, ಸ್ಫೋಟಕಗಳು ಮತ್ತು ದಿನನಿತ್ಯ ಬಳಕೆಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಮುಂದುವರಿದಿದೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ವಿದ್ಯಾರ್ಥಿನಿ ಸಾವು: ನ್ಯಾಯಾಂಗ ತನಿಖೆಗೆ ಬಿಜೆಡಿ ಒತ್ತಾಯ



ಭುವನೇಶ್ವರ (ಪಿಟಿಐ): ಬಾಲೇಶ್ವರದ ಎಫ್.ಎಂ ಕಾಲೇಜಿನ ವಿದ್ಯಾರ್ಥಿನಿ ಆತ್ಮಹತ್ಯೆ ಪ್ರಕರಣ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿ, ಬಿಜೆಡಿ ಕಾರ್ಯಕರ್ತರು ಶುಕ್ರವಾರ ಇಲ್ಲಿನ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಡಿಯ ಮಹಿಳಾ, ವಿದ್ಯಾರ್ಥಿ ಮತ್ತು ಯುವ ಘಟಕದ ಕಾರ್ಯಕರ್ತರು ಮುಖಕ್ಕೆ ಕಪ್ಪು ಮಾಸ್ಕ್ ಧರಿಸಿಕೊಂಡು ಮೌನ ಪ್ರತಿಭಟನೆ ನಡೆಸಿದರು. ನ್ಯಾಯಾಂಗ ತನಿಖೆಯೇ ಆಗಬೇಕು ಎಂದು ಪಟ್ಟು ಹಿಡಿದರು.

'ಸರ್ಕಾರವು ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವವರೆಗೆ ಪ್ರತಿಭಟನೆ ಮುಂದುವರಿಸಲು ಬಿಜೆಡಿ ನಿರ್ಧರಿಸಿದೆ. ಜುಲೈ 21ರಂದು ಕಟಕ್, ಸಂಭಲ್‌ಪುರ ಮತ್ತು ಬೆಹ್ರಾಂಪುರದಲ್ಲಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ' ಎಂದು ಬಿಜೆಡಿ ಉಪಾಧ್ಯಕ್ಷ ದೇವಿ ಪ್ರಸಾದ್ ಮಿಶ್ರಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಜುಲೈ 16ರಂದು ಶಾಂತಿಯುತ ಪ್ರತಿಭಟನೆಗೆ ಮುಂದಾದ ನಮ್ಮ ಮೇಲೆ ಪೊಲೀಸರು ಅಶ್ರುವಾಯು, ಜಲಫಿರಂಗಿ ಬಳಸಿದ್ದರಿಂದ ತಳ್ಳಾಟ –ನೂಕಾಟ ಉಂಟಾಗಿ ಅನೇಕ ಕಾರ್ಯಕರ್ತರು ಗಾಯಗೊಂಡಿದ್ದಾರೆ' ಎಂದು ಬಿಜೆಡಿ ನಾಯಕಿ ಟುಕುನಿ ಸಾಹೊ ಆಕ್ರೋಶ ವ್ಯಕ್ತಪಡಿಸಿದರು.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿಸಿ ದ್ವಿತೀಯ ವರ್ಷದ ಬಿ.ಇಡಿ ವಿದ್ಯಾರ್ಥಿನಿ ಜುಲೈ 12ರಂದು ಕಾಲೇಜು ಆವರಣದಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. 14ರಂದು ಮೃತಪಟ್ಟಿದ್ದರು.

34 ಭಾರತೀಯ ಮೀನುಗಾರರ ಬಿಡುಗಡೆಗೆ ಒತ್ತಾಯ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಸಮುದ್ರ ಗಡಿ ರೇಖೆ ಉಲ್ಲಂಘಿಸಿ ಮೀನುಗಾರಿಕೆ ನಡೆಸಿದ ಆರೋಪದಲ್ಲಿ ಬಾಂಗ್ಲಾದೇಶ ವಶಕ್ಕೆ ಪಡೆದಿರುವ 34 ಭಾರತೀಯ ಮೀನುಗಾರರನ್ನು ಬಿಡುಗಡೆ ಮಾಡುವಂತೆ ಭಾರತ ಒತ್ತಾಯಿಸಿದೆ.

ಜುಲೈ 14, 15ರಂದು ಬಾಂಗ್ಲಾದೇಶವು ಒಟ್ಟು 34 ಭಾರತೀಯ ಮೀನುಗಾರರನ್ನು ವಶಕ್ಕೆ ಪಡೆದಿದೆ. ಬಾಂಗ್ಲಾದಲ್ಲಿರುವ ಭಾರತೀಯ ರಾಯಭಾರಿ ಅಧಿಕಾರಿ, ಈ ವಿಷಯವನ್ನು ಅಲ್ಲಿನ ಅಧಿಕಾರಿಗಳ ಗಮನಕ್ಕೆ ತಂದಿದ್ದು, ಮೀನುಗಾರರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ' ಎನ್ನಲಾಗಿದೆ

ಬಿಹಾರ: ಸಿಡಿಲಿಗೆ 33 ಸಾವು

ಪಟ್ನಾ (ಪಿಟಿಐ): ಬಿಹಾರದಲ್ಲಿ ಕಳೆದ ಎರಡು ದಿನಗಳಲ್ಲಿ ಸಿಡಿಲು ಬಡಿದು ಕನಿಷ್ಠ 33 ಜನ ಮೃತಪಟ್ಟಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ಶುಕ್ರವಾರ ತಿಳಿಸಿದೆ.

ಸಿಡಿಲು ಬಡಿದು ನಳಂದಾ ಮತ್ತು ವೈಶಾಲಿಯಲ್ಲಿ ತಲಾ ಆರು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಶೇಖ್‌ಪುರದಲ್ಲಿ ಐದು, ಪಟ್ನಾ ಮತ್ತು ಔರಂಗಾಬಾದ್‌ನಲ್ಲಿ ತಲಾ ಮೂವರು ಮತ್ತು ನವಾದಾ ಮತ್ತು ಬಾಂಕಾದಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ.

ದೆಹಲಿ ಶಾಲೆಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ದೆಹಲಿಯ ಹಲವು ಶಾಲೆಗಳಿಗೆ ಶುಕ್ರವಾರ ಬಾಂಬ್ ಬೆದರಿಕೆ ಬಂದಿದ್ದು, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಲ್ಲಿ ಆತಂಕ ಮೂಡಿಸಿತ್ತು.

ರಾಷ್ಟ್ರ ರಾಜಧಾನಿಯ ಹಲವು ಶಾಲೆಗಳಿಗೆ ಇಂತಹ ಬಾಂಬ್ ಬೆದರಿಕೆ ಬಂದಿದ್ದು, ಈ ವಾರದಲ್ಲೇ ಇದು ನಾಲ್ಕನೇ ಬಾರಿ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹಿಂದೂ, ಬೌದ್ಧ, ಸಿಖ್ ಧರ್ಮೀಯರಿಗೆ ಮಾತ್ರ ಎಸ್‌ಸಿ ಮೀಸಲಾತಿ: ಸಿ.ಎಂ

ಮುಂಬೈ (ಪಿಟಿಐ): ಹಿಂದೂ, ಬೌದ್ಧ ಅಥವಾ ಸಿಖ್ ಧರ್ಮೀಯರ ಹೊರತಾಗಿ ಬೇರೆಯವರು ಪರಿಶಿಷ್ಟ ಜಾತಿಯ (ಎಸ್‌ಸಿ) ಪ್ರಮಾಣಪತ್ರ ಹೊಂದಿದ್ದರೆ ಅದನ್ನು ರದ್ದುಗೊಳಿಸಲಾಗುವುದು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಗುರುವಾರ ಹೇಳಿದ್ದಾರೆ.

'ಅಂತಹ ವ್ಯಕ್ತಿಗಳು ಸರ್ಕಾರಿ ನೌಕರಿ ಅಥವಾ ಇತರ ಸೌಲಭ್ಯಗಳನ್ನು ಎಸ್‌ಸಿ ಮೀಸಲಾತಿಯಡಿ ಪಡೆದಿದ್ದರೆ ಕ್ರಮ ಕೈಗೊಳ್ಳಲಾಗುವುದು. ಅಕ್ರಮವಾಗಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದು ಚುನಾವಣೆಯಲ್ಲಿ ಗೆಲುವು ಪಡೆದಿದ್ದರೆ ಅದನ್ನೂ ಅನೂರ್ಜಿತಗೊಳಿಸಲಾಗುವುದು' ಎಂದು ಫಡಣವೀಸ್ ವಿಧಾನ ಪರಿಷತ್‌ನಲ್ಲಿ ಹೇಳಿದ್ದಾರೆ.

'ಬಲವಂತವಾಗಿ ಅಥವಾ ವಂಚಿಸಿ ಮತಾಂತರ ನಡೆಸುವವರ ವಿರುದ್ಧ ಕ್ರಮಕ್ಕೆ ಕಠಿಣ ಕಾನೂನುಗಳನ್ನು ಜಾರಿಗೊಳಿಸುತ್ತೇವೆ' ಎಂದು ತಿಳಿಸಿದ್ದಾರೆ.

ಸಾಧನೆ, 'ಶಕ್ತಿ ಪ್ರದರ್ಶನ'ಕ್ಕೆ ಸಜ್ಜು

ಒಂದನೇ ಪುಟದಿಂದ...

'ಮುಡಾ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ' ಎಂದು ವಿರೋಧ ಪಕ್ಷಗಳಾದ ಬಿಜೆಪಿ–ಜೆಡಿಎಸ್‌ನವರು ಆರೋಪಿಸಿದಾಗಲೂ ಸಿದ್ದರಾಮಯ್ಯ ಇಲ್ಲಿ ಸಮಾವೇಶ ನಡೆಸಿ ಶಕ್ತಿ ಪ್ರದರ್ಶಿಸಿದ್ದರು.

ಸರ್ಕಾರದ ಸಾಧನೆಗಳನ್ನು ಬಿಂಬಿಸುವ ಸಮಾವೇಶಕ್ಕೆ ಲಕ್ಷಕ್ಕೂ ಹೆಚ್ಚಿನ ಜನರನ್ನು ಸೇರಿಸಬೇಕು ಎಂಬ ಗುರಿಯನ್ನು ಈ ಭಾಗದ ಸಚಿವರು, ಶಾಸಕರಿಗೆ ನೀಡಿದ್ದಾರೆ ಎನ್ನಲಾಗಿದೆ. ಬರೋಬ್ಬರಿ ₹2,578 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನಡೆಯಲಿದೆ.

ಮುಖ್ಯಮಂತ್ರಿ ಜೊತೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಸಚಿವರು ಪಾಲ್ಗೊಳ್ಳುವರು.

ಬೃಹತ್ ವೇದಿಕೆ ಸಜ್ಜಾಗಿದ್ದು, ಸಿದ್ದರಾಮಯ್ಯ ಆಪ್ತರೂ ಆದ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಆಯೋಜನೆಯ ನೇತೃತ್ವ ವಹಿಸಿದ್ದಾರೆ. ಇಂತಿಷ್ಟು ಜನರನ್ನು ಕರೆತರಲು ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. 'ಗ್ಯಾರಂಟಿ' ಯೋಜನೆಗಳ ಫಲಾನುಭವಿಗಳನ್ನು ಕರೆತರುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ.

ಅತ್ಯಧಿಕ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಿ ಸಿದ್ದರಾಮಯ್ಯ ಅವರಿಗೆ 'ಬಲ' ತುಂಬಬೇಕು ಎನ್ನುವುದು ಅವರ ಬಣದವರು ಹಾಗೂ ಬೆಂಬಲಿಗರ ಗುರಿಯಾಗಿದೆ ಎಂದು ಹೇಳಲಾಗುತ್ತಿದೆ.

> ಸಮಾವೇಶ ಮೊದಲೇ ನಿಗದಿಯಾಗಿತ್ತು. ಶಕ್ತಿ ಪ್ರದರ್ಶನವೇನಿಲ್ಲ. ನಾಯಕತ್ವ ಬದಲಾವಣೆ, ಅದಲು-ಬದಲು ಮೊದಲಾದ ವಿಚಾರಗಳು ಈಗ ಅನಗತ್ಯ. ಅಭಿವೃದ್ಧಿಯಷ್ಟೇ ಮುಖ್ಯ
> **ಡಾ.ಎಚ್‌.ಸಿ. ಮಹದೇವಪ್ಪ,** ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

> ಸಿದ್ದರಾಮಯ್ಯ ತಮ್ಮ ಕುರ್ಚಿಗೆ ಸಂಕಷ್ಟ ಬಂದಾಗಲೆಲ್ಲಾ ಸಮಾವೇಶ ನಡೆಸುತ್ತಾರೆ. ಜನ ಸೇರಿಸಲು ಜಿಲ್ಲೆಯ ಕಾಂಗ್ರೆಸ್ ಶಾಸಕರಿಗೆ ತಲಾ ₹10 ಲಕ್ಷ ಕೊಟ್ಟಿದ್ದಾರೆ
> **ಎ.ಎಚ್. ವಿಶ್ವನಾಥ್,** ಬಿಜೆಪಿ ವಿಧಾನಪರಿಷತ್ ಸದಸ್ಯ

ಮುಖ್ಯಾಂಶಗಳು

- ಒಂದು ಲಕ್ಷ ಮಂದಿ ಸೇರಿಸುವ ಗುರಿ
- ₹2,578 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ, ಉದ್ಘಾಟನೆ

ಅಬಕಾರಿ ಹಗರಣ: ಚೈತನ್ಯ ಬಘೆಲ್ ಬಂಧನ

ಒಂದನೇ ಪುಟದಿಂದ...

'ಅಬಕಾರಿ ಹಗರಣದಲ್ಲಿ ಚೈತನ್ಯ ಕೂಡ ಪಾಲುದಾರ. ಈ ಅಕ್ರಮದಲ್ಲಿ ಅವರು ₹17 ಕೋಟಿಯಷ್ಟು ಪಡೆದಿದ್ದಾರೆ. ಈ ಹಗರಣದಿಂದ ಸರ್ಕಾರದ ಬೊಕ್ಕಸಕ್ಕೆ ₹2,100 ಕೋಟಿಗೂ ಹೆಚ್ಚಿನ ನಷ್ಟ ಉಂಟಾಗಿದೆ' ಎಂದು ಇ.ಡಿ ಹೇಳಿದೆ.

ಈ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಕವಾಸಿ ಲಕ್ಮಾ, ಅನ್ವರ್ ದೇಬರ್, ಮಾಜಿ ಐಎಎಸ್ ಅಧಿಕಾರಿ ಅನಿಲ್ ಟುಟೇಜಾ, ಐಟಿಎಸ್ ಅಧಿಕಾರಿ ಅರುಣಪತಿ ತ್ರಿಪಾಠಿ ಮತ್ತಿತರರನ್ನು ಇ.ಡಿ ಬಂಧಿಸಿದೆ.

2019–22ರ ಅವಧಿಯಲ್ಲಿ ಛತ್ತೀಸಗಡದಲ್ಲಿ ಭೂಪೇಶ್ ಬಘೆಲ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಬಕಾರಿ ಹಗರಣ ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಇದುವರೆಗೆ ₹205 ಕೋಟಿ ಮೊತ್ತದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಅಧಿವೇಶನ ಬಹಿಷ್ಕಾರ; ಸಭಾತ್ಯಾಗ

'ವಿರೋಧ ಪಕ್ಷದ ಮುಖಂಡರನ್ನು ಮಟ್ಟಹಾಕಲು ಸರ್ಕಾರ ಇ.ಡಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಇದ್ದು, ತನಿಖೆಗೆ ಸಂಪೂರ್ಣ ಸಹಕಾರ ನೀಡಲಾಗುವುದು' ಎಂದು ಭೂಪೇಶ್ ಬಘೆಲ್ ಹೇಳಿದ್ದಾರೆ.

ಚೈತನ್ಯ ಬಘೆಲ್ ಬಂಧನದ ಬೆನ್ನಲ್ಲೇ, ಕಾಂಗ್ರೆಸ್ ಶಾಸಕರು ಶುಕ್ರವಾರ ವಿಧಾನಸಭೆ ಅಧಿವೇಶನ ಬಹಿಷ್ಕರಿಸಿ ಸಭಾತ್ಯಾಗ ಮಾಡಿದರು. ವಿರೋಧ ಪಕ್ಷಕ್ಕೆ ಕಿರುಕುಳ ನೀಡಲು ಇ.ಡಿಯನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸಹನೆಗಿಂತಲೂ ದೊಡ್ಡ ತಪಸ್ಸು ಬೇರೊಂದಿಲ್ಲ.

–ಗುರುನಾನಕ್

ಸಂಪಾದಕೀಯ

ಚಿಲ್ಲರೆ ಹಣದುಬ್ಬರ ಪ್ರಮಾಣ ಇಳಿಕೆ ಜೀವನ ನಿರ್ವಹಣೆ ವೆಚ್ಚ ತಗ್ಗಿದೆಯೇ?

ಚಿಲ್ಲರೆ ಹಣದುಬ್ಬರ ಪ್ರಮಾಣವು ಕಳೆದ ಕೆಲವು ತಿಂಗಳುಗಳಿಂದ ಕಡಿಮೆ ಆಗುತ್ತಿದೆ. 'ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಇದನ್ನು ದೃಢಪಡಿಸಿವೆ. 'ಗ್ರಾಹಕ ಬೆಲೆ ಸೂಚ್ಯಂಕ' (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್ ತಿಂಗಳಲ್ಲಿ ಶೇ 2.1ಕ್ಕೆ ಇಳಿದಿದೆ. ಇದು ಮೇ ತಿಂಗಳಲ್ಲಿ ಶೇ 2.82ರಷ್ಟು ಇತ್ತು. ಜೂನ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ಪ್ರಮಾಣವು ಆರು ವರ್ಷಗಳ ಕನಿಷ್ಠ ಮಟ್ಟದ್ದು. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರಲ್ಲಿ ಮಿತಿಗೊಳಿಸುವ ಹೊಣೆಯು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮೇಲಿದೆ. ಜೂನ್ ತಿಂಗಳನ್ನೂ ಪರಿಗಣಿಸಿದರೆ ಚಿಲ್ಲರೆ ಹಣದುಬ್ಬರ ದರವು ಸತತ ಐದು ತಿಂಗಳುಗಳಿಂದ ಶೇ 4ಕ್ಕಿಂತ ಕಡಿಮೆ ದಾಖಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸರಾಸರಿ ಶೇ 2.7ರಷ್ಟಾಗಿದೆ. ಇದು 'ಆರ್‌ಬಿಐ'ನ ನಿರೀಕ್ಷೆಯಾದ ಶೇ 2.9ಕ್ಕಿಂತ ಕಡಿಮೆ. 2024ರ ನವೆಂಬರ್ ತಿಂಗಳಿನಿಂದ ಚಿಲ್ಲರೆ ಹಣದುಬ್ಬರ ಪ್ರಮಾಣ ಇಳಿಮುಖವಾಗಿದೆ.

2019ರ ಜನವರಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 1.97ರಷ್ಟು ದಾಖಲಾಗಿತ್ತು. ಅದಾದ ನಂತರ ಕನಿಷ್ಠ ಪ್ರಮಾಣ ದಾಖಲಾಗಿರುವುದು ಜೂನ್ ತಿಂಗಳಲ್ಲಿ. ಗ್ರಾಮೀಣ ಪ್ರದೇಶಗಳಲ್ಲಿ ದಾಖಲಾಗಿರುವ ಶೇ 1.97ರಷ್ಟು ಹಣದುಬ್ಬರವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ನಗರ ಪ್ರದೇಶಗಳಲ್ಲಿ ಶೇ 2.56ರಷ್ಟು ಹಣದುಬ್ಬರ ದಾಖಲಾಗಿದೆ. ಆಹಾರ ಪದಾರ್ಥಗಳ ಬೆಲೆಯಲ್ಲಿ ಇಳಿಕೆ ಆಗಿರುವುದು ಒಟ್ಟಾರೆ ಹಣದುಬ್ಬರ ಕಡಿಮೆ ಆಗಿರುವುದಕ್ಕೆ ಕಾರಣವಾಗಿದೆ. ಆಹಾರ ಪದಾರ್ಥ ಪಾನೀಯಗಳ ಬೆಲೆಯಲ್ಲಿ ಶೇ 0.2ರಷ್ಟು ಇಳಿಕೆ ಆಗಿದೆ. ತರಕಾರಿ ಹಾಗೂ ದ್ವಿದಳ ಧಾನ್ಯಗಳ ಬೆಲೆಯಲ್ಲಿ ತೀವ್ರ ಇಳಿಕೆ ಕಂಡುಬಂದಿದೆ. ಕೃಷಿ ಚಟುವಟಿಕೆಗಳು ಉತ್ತಮವಾಗಿರುವ ಕಾರಣದಿಂದಾಗಿ ಮುಂದಿನ ದಿನಗಳಲ್ಲಿಯೂ ಆಹಾರ ಪದಾರ್ಥಗಳ ಬೆಲೆಯು ಕಡಿಮೆ ಮಟ್ಟದಲ್ಲಿಯೇ ಇರುವ ನಿರೀಕ್ಷೆ ಇದೆ. ನೈಋತ್ಯ ಮುಂಗಾರು ಮಳೆಯು ದೇಶದ ಬಹುಭಾಗವನ್ನು ಆವರಿಸಿದೆ. ಜೂನ್ ತಿಂಗಳ ಪ್ರಥಮಾರ್ಧದಲ್ಲಿ ದೇಶದಲ್ಲಿ ಮಳೆಯ ಕೊರತೆ ಇತ್ತು. ಆದರೆ ಈಗಿನ ಅಂಕಿ–ಅಂಶಗಳ ಪ್ರಕಾರ, ದೇಶದಲ್ಲಿ ಸರಾಸರಿ ಮಳೆಯ ಪ್ರಮಾಣವು ದೀರ್ಘಾವಧಿ ಸರಾಸರಿಗಿಂತ ಶೇ 9.5ರಷ್ಟು ಹೆಚ್ಚಿದೆ. ಮುಂಗಾರು ಅವಧಿಯಲ್ಲಿ ಬೆಳೆಗಳನ್ನು ಬೆಳೆಯುವ ಪ್ರಮಾಣವು ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ.



ಹಣದುಬ್ಬರ ಪ್ರಮಾಣ ಇಳಿಮುಖಗೊಂಡು, ಆಹಾರ ಪದಾರ್ಥಗಳಿಗೆ ಮಾಡಬೇಕಿರುವ ವೆಚ್ಚ ಕಡಿಮೆ ಆಗಿದೆ. ಜನರ ಒಟ್ಟಾರೆ ಜೀವನ ನಿರ್ವಹಣೆ ವೆಚ್ಚ ಕಡಿಮೆ ಆಗಿಲ್ಲ.

ಕಚ್ಚಾ ತೈಲದ ಬೆಲೆಯಲ್ಲಿ ಹೆಚ್ಚಳ ಆಗಬಹುದು ಎಂಬ ಭೀತಿಯು ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಘೋಷಣೆಯ ಕಾರಣದಿಂದಾಗಿ ತಗ್ಗಿದೆ. ಹೀಗಾಗಿ, ಹಣದುಬ್ಬರ ಪ್ರಮಾಣವು ನಿಯಂತ್ರಣದಲ್ಲಿ ಇರುವುದು ಎನ್ನುವ ಆಶಾಭಾವನೆ ಇದೆ. ಆದರೆ, ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಆಹಾರ ಪದಾರ್ಥಗಳನ್ನು ಹೊರತುಪಡಿಸಿ ಇತರ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿದೆ ಎಂಬುದನ್ನು ಗಮನಿಸಬೇಕು. ಶಿಕ್ಷಣ, ಆರೋಗ್ಯ ಸೇವೆಗಳ ವೆಚ್ಚ, ದಿನನಿತ್ಯ ಇತರ ಹಲವು ಅಗತ್ಯ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಳ ಆಗಿದೆ. ಅಂದರೆ, ಆಹಾರ ಪದಾರ್ಥಗಳಿಗೆ ಮಾಡಬೇಕಿರುವ ವೆಚ್ಚವು ಕಡಿಮೆ ಆಗಿದ್ದರೂ, ಜನರ ಒಟ್ಟಾರೆ ಜೀವನ ನಿರ್ವಹಣೆ ವೆಚ್ಚದಲ್ಲಿ ಕಡಿಮೆ ಆಗಿಲ್ಲ. ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಆಹಾರ ಪದಾರ್ಥಗಳ ಪಾಲು ಹೆಚ್ಚಿದೆ (ಶೇ 46ರಷ್ಟು). ಹೀಗಾಗಿ, ಅವುಗಳ ಬೆಲೆಯಲ್ಲಿ ಆಗುವ ಬದಲಾವಣೆಗಳು ಹಣದುಬ್ಬರದ ಮೇಲೆ ಹೆಚ್ಚು ಪರಿಣಾಮ ಉಂಟು ಮಾಡುತ್ತವೆ. ಹಣದುಬ್ಬರಕ್ಕೆ ಸಂಬಂಧಿಸಿದ ಜೂನ್ ತಿಂಗಳ ಅಂಕಿ–ಅಂಶಗಳು ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಆಲೋಚನೆಗಳ ಮೇಲೆ ಪ್ರಭಾವ ಬೀರಲಿವೆಯೇ ಎಂಬುದು ಈಗಿರುವ ಮಹತ್ವದ ಪ್ರಶ್ನೆ. 'ಎಂಪಿಸಿ' ಸಭೆ ಆಗಸ್ಟ್‌ಗೆ ನಿಗದಿಯಾಗಿದೆ. ಕಳೆದ ತಿಂಗಳ ಸಭೆಯಲ್ಲಿ ಎಂಪಿಸಿಯು ರೆಪೊ ದರವನ್ನು ಶೇ 0.50ರಷ್ಟು ಕಡಿಮೆ ಮಾಡಿದೆ. ಫೆಬ್ರುವರಿಯ ನಂತರದಲ್ಲಿ ರೆಪೊ ದರವು ಒಟ್ಟು ಶೇ 1ರಷ್ಟು ಇಳಿಕೆ ಆಗಿರುವುದರಿಂದ, ರೆಪೊ ದರವನ್ನು ಇನ್ನೂ ತಗ್ಗಿಸಲು ಹೆಚ್ಚು ಅವಕಾಶ ಇಲ್ಲ ಎಂದು ಎಂಪಿಸಿ ಹೇಳಿದೆ. ಮುಂದಿನ ತೀರ್ಮಾನ ತೆಗೆದುಕೊಳ್ಳುವ ಮೊದಲು ಕಾದುನೋಡುವ ಕೆಲಸ ಮಾಡಲಾಗುತ್ತದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಕೂಡ ಹೇಳಿದ್ದಾರೆ.

ಮಾಧ್ಯಮದ ಹೊಣೆಗಾರಿಕೆ ಏನು?



ಏರ್ ಇಂಡಿಯಾ ವಿಮಾನ ಪತನಕ್ಕೆ, ಇಂಧನ ಪೂರೈಸುವ ಸ್ವಿಚ್‌ಗಳನ್ನು ಪೈಲಟ್ 'ಕಟ್ ಆಫ್' ಮಾಡಿದ್ದೇ ಕಾರಣವೆಂದು 'ದಿ ವಾಲ್ ಸ್ಟ್ರೀಟ್ ಜರ್ನಲ್' ಪತ್ರಿಕೆ ವರದಿ ಮಾಡಿದೆ. 'ಸ್ಕೂಪ್' ಎಂದು ಕರೆದುಕೊಂಡಿರುವ ಆ ವರದಿಯಿಂದ ದಿಗ್ಭ್ರಾಂತನಾಗಿರುವೆ. ಬಹಳಷ್ಟು ಮಾಧ್ಯಮಗಳು ಇದನ್ನೇ ಸತ್ಯವೆಂದು ಪುನರುಚ್ಚರಿಸುತ್ತಿರುವುದು ಮತ್ತೂ ಹೀನಾಯಕರ.

ಅವಿನಾಶ್ ಚಿಕ್ಕೆ, ಪೈಲಟ್, 'ಎಕ್ಸ್'ನಿಂದ

ಕಿಡಿನುಡಿ



ಏನು ಕಡಿದು ಕಟ್ಟೆ ಹಾಕಿದ್ದಾರೆಂದು ಸಾಧನಾ ಸಮಾವೇಶ ಮಾಡುತ್ತಿದ್ದಾರೆ? ಮುಡಾ ಹಗರಣದ ಸಂದರ್ಭದಲ್ಲೂ ಮೈಸೂರಿನಲ್ಲಿ ಸಮಾವೇಶ ಮಾಡಿದ್ದರು. ಮುಖ್ಯಮಂತ್ರಿ ಕುರ್ಚಿಗೆ ಕಂಟಕ ಬಂದಾಗಲೆಲ್ಲಾ ಸಿದ್ದರಾಮಯ್ಯಗೆ 'ಅಹಿಂದ' ಸಮುದಾಯದವರು ನೆನಪಾಗುತ್ತಾರೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಬುಧವಾರ, 19-7-2000

• 800 ಕೋಟಿ ವೆಚ್ಚದಲ್ಲಿ ಎಚ್‌ಎಂಟಿ ಪುನರ್‌ರಚನೆ

ನವದೆಹಲಿ, ಜುಲೈ 18– ಸುಮಾರು ರೂ. 800 ಕೋಟಿ ಅಂದಾಜು ವೆಚ್ಚದಲ್ಲಿ ಎಚ್‌ಎಂಟಿ ಕಾರ್ಖಾನೆಯ ಪುನರ್‌ರಚನೆಗೆ ಕೇಂದ್ರ ಸರ್ಕಾರ ನಿರ್ಧರಿಸಿದೆ.

ನಷ್ಟದಲ್ಲಿರುವ ಎಚ್‌ಎಂಟಿಯ ಕಾಯಕಲ್ಪದ ಬಗ್ಗೆ ಅಧ್ಯಯನ ನಡೆಸಲು ಸರ್ಕಾರ ರಚಿಸಿದ್ದ ಸಚಿವರ ತಂಡ ಇತ್ತೀಚೆಗೆ ನೀಡಿದ ಶಿಫಾರಸುಗಳನ್ನು ಇಂದು ಸಚಿವ ಸಂಪುಟ ಅಂಗೀಕರಿಸಿದೆ ಎಂದು, ತಂಡದ ಸದಸ್ಯರಲ್ಲೊಬ್ಬರಾದ ಕೇಂದ್ರ ಸಂಸ್ಕೃತಿ ಸಚಿವ ಅನಂತಕುಮಾರ್ ಇಂದು 'ಪ್ರಜಾವಾಣಿ'ಗೆ ತಿಳಿಸಿದರು.

• ಪೌರ ಕಾರ್ಮಿಕರ ಮುಷ್ಕರ ಅಂತ್ಯ

ಬೆಂಗಳೂರು, ಜುಲೈ 18– ಕಳೆದ 18 ದಿನಗಳಿಂದ ರಾಜ್ಯದಾದ್ಯಂತ ಮುಷ್ಕರ ನಡೆಸುತ್ತಿರುವ ಪೌರ ಕಾರ್ಮಿಕರು ನಗರಾಭಿವೃದ್ಧಿ ಸಚಿವರ ಸಮ್ಮುಖದಲ್ಲಿ ಇಂದು ಆದ ಒಪ್ಪಂದಕ್ಕೆ ಅನುಸಾರವಾಗಿ ನಾಳೆಯಿಂದ ತಮ್ಮ ಮುಷ್ಕರವನ್ನು ವಾಪಸ್ ತೆಗೆದುಕೊಂಡು ಕೆಲಸಕ್ಕೆ ಹಾಜರಾಗಲು ನಿರ್ಧರಿಸಿದ್ದಾರೆ.

ಸಚಿವರಾದ ಬಿ.ಬಿ. ಚಿಮ್ಮನಕಟ್ಟಿ ಮತ್ತು ಮಲ್ಲಿಕಾರ್ಜುನ ನಾಗಪ್ಪ ಅವರು ತಮ್ಮ ಅಧಿಕಾರಿಗಳೊಂದಿಗೆ ರಾಜ್ಯ ಪೌರಸೇವಾ ನೌಕರರ ಸಂಘದ ಪ್ರತಿನಿಧಿಗಳ ಜೊತೆಗೆ ಮಾತುಕತೆ ನಡೆಸಿದರು.

75 ವರ್ಷಗಳ ಹಿಂದೆ

ಬುಧವಾರ, 19-7-1950

• ಸಾಧುಗಳಿಗೂ ಪೊಲೀಸರಿಗೂ ಹೊಡೆದಾಟ; 17 ಮಂದಿಗೆ ಗಾಯ

ಪುರಿ, ಜುಲೈ 18– ರಥೋತ್ಸವಕ್ಕೆ ಬಂದಿದ್ದ ಅನೇಕ ಸಾಧುಗಳಿಗೂ ಪೊಲೀಸರಿಗೂ ಹೊಡೆದಾಟವಾಗಿ ಒಟ್ಟು 17 ಮಂದಿಗೆ ಪೆಟ್ಟು ಬಿತ್ತು. ಇಬ್ಬರು ಪೊಲೀಸರಿಗೆ ತೀವ್ರ ಗಾಯಗಳಾಗಿವೆ. ಘರ್ಷಣೆಯ ನಂತರ ಅನೇಕ ಸಾಧುಗಳನ್ನು ಪೊಲೀಸರು ಬಂಧಿಸಿದರು.

ಮೊದಲ ಮೂರು ರಥಗಳು ತಮ್ಮ ಗುರಿಯನ್ನು ಮುಟ್ಟಿದಾಗ ಸಾಧುವೊಬ್ಬರು ಹೇಳದೇ ಕೇಳದೇ ರಥ ಹತ್ತಿದರೆಂದು, ಆಗ ಕಾವಲಿದ್ದ ಪೊಲೀಸರು ಅವರನ್ನು ಹಿಡಿದೆಳೆದರೆಂದು ಹೊಡೆದಾಟ ಸಂಭವಿಸಿತೆಂದು ವರದಿ.

ಇಳಿಸಲ್ಪಟ್ಟ ಸಾಧು ಹತ್ತಿರದಲ್ಲಿ ಸಾಧುಗಳು ಬೀಡುಬಿಟ್ಟಿದ್ದ ಪಕ್ಕದ ತೋಟಕ್ಕೆ ಓಡಿದ್ದರು. ಒಡನೆ ಸಾಧುಗಳೆಲ್ಲ ನುಗ್ಗಿ ಬಂದು ಪೊಲೀಸರನ್ನು ಮುತ್ತಿ, ಕಮಂಡಲಗಳಿಂದಲೂ ಚೆಂಬುಗಳಿಂದಲೂ ಹೊಡೆಯತೊಡಗಿದರು. ಪೊಲೀಸರ ಬಳಿ ದೊಣ್ಣೆಗಳಿರಲಿಲ್ಲ.

ಕಾವೇರಿ ಆರತಿ ಮತ್ತು ಮಾಲಿನ್ಯ



ವಿಶ್ಲೇಷಣೆ

ಅ.ನ. ಯಲ್ಲಪ್ಪ ರೆಡ್ಡಿ

ಉತ್ತರ ಭಾರತದಲ್ಲಿ ಗಂಗಾ ನದಿಗೆ ನಡೆಯುವ 'ಗಂಗಾರತಿ'ಯ ರೂಪದಲ್ಲಿ ದಕ್ಷಿಣ ಭಾರತದ ಪ್ರಮುಖ ನದಿಗಳಲ್ಲೊಂದಾದ ಕಾವೇರಿಗೆ ಆರತಿಯನ್ನು ನಡೆಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಆರತಿ ಮೂಲಕ ಕಾವೇರಿಯ ಹಿರಿಮೆಯನ್ನು ಸಂಭ್ರಮಿಸುವುದು ಹಾಗೂ ಪ್ರವಾಸಿಗರನ್ನು ಸೆಳೆಯುವುದು ಸರ್ಕಾರದ ಉದ್ದೇಶವಾಗಿದೆ.

ಗಂಗಾರತಿಯು ಬಹುಸಂಖ್ಯಾತರನ್ನು ಆಕರ್ಷಿಸುವ ಧಾರ್ಮಿಕ ಆಚರಣೆಯಾಗಿದೆ. ಅಂಥದೊಂದು ಆಚರಣೆಯನ್ನು ಕಾವೇರಿ ಆರತಿ ಮೂಲಕ ಕರ್ನಾಟಕದಲ್ಲಿ ಆರಂಭಿಸಿ, ಅದರಿಂದ ಪಡೆಯಬಹುದಾದ ಲಾಭಗಳ ರಾಜಕೀಯ ಲೆಕ್ಕಾಚಾರವೂ ಕಾವೇರಿ ಆರತಿಯ ಹಿಂದೆ ಇರಬಹುದು. ಇದರ ಹಿಂದೆ ರಾಜಕಾರಣ, ಧಾರ್ಮಿಕ ಅಥವಾ ವ್ಯಾಪಾರಿ ಉದ್ದೇಶಗಳನ್ನು ಕಾಣಬಹುದೇ ಹೊರತು, ನದಿಯ ಹಿತಾಸಕ್ತಿಗೆ ಪೂರಕವಾದ ಯಾವ ಸಂಗತಿಯನ್ನೂ ಕಾಣುವುದಕ್ಕೆ ಸಾಧ್ಯವಿಲ್ಲ.

ಸರ್ಕಾರದ 'ಕಾವೇರಿ ಆರತಿ' ಯೋಜನೆ, 'ಹೊರಗೆ ಸಿಂಗಾರ, ಒಳಗೆ ಗೋಣಿ ಸೊಪ್ಪು' ಎನ್ನುವ ಗಾದೆಯನ್ನು ನೆನಪಿಸುವಂತಿದೆ. ತಂಬಾಕು ಘಾಟಿನಿಂದ ಉಸಿರು ಕಟ್ಟುತ್ತಿರುವ ಕಾವೇರಿ ನದಿಯ ಆರೋಗ್ಯದ ಬಗ್ಗೆ ಸರ್ಕಾರಕ್ಕೆ ಯಾವುದೇ ಚಿಂತೆ ಇದ್ದಂತಿಲ್ಲ. ಕಲುಷಿತಗೊಂಡಿರುವ ನದಿಯನ್ನು ಸ್ವಚ್ಛಗೊಳಿಸುವ ಬದಲು, ಆರತಿಯ ಬಡಾಯಿಗೆ ಸರ್ಕಾರ ಮುಂದಾಗಿದೆ.

ಕಾವೇರಿ ನದಿ ಪಾತ್ರದ ತಾಲ್ಲೂಕುಗಳಾದ ಪಿರಿಯಾಪಟ್ಟಣ, ಹುಣಸೂರು, ಎಚ್‌.ಡಿ. ಕೋಟೆ ಹಾಗೂ ಪಕ್ಕದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ತಂಬಾಕು ಕೃಷಿ ನಡೆಯುತ್ತಿದೆ. ತಂಬಾಕು ಆ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಏಕಬೆಳೆಯ ರೂಪದಲ್ಲಿ ದಶಕಗಳಿಂದ ಬೆಳೆಯಲಾಗುತ್ತಿದೆ. ಕಾವೇರಿ ನದಿಯ ನೀರೇ ಈ ಬೆಳೆಗೆ ಬಳಕೆಯಾಗುತ್ತದೆ. ಇಲ್ಲಿ ಬೆಳೆಯುವ ತಂಬಾಕನ್ನು ಸಿಗರೇಟ್ ಕಂಪನಿಗಳು ನೇರವಾಗಿ ಖರೀದಿ ಮಾಡುತ್ತವೆ. ಹುಣಸೂರಿನಲ್ಲಿರುವ 'ತಂಬಾಕು ಸಂಶೋಧನಾ ಸಂಸ್ಥೆ'ಯ ವಿಜ್ಞಾನಿಗಳು, ತಂಬಾಕು ಖರೀದಿ ಮಾಡುವ ಸಿಗರೇಟ್ ಕಂಪನಿಗಳ ಆಗ್ರಹದ ಮೇರೆಗೆ, ಬಗೆ ಬಗೆಯ ಕೀಟನಾಶಕಗಳನ್ನು ರೈತರಿಗೆ ಪೂರೈಕೆ ಮಾಡುತ್ತಾರೆ. ಕೀಟನಾಶಕಗಳ ಬಳಕೆಯಿಂದ ದೊಡ್ಡ ತಂಬಾಕು ಎಲೆಗಳನ್ನು ಪಡೆದು, ಗುಣಮಟ್ಟದ ಸಿಗರೇಟ್ ತಯಾರಿಕೆ ಸಾಧ್ಯವಾಗುತ್ತದೆ ಎಂಬುದು ಸಿಗರೇಟ್ ಕಂಪನಿಗಳ ಲೆಕ್ಕಾಚಾರ.

ಗುಣಮಟ್ಟದ ತಂಬಾಕು ಎಲೆಗಳ ಆಸೆಗೆ ನೀರಿನಂತೆಯೇ ಔಷಧಗಳನ್ನು ಮಣ್ಣಿಗೆ ಸೇರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ಕೀಟನಾಶಕಗಳಲ್ಲಿ ಇರುವ ವಿಷ ಮತ್ತು ತಂಬಾಕಿನಲ್ಲಿರುವ ನಿಕೋಟಿನ್ ಅಂಶ ಹೇರಳ ಪ್ರಮಾಣದಲ್ಲಿ ಮಣ್ಣು, ಗಾಳಿ ಮತ್ತು ನೀರನ್ನು ಸೇರುತ್ತದೆ. ಈ ವಿಷ ಸೇರ್ಪಡೆ ನದಿಯ ಹರಿವಿನುದ್ದಕ್ಕೂ ನಡೆಯುತ್ತದೆ. ತ್ಯಾಜ್ಯಗಳು ಸೇರುವ ಮೂಲಕ ಕಾವೇರಿ ನದಿಯ ಆರೋಗ್ಯ ತೀವ್ರವಾಗಿ ಹದಗೆಟ್ಟಿದೆ. ಔಷಧ ಸಿಂಪಡಣೆ ಸಂದರ್ಭದಲ್ಲಿ ರೈತರ ದೇಹವನ್ನೂ ವಿಷಕಾರಿ ಅಂಶಗಳು ಸೇರುವ ಸಾಧ್ಯತೆ ಇದ್ದೇ ಇದೆ.

ಹುಣಸೂರು ಅರಣ್ಯ ವಿಭಾಗದಲ್ಲಿ ನಾನು ದೀರ್ಘ ಕಾಲ ಕೆಲಸ ಮಾಡಿರುವೆ. ಹಾಗಾಗಿ, ಆ ಭಾಗದ ಪರಿಚಯ ನನಗೆ ಚೆನ್ನಾಗಿದೆ. ಹುಣಸೂರು, ಹೆಗ್ಗಡದೇವನಕೋಟೆ, ಪಿರಿಯಾಪಟ್ಟಣ, ಇವೆಲ್ಲವೂ ಕಾವೇರಿ ಮತ್ತು ಕಬಿನಿ ನದಿಯ ಜಲಾನಯನ ಪ್ರದೇಶಗಳು. ಈ ನದಿಗಳಿಗೆ ನೀರು ಹರಿದು ಹೋಗುವುದು ಪ್ರಮುಖವಾಗಿ ಈ ಭಾಗದಿಂದಲೇ. ನಾನು ಗಮನಿಸಿದಂತೆ, ಜಲಾನಯನ ಪ್ರದೇಶಗಳ ಪಕ್ಕದಲ್ಲೇ ಹುಲಿ ಮತ್ತು ಆನೆಗಳ ಆವಾಸ ಸ್ಥಾನಗಳಿವೆ. ಹೀಗೆ, ಸಮೃದ್ಧ ಹಸಿರು ಮತ್ತು ಜೀವವೈವಿಧ್ಯದಿಂದ ಕೂಡಿರುವ ಪರಿಸರವನ್ನು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ವಿಷಮಯ ಮಾಡಲಾಗುತ್ತಿದೆ.

ಕೀಟನಾಶಕಗಳ ವಿಷ ನೇರವಾಗಿ ಕೃಷಿ ಭೂಮಿಯನ್ನು ಸೇರುವುದರಿಂದ ಆಗುವ ಅನಾಹುತಗಳು ಒಂದೆರಡಲ್ಲ. ರಾಸಾಯನಿಕಗಳು ಮಣ್ಣಿನ ಹ್ಯೂಮಸ್‌ನಲ್ಲಿ ಸೇರ್ಪಡೆಯಾಗುತ್ತವೆ. ಅದರಿಂದಾಗಿ, ಎರೆಹುಳುಗಳು ಸೇರಿದಂತೆ ಮಣ್ಣಿನಲ್ಲಿ ಇರುವ ಅಸಂಖ್ಯ ಜೀವರಾಶಿ ನಶಿಸಿಹೋಗುತ್ತದೆ. ಎರೆಹುಳುಗಳು ಇಲ್ಲದೆ ಹೋದರೆ, ಮಣ್ಣು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ.

ಕಾವೇರಿ ನದಿಯ ನೀರನ್ನು ಕರ್ನಾಟಕ, ತಮಿಳುನಾಡು ಭಾಗದ ರೈತರು ಕೃಷಿಗೆ ಬಳಸುವುದರ ಜೊತೆಗೆ ನಿತ್ಯದ ಬಳಕೆಗೂ ಉಪಯೋಗಿಸುತ್ತಾರೆ. ಬೆಂಗಳೂರು ಮಹಾನಗರ ಸೇರಿದಂತೆ ರಾಜ್ಯದ ಹಲವು ಪಟ್ಟಣ– ಗ್ರಾಮಗಳ ಜನರು ಕಾವೇರಿ ನೀರನ್ನು ಕುಡಿಯುವುದಕ್ಕೆ ಬಳಸುತ್ತಾರೆ. ವಿಷತ್ಯಾಜ್ಯಗಳು ಸೇರಿದ ನೀರನ್ನು ಕುಡಿಯುವ ಜನರ ಆರೋಗ್ಯದ ಮೇಲೆ ಏನೆಲ್ಲಾ ಪರಿಣಾಮಗಳು ಆಗಬಹುದು? ಕಳವಳದ ಸಂಗತಿಯೆಂದರೆ, ಕಲುಷಿತ ನೀರಿನ ಸೇವನೆಯಿಂದ ಆಗುವ ಅಡ್ಡ ಪರಿಣಾಮಗಳ ಬಗ್ಗೆ ನಮ್ಮಲ್ಲಿ ಗಂಭೀರ ಅಧ್ಯಯನವೇ ನಡೆದಿಲ್ಲ.

ಅರಣ್ಯಾಧಿಕಾರಿಯಾಗಿದ್ದ ನಾನು ಪರಿಸರ ಪ್ರೇಮಿಯೂ ಹೌದು. ಪರಿಸರದ ಆತಂಕಕಾರಿ ಬದಲಾವಣೆಗಳ ಕುರಿತಾಗಿ ಜನರನ್ನು ಎಚ್ಚರಿಸುವುದು ನನ್ನ ನೈತಿಕ ಹೊಣೆಗಾರಿಕೆ ಎಂದು ಭಾವಿಸಿರುವೆ. ಆದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ಆಗುತ್ತಿರುವ ಮಾಲಿನ್ಯ ಮತ್ತು ಅದರಿಂದ ಪರಿಸರ ಹಾಗೂ ಜನರ ಆರೋಗ್ಯ ಕೆಡುತ್ತಿರುವುದನ್ನು ಸರ್ಕಾರಿ ಕರ್ತವ್ಯದಲ್ಲಿದ್ದಾಗ ಗುರುತಿಸಲು ನನಗೆ ಸಾಧ್ಯವಾಗಲಿಲ್ಲ. ಆ ಅಪರಾಧೀಭಾವ ಈಗಲೂ ನನ್ನನ್ನು ಕಾಡುತ್ತಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಆಗುತ್ತಿರುವ ಮಾಲಿನ್ಯದ ಬಗ್ಗೆ ಇತ್ತೀಚೆಗೆ ಮಾಧ್ಯಮ ವರದಿಯೊಂದನ್ನು ಗಮನಿಸಿದ ನಂತರವಷ್ಟೇ ನಿಜಸ್ಥಿತಿ ನನ್ನ ಅರಿವಿಗೆ ಬಂತು. ವಸ್ತುಸ್ಥಿತಿಯ ಬೆನ್ನತ್ತಿ ಹೋದಾಗ, ರಾಸಾಯನಿಕಗಳ ಶೇಷಾಂಶ ಪರಿಸರದಲ್ಲಿ ಸೇರಿಕೊಂಡು ಜನಜೀವನಕ್ಕೆ ಹೇಗೆ ಮಾರಕವಾಗುತ್ತದೆ ಎನ್ನುವುದನ್ನು ತಿಳಿದು ಗಾಬರಿಯಾಯಿತು.

> 'ಕಾವೇರಿ ಆರತಿ' ಮೂಲಕ ಉತ್ತರ ಭಾರತದ ಧಾರ್ಮಿಕ ಆಚರಣೆಯನ್ನು ದಕ್ಷಿಣ ಭಾರತದಲ್ಲಿ ಆರಂಭಿಸಲು ಸರ್ಕಾರ ಚಿಂತಿಸುತ್ತಿದೆ. ಆರತಿ ಮಾಡಲು ಹೊರಟವರು, ನದಿಯ ಆರೋಗ್ಯ ಹೇಗಿದೆ ಎಂಬ ಬಗ್ಗೆ ಚಿಂತಿಸಿದಂತಿಲ್ಲ. ಕನ್ನಡ ನಾಡಿನ ಜೀವನದಿಯ ಒಡಲಿಗೆ, ತಂಬಾಕು ಕೃಷಿಯಲ್ಲಿ ಬಳಕೆಯಾಗುತ್ತಿರುವ ಕೀಟನಾಶಕಗಳ ವಿಷ ಸೇರುತ್ತಿದೆ.

ನಿಕೋಟಿನ್‌ನಲ್ಲಿ ಇರುವ ರಾಸಾಯನಿಕ ಅಂಶಕ್ಕೆ ಮೂಲತಃ ಬಣ್ಣವಿರುವುದಿಲ್ಲ. ನಿಧಾನವಾಗಿ, ಅದು ಹಳದಿ ಬಣ್ಣಕ್ಕೆ ತಿರುಗಿ ಜಿಡ್ಡಿನಂತಹ ದ್ರವರೂಪಕ್ಕೆ ಪರಿವರ್ತನೆಗೊಳ್ಳುತ್ತದೆ. ಸಿಗರೇಟಿನಲ್ಲಿರುವ ಸಕ್ರಿಯ ರಾಸಾಯನಿಕ ನಿಕೋಟಿನ್ ಆಗಿದೆ. ಸಿಗರೇಟ್ ರೂಪದಲ್ಲಿ ತಂಬಾಕು ಸೇವಿಸುವುದರಿಂದಾಗಿ, ನಿಕೋಟಿನ್ ಜಿಡ್ಡು ದ್ರವ ಮೊದಲಿಗೆ ಸಣ್ಣ ಪ್ರಮಾಣದಲ್ಲಿ ದೇಹವನ್ನು ಸೇರಿಕೊಂಡು, ಅಲ್ಲಿ ತನ್ನ ವಸಾಹತು ಸ್ಥಾಪಿಸುತ್ತದೆ. ನಂತರದಲ್ಲಿ ಅದು, ಸ್ವನಿಯಂತ್ರಿತ ನರಮಂಡಲ ಮತ್ತು ಅಸ್ಥಿಮಜ್ಜೆಯನ್ನು ದುರ್ಬಲಗೊಳಿಸುವ ಕೆಲಸವನ್ನು ನಿರಂತರವಾಗಿ ಹಾಗೂ ವ್ಯವಸ್ಥಿತವಾಗಿ ಮಾಡುತ್ತದೆ.

ರೈತರು ಒಂದು ಕೆ.ಜಿ. ತಂಬಾಕು ಸಂಸ್ಕರಣೆ ಮಾಡುವುದಕ್ಕೆ ಆರರಿಂದ ಎಂಟು ಕೆ.ಜಿ. ಸೌದೆ ಬಳಸುತ್ತಾರೆ. ಈ ಪ್ರಕ್ರಿಯೆಯಲ್ಲಿ, ವಿಶೇಷವಾಗಿ ರೂಪಿತವಾಗಿರುವ ಚಿಮಣಿಯ ಮೂಲಕ ಹೊಗೆ ಹೊರಗೆ ಹೋಗುತ್ತದೆ. (ನಾನು ಡಿ.ಸಿ.ಎಫ್. ಆಗಿದ್ದಾಗ ಇದ್ದಿಲು ಮತ್ತು ಗ್ಯಾಸ್ ಬಳಕೆ ಬಗ್ಗೆ ಚಿಂತನೆ ಮಾಡುವಂತೆ ಸರ್ಕಾರಕ್ಕೆ ಒಂದು ವರದಿ ಸಲ್ಲಿಸಿದ್ದೆ).

ಅನೇಕ ವರ್ಷಗಳಿಂದ ತಂಬಾಕು ಸಂಸ್ಕರಣೆಗೆ ಸೌದೆ ಬಳಕೆಯಾಗುತ್ತಿದೆ ಮತ್ತು ಅದರಿಂದ ಕಾಡು ನಾಶವಾಗುತ್ತಲೇ ಇದೆ. ಕಟಾವಿನ ನಂತರ ತಂಬಾಕು ಎಲೆಗಳನ್ನು ಆದಷ್ಟು ಬೇಗ ಸಂಸ್ಕರಣೆಗೆ ಒಳಪಡಿಸಬೇಕು. ಇಲ್ಲವಾದಲ್ಲಿ ತಂಬಾಕಿನ ಗುಣಮಟ್ಟ ಹಾಳಾಗುತ್ತದೆ ಮತ್ತು ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಸಿಗುವುದಿಲ್ಲ. ತಂಬಾಕು ಬೆಳೆಯುವ ಪ್ರದೇಶದ ಪಕ್ಕದಲ್ಲೇ ಅರಣ್ಯವಿದೆ ಮತ್ತು ಸುಲಭದಲ್ಲಿ ಸೌದೆ ಲಭ್ಯವಾಗುತ್ತದೆ ಎಂಬ ಕಾರಣಕ್ಕೆ, ಸೌದೆಯನ್ನೇ ಇಂಧನವಾಗಿ ಬಳಸಿ ತಂಬಾಕಿನ ಸಂಸ್ಕರಣೆ ನಡೆಯುತ್ತದೆ.

ಹಿಂದೆ ಸೌದೆ ಕಳ್ಳಸಾಗಣೆಯೂ ದೊಡ್ಡ ಪ್ರಮಾಣದಲ್ಲಿ ಆಗುತ್ತಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರ ಗಮನವನ್ನು ಆ ವಿಚಾರದತ್ತ ಸೆಳೆದಾಗ, ಸೌದೆಗಾಗಿ ಕಾಡಿನ ಮರಗಳನ್ನು ಬೇಕಾಬಿಟ್ಟಿ ಕಡಿಯುವುದರ ಬದಲಾಗಿ, ಅರಣ್ಯ ಇಲಾಖೆಯಿಂದಲೇ ಸೌದೆ ಡಿಪೊಗಳನ್ನು ತೆರೆದು ಸಬ್ಸಿಡಿ ದರದಲ್ಲಿ ಸೌದೆ ಒದಗಿಸುವಂತೆ ಅವರು ಸಲಹೆ ಕೊಟ್ಟಿದ್ದರು. ಅದನ್ನು ನಾನು ಜಾರಿಗೆ ತಂದಿದ್ದೆ. ಸೌದೆ ಡಿಪೊಗಳ ಕಾರ್ಯಾಚರಣೆಗೆ ವಿಧಾನಸೌಧ ಮಟ್ಟದ ಹಿರಿಯ ಅಧಿಕಾರಿಗಳು ಮತ್ತು ಅಕೌಂಟೆಂಟ್ ಜನರಲ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಸೌದೆ ಡಿಪೊ ತೆರೆದಿದ್ದರ ಹಿಂದೆ ಯಾವುದೇ ದುರುದ್ದೇಶ ಇರಲಿಲ್ಲವಾದ್ದರಿಂದ ಅವರ ಆಕ್ಷೇಪಗಳಿಗೆ ಮಾನ್ಯತೆ ಸಿಗಲಿಲ್ಲ.

ಜಾಗತಿಕ ಮಟ್ಟದಲ್ಲಿ ಆರೋಗ್ಯದ ಸಮಸ್ಯೆಗಳನ್ನು ಉಂಟು ಮಾಡುವಲ್ಲಿ ತಂಬಾಕು ಮತ್ತು ಅದರ ಉಪ ಉತ್ಪನ್ನಗಳ ಕೊಡುಗೆ ದೊಡ್ಡದಿದೆ. ಅತ್ಯಧಿಕ ತೆರಿಗೆ ವಿಧಿಸುವ ಮೂಲಕ ತಂಬಾಕು ಬಳಕೆಯನ್ನು ನಿಯಂತ್ರಿಸಬೇಕಾದ ಅನಿವಾರ್ಯತೆ ಇದೆ. ಭಾರತದಲ್ಲಿ ತಂಬಾಕು ಸೇವನೆಯ ಪರಿಣಾಮದಿಂದ ಪ್ರತಿನಿತ್ಯ ಕನಿಷ್ಠ 4,000 ಸಾವು ಸಂಭವಿಸುತ್ತಿವೆ ಹಾಗೂ ಭಾರತ ವಿಶ್ವದಲ್ಲೇ ತಂಬಾಕು ಸೇವನೆ ಪ್ರಮಾಣದಲ್ಲಿ ಎರಡನೇ ಸ್ಥಾನದಲ್ಲಿದೆ. ಕೂಲಿಕಾರರು ಕೂಡ ತಂಬಾಕು ಉತ್ಪನ್ನಗಳ ವ್ಯಸನಕ್ಕೆ ಒಳಗಾಗಿದ್ದಾರೆ. ಸಣ್ಣ ಪ್ಲಾಸ್ಟಿಕ್ ಪ್ಯಾಕ್‌ನಲ್ಲಿ ಬರುವ ಅನೇಕ ಬಗೆಯ ತಂಬಾಕು ಉತ್ಪನ್ನಗಳನ್ನು ಸೇವಿಸಿ, ಆ ಪ್ಯಾಕೆಟ್ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಾರೆ. ಇದರಿಂದ ವ್ಯಕ್ತಿಗತವಾಗಿಯೂ ಆರೋಗ್ಯಕ್ಕೆ ಹಾನಿ, ಪರಿಸರದ ಆರೋಗ್ಯಕ್ಕೂ ಹಾನಿ.

ತಂಬಾಕು ಕೃಷಿಯಿಂದಾಗಿ ಕಾವೇರಿ ನದಿಯ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ವೈಜ್ಞಾನಿಕ ಅಧ್ಯಯನಗಳು ನಡೆಯಬೇಕಾಗಿದೆ. ಅಧ್ಯಯನಗಳನ್ನು ನಡೆಸಿ, ಕಾವೇರಿ ನದಿಯನ್ನು ಉಳಿಸಿಕೊಳ್ಳುವುದಕ್ಕೆ ಏನೇನು ಮಾಡಬೇಕು ಎನ್ನುವುದರ ಬಗ್ಗೆ ಚಿಂತಿಸುವುದರ ಬದಲಾಗಿ, ನೂರಾರು ಕೋಟಿ ಖರ್ಚು ಮಾಡಿ ಆರತಿ ಮಾಡುವುದರಿಂದ ನದಿಗೆ ಅಂಟಿರುವ ಮಾಲಿನ್ಯ ಪರಿಹಾರವಾಗುವುದಿಲ್ಲ. 'ಮಂಗಳಾರತಿ ಮಾಡು' ಎನ್ನುವ ಪದವನ್ನು ನಕಾರಾತ್ಮಕವಾಗಿಯೂ ಬಳಸಲಾಗುತ್ತದೆ. ಕಾವೇರಿಗೆ ಆರತಿ ಮಾಡಲು ಹೊರಟಿರುವವರಿಗೆ ನಾಡಿನ ಪ್ರಜ್ಞಾವಂತರೆಲ್ಲ ಮಂಗಳಾರತಿ ಮಾಡಬೇಕಾಗಿದೆ.

ಸರ್ಕಾರ 'ಕಾವೇರಿ ಆರತಿ'ಯ ನಿರ್ಧಾರದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ನದಿಯನ್ನು ಉಳಿಸುವ ಮಾರ್ಗೋಪಾಯಗಳ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ. ಈಗಾಗಲೇ ವ್ಯಾಪಕವಾಗಿರುವ ಪರಿಸರ ಮಾಲಿನ್ಯಕ್ಕೆ ಆರತಿಯೂ ಅಳಿಲು ಕಾಣಿಕೆ ನೀಡುವಂತೆ ಆಗಬಾರದು.

ನಮ್ಮ ಅರಿವಿಗೆ ಬಾರದಂತೆಯೇ ಇಂಗಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ವಾಯುಮಂಡಲಕ್ಕೆ ಸೇರಿಸುತ್ತಿದ್ದೇವೆ. ಇದರಿಂದ ಬಿಸಿಗಾಳಿ ಉತ್ಪನ್ನವಾಗುತ್ತದೆ. ಭೂಮಿಯೂ ಬಿಸಿಯಾಗುತ್ತದೆ. ಮಳೆ ಚಕ್ರದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಜೊತೆಗೆ, ಜನರ ಆರೋಗ್ಯ ಸಮಸ್ಯೆಗಳೂ ಹೆಚ್ಚಾಗುತ್ತವೆ.

ಕ್ಯಾನ್ಸರ್ ಮತ್ತು ಹೃದಯಾಘಾತ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚು ವರದಿಯಾಗುತ್ತಿವೆ. ಮಕ್ಕಳು ಹಾಗೂ ಯುವಜನ ಹೃದಯ ಸಂಬಂಧಿ ಸಮಸ್ಯೆಗಳಿಗೆ ಬಲಿಯಾಗುತ್ತಿದ್ದಾರೆ. ಸಾರ್ವಜನಿಕ ಆರೋಗ್ಯದ ಗುಣಮಟ್ಟ ಕಡಿಮೆಯಾಗುತ್ತಿರುವುದಕ್ಕೆ ಪರಿಸರ ಮಾಲಿನ್ಯವೂ ಒಂದು ಮುಖ್ಯ ಕಾರಣವಾಗಿದೆ ಎನ್ನುವುದನ್ನು ನಾವು ಮರೆಯಬಾರದು. ಜವಾಬ್ದಾರಿಯುತ ಸರ್ಕಾರದ ಆದ್ಯತೆ ಜನ ಹಾಗೂ ಪರಿಸರದ ಆರೋಗ್ಯವನ್ನು ಕಾಪಾಡುವುದೇ ಹೊರತು, ನದಿಗೆ ಆರತಿ ಮಾಡುವುದಲ್ಲ. ಕಾವೇರಿಗೆ ಬೇಕಿರುವುದು ಆರತಿಯಲ್ಲ, ನೈಜ ಪ್ರೀತಿ.

ವಾಚಕರ ವಾಣಿ

'ಭೂಸ್ವಾಧೀನ' ಘೋಷಣೆ ಕೈಬಿಡಿ

ದೇವನಹಳ್ಳಿ ಪ್ರದೇಶದ ಭೂಸ್ವಾಧೀನವು 'ಕೈಗಾರಿಕೆಗಳ ಅಭಿವೃದ್ಧಿ' ಎಂಬ ಘೋಷವಾಕ್ಯವನ್ನು ಮುಂದಿಟ್ಟಿತ್ತು. ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು ನಿಜ. ಆದರೆ, ಯಾವ ಮಟ್ಟದಲ್ಲಿ ಹಾಗೂ ಎಲ್ಲೆಲ್ಲಿ ಎಂಬ ಸ್ಪಷ್ಟ ಚಿತ್ರಣವೂ ಮುಖ್ಯ. ಪರಿಸರದ ದೃಷ್ಟಿಯಿಂದ ಬೆಂಗಳೂರು ಈಗಾಗಲೇ ನಾಶವಾಗಿದೆ. ಜನತೆ ಉಸಿರುಗಟ್ಟಿ ಬದುಕುತ್ತಿದ್ದಾರೆ. ದಶಕಗಳಿಂದ ಇಲ್ಲಿ ಬಾಳಿ ಬದುಕಿದ ಬಹುಪಾಲು ಮಂದಿ ಯಾವುದಕ್ಕೂ ಪ್ರತಿಕ್ರಿಯಿಸಲಾಗದೆ ಮೂಕರಾಗಿದ್ದಾರೆ. ರಿಯಲ್ ಎಸ್ಟೇಟ್‌ನವರ ಕ್ರೂರ ವ್ಯವಹಾರದಿಂದ ಬಹುಪಾಲು ಭೂಮಾಲೀಕರು ಅನಾಥರಾಗಿ ಮೂರನೇ ದರ್ಜೆಯ ಕಾರ್ಮಿಕರಾಗಿದ್ದಾರೆ.

ಒಂದು ಕಾಲದಲ್ಲಿ ಕೃಷಿಯನ್ನೂ ಕೈಗಾರಿಕೆಗಳ ರೀತಿಯಲ್ಲಿಯೇ ಬೆಳೆಸಬೇಕು ಎಂದು ಡಾ. ಸ್ವಾಮಿನಾಥನ್ ಅವರು, ಹೋರಾಟ ಸ್ವರೂಪದ ಚಿಂತನೆ ಮುಂದಿಟ್ಟರು. ಇನ್ನೊಬ್ಬ ಮಹನೀಯ ಡಾ. ಕುರಿಯನ್ ಅವರು ಹೈನುಗಾರಿಕೆಗೆ ಉತ್ತೇಜಿಸಿದರು. ಇದರಿಂದ ಲಕ್ಷಾಂತರ ಕುಟುಂಬಗಳು ಜೀವನ ಸಾಗಿಸುತ್ತಿವೆ. ಈ ಉದ್ದೇಶವನ್ನಿಟ್ಟುಕೊಂಡೇ ಎಂ.ವಿ. ಕೃಷ್ಣಪ್ಪನವರು ಕೇಂದ್ರ ಸಚಿವರಾಗಿದ್ದಾಗ ಬೆಂಗಳೂರು ಡೇರಿಯನ್ನು ಪ್ರಾರಂಭಿಸಿದ್ದು. ಆ ಡೇರಿಯ ಮೂಲಕ ಈಗ ದೊಡ್ಡ ಪ್ರಮಾಣದಲ್ಲಿ ಜನತೆ ಬದುಕು ಕಂಡುಕೊಂಡಿದ್ದಾರೆ. ಎಲ್ಲವನ್ನೂ ರಾಜಕಾರಣಿಗಳು ಮಾಡಲು ಹೋಗಬಾರದು. ನಮ್ಮ ನಡುವೆ ಬಹಳಷ್ಟು ವಿಷಯ ತಜ್ಞರಿದ್ದಾರೆ. ಅವರನ್ನು ಮುಂದಿಟ್ಟುಕೊಂಡು ಆಡಳಿತ ನಡೆಸಬೇಕು. ದಯವಿಟ್ಟು 'ಭೂಸ್ವಾಧೀನ' ಎಂಬ ಘೋಷಣೆಯನ್ನು ಕೈಬಿಡಬೇಕು.

ಶೂದ್ರ ಶ್ರೀನಿವಾಸ್, ಬೆಂಗಳೂರು

ತಿಂಡಿ ತಿನಿಸಿಗೂ ದರ ನಿಗದಿಪಡಿಸಿ

ರಾಜ್ಯ ಸರ್ಕಾರವು ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಟಿಕೆಟ್ ದರವನ್ನು ಗರಿಷ್ಠ ₹200 ನಿಗದಿಪಡಿಸುವುದು ಸ್ವಾಗತಾರ್ಹ. ಖ್ಯಾತ ನಟರ ಚಿತ್ರಗಳು ಬಿಡುಗಡೆಯಾದಾಗ ಟಿಕೆಟ್ ದರ ₹1 ಸಾವಿರ ದಾಟುವುದೂ ಇದೆ. ಮಲ್ಟಿಪ್ಲೆಕ್ಸ್ ಗಳಲ್ಲಿ ಮಾರಾಟ ಮಾಡುವ ತಿಂಡಿ, ತಿನಿಸು ದುಬಾರಿಯಾಗಿವೆ. ಹೊರಗಿನ ಅಂಗಡಿಗಳಲ್ಲಿ ₹30ಕ್ಕೆ ಸಿಗುವ ಪಾಪ್‌ಕಾರ್ನ್‌ಗೆ ಅಲ್ಲಿ ನೂರಾರು ರೂಪಾಯಿ ದರವಿದೆ. ತಿಂಡಿ, ತಿನಿಸಿಗೂ ದರ ನಿಗದಿಪಡಿಸಬೇಕಿದೆ.

ಎಸ್‌.ವಿ. ಗೋಪಾಲ್ ರಾವ್, ಬೆಂಗಳೂರು

ಖಾಸಗಿ ಶಾಲಾಸಂಸ್ಥೆಗಳಿಗೆ ಮಣಿಯದಿರಿ

ಖಾಸಗಿ ಶಾಲಾ ಅನುಮತಿ ನವೀಕರಣ ಪ್ರಕ್ರಿಯೆಯು ಸರಳವಾಗಿರಬೇಕು. ಆರ್‌ಟಿಇ ಮರು ಜಾರಿಗೊಳಿಸಬೇಕು– ಹೀಗೆ ಹಲವು ಬೇಡಿಕೆ ಮುಂದಿಟ್ಟುಕೊಂಡು ಖಾಸಗಿ ಶಾಲಾ ಸಂಸ್ಥೆಗಳು ಪ್ರತಿಭಟನೆ ಮಾಡಿವೆ (ಪ್ರ.ವಾ., ಜುಲೈ 18). ಸರ್ಕಾರ ಇಂತಹ ಪ್ರತಿಭಟನೆಗೆ ಕಿವಿಗೊಟ್ಟರೆ, ಖಾಸಗಿ ಶಾಲೆಗಳು ಬಲಗೊಂಡು ಸರ್ಕಾರಿ ಶಾಲೆಗಳು ದುರ್ಬಲವಾಗುವ ಅಪಾಯವಿದೆ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರು ಬಡವರ ಮಕ್ಕಳು ಮಾತ್ರ. ಖಾಸಗಿ ಶಾಲೆಗಳ ಬೇಡಿಕೆಯಿಂದ ಬಡ ಮಕ್ಕಳಿಗೆ ಅನ್ಯಾಯವಾಗುತ್ತದಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

'ಸ್ವಚ್ಛ ಭಾರತ'ದ ಅರ್ಥವೇನು?

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶಾಲಾ ಕೊಠಡಿಗಳ ಸ್ವಚ್ಛತೆ ಮತ್ತು ಶೌಚಾಲಯ ಶುಚಿಗೊಳಿಸಿದ್ದಾರೆಂಬ ಕಾರಣಕ್ಕೆ ಹಲವು ಶಿಕ್ಷಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಶಿಸ್ತಿನ ಕ್ರಮಕ್ಕೆ ಗುರಿಯಾಗುತ್ತಿದ್ದಾರೆ. ಶಾಲೆಗಳಲ್ಲಿ ಸ್ವಚ್ಛತಾ ಸಿಬ್ಬಂದಿ ಇಲ್ಲ. ವಿದ್ಯಾರ್ಥಿಗಳು ತರಗತಿಯ ಕೋಣೆಗಳನ್ನು ಸ್ವಚ್ಛಗೊಳಿಸಿದರೆ ತಪ್ಪಾಗುತ್ತದೆಯೇ? ನಮ್ಮ ಮನೆಯನ್ನು ನಾವೇ ಶುಚಿಗೊಳಿಸುವುದಿಲ್ಲವೇ? ವಿದ್ಯಾರ್ಥಿಗಳಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸುವುದು ಬೇಡವೇ? ಮಹಾತ್ಮ ಗಾಂಧಿ ಅವರು ಸಾರ್ವಜನಿಕ ಶೌಚಾಲಯಗಳನ್ನು ಶುಚಿಗೊಳಿಸಿದ್ದನ್ನು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಪರೀಕ್ಷೆ ಬರೆಸುವುದಷ್ಟೇ ಶಿಕ್ಷಕರ ಕೆಲಸವೇ? ಹಾಗಾಗಿ, ಸ್ವಚ್ಛ ಭಾರತ ಅಭಿಯಾನದ ಅರ್ಥ – ವ್ಯಾಪ್ತಿ ಕುರಿತು ಇಲಾಖೆಯು ನಿಖರ ಮಾಹಿತಿ ನೀಡಬೇಕು. ಶಾಲೆಗಳಿಗೆ ಸ್ವಚ್ಛತಾ ಸಿಬ್ಬಂದಿ ನೇಮಕಕ್ಕೂ ಕ್ರಮವಹಿಸಬೇಕಿದೆ.

ಶಿವಕುಮಾರ ಬಂಡೋಳಿ, ಯಾದಗಿರಿ

ಹಗುರ ಮಾತು ಶೋಭೆ ತರುವುದಿಲ್ಲ

ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸುವಂತೆ ಕಾಂಗ್ರೆಸ್ ಪಕ್ಷಕ್ಕೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ. ಖರ್ಗೆ ಅವರು 1972ರಲ್ಲೇ ಗುರುಮಿಟಕಲ್ ಕ್ಷೇತ್ರದಿಂದ ಶಾಸಕರಾಗಿ ರಾಜಕೀಯ ಪ್ರವೇಶಿಸಿದರು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತಂತ್ರಗಾರಿಕೆ ಮಾಡಿದ್ದರಿಂದ ಸೋಲುಂಡರು. ಆದರೂ, ಎದೆಗುಂದದೆ ಎಐಸಿಸಿ ಅಧ್ಯಕ್ಷರಾಗಿದ್ದಾರೆ. ಮಾತನಾಡುವ ಭರದಲ್ಲಿ ಹಿರಿಯ ಮುತ್ಸದ್ದಿ ಬಗ್ಗೆ ಹಗುರವಾಗಿ ಮಾತನಾಡುವುದು ವಿಜಯೇಂದ್ರ ಅವರಿಗೆ ಶೋಭೆ ತರುವುದಿಲ್ಲ.

ಸುರೇಶ್, ವಡಗಲಪುರ

ಪಿಂಚಣಿದಾರರ ಬಗ್ಗೆ ಅವಜ್ಞೆ ಏಕೆ?

ರಾಜ್ಯ ಸರ್ಕಾರಿ ನೌಕರರ ವೇತನ ಹಾಗೂ ಪಿಂಚಣಿಯನ್ನು 7ನೇ ವೇತನ ಆಯೋಗದ ಶಿಫಾರಸು ಅನ್ವಯ 2024ರ ಆಗಸ್ಟ್‌ನಿಂದ ಪರಿಷ್ಕರಿಸಲಾಗಿದೆ. ಆದರೆ, 70 ವರ್ಷ ದಾಟಿದ ಪಿಂಚಣಿದಾರರಿಗೆ ಶೇ 10ರಷ್ಟು ಹೆಚ್ಚುವರಿ ವೇತನ ಪಾವತಿಸುವಂತೆ ಮಾಡಿರುವ ಶಿಫಾರಸು ಒಂದು ವರ್ಷವಾಗುತ್ತಾ ಬಂದರೂ ಅನುಷ್ಠಾನಗೊಂಡಿಲ್ಲ. ಹಣದುಬ್ಬರ, ವಯೋಸಹಜ ಅನಾರೋಗ್ಯ ಮತ್ತಿತರ ಕಾರಣಗಳಿಂದ ಈ ವಯೋಮಾನದ ಪಿಂಚಣಿದಾರರು ಎದುರಿಸುತ್ತಿರುವ ಸಂಕಟಗಳು ಹೇಳತೀರದು. ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಶಿಫಾರಸು ಜಾರಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮುಖ್ಯಮಂತ್ರಿ ಅವರು ಸದನಕ್ಕೆ ಉತ್ತರಿಸಿದ್ದರು. ಆದರೆ, 70 ವರ್ಷ ದಾಟಿದ ಪಿಂಚಣಿದಾರರು ಇನ್ನೆಷ್ಟು ದಿನ ಕಾಯಬೇಕು?

ಆರ್‌.ಜಿ. ಬ್ಯಾಕೋಡ, ವಿಜಯಪುರ

ಚುರುಮುರಿ



ಮನೆ ಖಾಲಿ ಇಲ್ಲ!

• ಚಂದ್ರಕಾಂತ ವಡ್ಡು

ತಿಂಗಳೇಶ ಇನ್ನೇನು ಬೈಟು ಬಳಗ ಸೇರಲು ಮನೆಯಿಂದ ಹೊರಡಬೇಕು ಎನ್ನುವಷ್ಟರಲ್ಲಿ ಬಂಡೆಯ್ಯನ ಆಗಮನ. ದುಃಖ ತುಂಬಿದ ಕಣ್ಣುಗಳಿಗೆ ನೀಲಿ ಮಫ್ಲರ್ ಒತ್ತಿಕೊಳ್ಳುತ್ತಾ ಮೌನವಾಗಿ ಕುಳಿತ.

'ಏನು ವಿಷಯ... ಮನೆ ಮೇಲೆ ಗುಡ್ಡ ಕುಸಿದವನ ಥರ ಇದ್ದೀಯಾ?' ತಿಂಗಳೇಶನೇ ಮಾತಿಗಿಳಿದ.

'ಗುಡ್ಡ ಬಿದ್ದರೆ ಹೇಗೋ ಅಜ್ಜಯ್ಯನನ್ನು ನೆನೆದು ಪಾರಾಗುತ್ತಿದ್ದೆ. ಆದರೆ ದೊಡ್ಡಯ್ಯನನ್ನು ನಂಬಿ ಗಡ್ಡ ಬಿಡುವಂತಾಗಿದೆ' ಎಂದ ಬಂಡೆಯ್ಯ.

'ಸಿದ್ಧಯ್ಯ ಏನಾದ್ರೂ 'ಹಿಂದಮುಂದ' ಮಾಡ್ಯಾನೇನು? ಅಣ್ಣ ತಮ್ಮಂದಿರ ನಡುವೆ ಒಂದು ಮಾತು ಬಂದೀತು, ಹೋದೀತು... ಮರೆತು ಬಿಡಬೇಕಪ್ಪ...'

'ಎರಡು ವರ್ಷದ ಹಿಂದೆ ನೀವೇ ಬೆಂಗಳೂರಿನ ಮನೆಯನ್ನು ನನಗೆ ಪಾಲು ಮಾಡಿಕೊಟ್ಟರಿ. ಆ ಮನೆ ಕಟ್ಟಲು ನಾನು ಸಿಮೆಂಟಿಗೆ, ಕಬ್ಬಿಣಕ್ಕೆ, ಕಟ್ಟಿಗೆಗೆ ಅಂತ ಖರ್ಚು ಮಾಡಿದ್ದಕ್ಕೆ ಲೆಕ್ಕವಿಲ್ಲ. ಮಂಡ್ಯ– ರಾಮನಗರ ಕಡೆಯ ಜನ ನನ್ನ ಮೇಲಿನ ಅಭಿಮಾನದಿಂದ ಹೇಗೆಲ್ಲಾ ಸಹಾಯ ಮಾಡಿದ್ದಾರೆ, ನಾನು ಎಷ್ಟೆಲ್ಲಾ ಕಷ್ಟಪಟ್ಟಿದ್ದೇನೆ ಅನ್ನೋದು ನಿಮಗೆ ಗೊತ್ತೇಯಿದೆ'.

'ಹೌದು ಹೌದು... ಗೃಹಪ್ರವೇಶದ ದಿನ ಅಣ್ತಮ್ಮಂದಿರು ಕಿತ್ತಾಡಿದರೆ ಸರಿ ಕಾಣಲ್ಲ, ಆತ ಎರಡೂವರೆ ವರ್ಷ ಹೊಸಮನೆಯಲ್ಲಿದ್ದು ನಂತರ ಹಳೆಮನೆಗೆ ಹೋಗಲಿ ಅಂತ ಒಪ್ಪಿಸಿದ್ದೆವಲ್ಲಾ...'

'ನೀವು ಅವೊತ್ತು ಒಳಕೋಣೆಯಲ್ಲಿ ಹಾವೇರಿ ಪಂಚಾಯ್ತಿ ಮಾಡಿದ್ದೇ ತಪ್ಪಾಯ್ತು, ಪಡಸಾಲೆಯಲ್ಲಿ ಮಾತುಕತೆ ಆಗಿದ್ದರೆ ಗೃಹಪ್ರವೇಶಕ್ಕೆ ಬಂದ ನೆಂಟರೆಲ್ಲಾ ಸಾಕ್ಷಿ ಹೇಳುತ್ತಿದ್ದರು'.

'ಈಗೇನಂತಾನೆ ಸಿದ್ಧಯ್ಯ...?'

'ಐದು ವರ್ಷ ನಾನೇ ಇರ್ತೀನಿ, ಆಮೇಲೆ ನೋಡೋಣ ಅಂತಾನೆ. ಮಗ ಬೇರೆ 'ಮನೆ ಖಾಲಿ ಇಲ್ಲ' ಅಂತ ಹೊರಗೆ ಬೋರ್ಡ್ ಹಾಕಿದ್ದಾನೆ'.

ಇಂಗು ತಿಂದ ಹೈಕಮಾಂಡಿನಂತಾದ ತಿಂಗಳೇಶ!

ಸಂಗತ

ಚಂದ್ರ ಸ್ಪರ್ಶದ ಆ ನಡುಕ, ಆ ಪುಲಕ...

ಐವತ್ತಾರು ವರ್ಷಗಳ ಹಿಂದೆ ಚಂದ್ರನ ಮೇಲೆ ಮನುಷ್ಯನ ಮೊದಲ ಹೆಜ್ಜೆಗುರುತು ಮೂಡಿದ ಕ್ಷಣ ಈಗಲೂ ಪುಲಕ ಹುಟ್ಟಿಸುವಂತಿದೆ.

• ಶ್ರೀಗುರು

ಭಾನುವಾರವೊಂದರ ಮಧ್ಯಾಹ್ನದ ಇಳಿಹೊತ್ತು. ಗಗನನೌಕೆಯಲ್ಲಿದ್ದ ಇಬ್ಬರು ಗಗನಯಾತ್ರಿಗಳಲ್ಲಿ ಎದೆ ಬಿರಿಯುವಷ್ಟು ಆತಂಕ. ಚಂದ್ರನ ನೆಲದ ಮೇಲೆ ಹೆಜ್ಜೆಯೂರುವ ಪ್ರಪ್ರಥಮ ಪ್ರಯತ್ನ ಇನ್ನೇನು ಕೈಗೂಡಬೇಕು ಎನ್ನುವಷ್ಟರಲ್ಲಿ, ಕೇವಲ 45 ಸೆಕೆಂಡ್‌ಗಳಿಗೆ ಆಗುವಷ್ಟು ಇಂಧನ ಮಾತ್ರ ನೌಕೆಯಲ್ಲಿದೆ ಎಂಬ ಸಂದೇಶ ಭೂಮಿಯ ನಿಯಂತ್ರಣ ಕೇಂದ್ರದಿಂದ ಬಂದಿತ್ತು. ಮುಂದಿದ್ದ ಆಯ್ಕೆಗಳು ಎರಡೇ: ಇಂಧನ ಖಾಲಿಯಾದ ತಕ್ಷಣ ನೌಕೆಯ ಸಮೇತ ಚಂದ್ರನ ನೆಲಕ್ಕೆ ಅಪ್ಪಳಿಸಿ ಬೀಳುವುದು. ಇಲ್ಲವೇ, ಯಾನವನ್ನು ಸ್ಥಗಿತಗೊಳಿಸಿ ಲೂನಾರ್ ಮಾಡ್ಯೂಲ್‌ನ ಇಂಧನವಿರುವ ಇನ್ನೊಂದು ಭಾಗವನ್ನು ಬಳಸಿ, ಭೂಮಿಗೆ ಹಿಂದಿರುಗಿ ಪಯಣಿಸುವ ಕಮಾಂಡ್ ಮಾಡ್ಯೂಲ್‌ಗೆ ಬಂದು ಸೇರಿಕೊಳ್ಳುವುದು.

ಹಲವು ವರ್ಷಗಳ ಪ್ರಯತ್ನದ ಫಲ ಸಿಗುವ ಹೊತ್ತಿನಲ್ಲಿ ಆತಂಕ ಎದುರಾದರೂ, ಗಗನಯಾತ್ರಿಗಳು ಎದೆಗುಂದಲಿಲ್ಲ. ಲೂನಾರ್ ಮಾಡ್ಯೂಲ್‌ನಲ್ಲಿದ್ದ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಜ್ ಆಲ್ಡ್ರಿನ್ ಅಸಾಧಾರಣ ತಾಳ್ಮೆ ಮತ್ತು ಬುದ್ಧಿವಂತಿಕೆಯಿಂದ ವರ್ತಿಸಿದರು. ಅದರ ಫಲವಾಗಿ, ಅಸಾಧಾರಣ ಸಾಧನೆಯೊಂದು ಅವರ ಹೆಸರಿನಲ್ಲಿ ದಾಖಲಾಯಿತು.

1969ರ ಜುಲೈ 16ರ ಮಧ್ಯಾಹ್ನ, ಫ್ಲೋರಿಡಾದ ಉಡ್ಡಯನ ನೆಲೆಯಿಂದ, 111 ಮೀಟರ್ ಎತ್ತರ ಮತ್ತು 3 ಲಕ್ಷ ಕಿಲೋಗ್ರಾಂ ತೂಕದ 'ಸ್ಯಾಟರ್ನ್–5' ರಾಕೆಟ್ ಉಡಾವಣೆಗೊಂಡಿತು. ಅದು, ಚಂದ್ರನ ನೆಲ ತಲುಪಿದ್ದು ನಾಲ್ಕು ದಿನಗಳ ನಂತರ. ಮೂವರು ಗಗನಯಾತ್ರಿಗಳನ್ನು ಹೊತ್ತ ನೌಕೆಯು, ಚಂದ್ರನ ಹಲವು ಕಕ್ಷೆಗಳಲ್ಲಿ ಸಂಚರಿಸಿ, ಜುಲೈ 20ರಂದು 4 ಗಂಟೆ, 17 ನಿಮಿಷ, 40 ಸೆಕೆಂಡಿಗೆ ಚಂದ್ರನ ಮೇಲೆ ಕಾಲೂರಿತ್ತು.



50,000 ಅಡಿ ಎತ್ತರದ ಚಂದ್ರನ ಕಕ್ಷೆಯಿಂದ ಲೂನಾರ್ ಮಾಡ್ಯೂಲ್ ನೌಕೆಯು ಕೆಳಗಿಳಿಯಲು ಪ್ರಾರಂಭಿಸಿದ ಕೆಲವೇ ನಿಮಿಷಗಳಲ್ಲಿ, 'ಓವರ್‌ಲೋಡ್' ಎಂಬ ಸಂದೇಶ ಕಂಪ್ಯೂಟರ್‌ನಲ್ಲಿ ಮೂಡತೊಡಗಿತು. ಆ ಸಂದೇಶ ಆತಂಕ ಮೂಡಿಸಿತಾದರೂ, ಉಡ್ಡಯನ ಕೇಂದ್ರದ ತಜ್ಞರು 'ಸಮಸ್ಯೆ ಇಲ್ಲ, ಮುಂದುವರಿಯಿರಿ' ಎಂದು ಅಭಯ ನೀಡಿದರು. ನೌಕೆಯಲ್ಲಿದ್ದ 30 ಕೆ.ಜಿ ತೂಕದ ಅಪೊಲೊ ಗೈಡೆನ್ಸ್ ಕಂಪ್ಯೂಟರ್, 2 ಕಿಲೋಹರ್ಟ್ಜ್ ರ‍್ಯಾಮ್, 36 ಕಿಲೋಹರ್ಟ್ಜ್ ಸಾಮರ್ಥ್ಯದ ಹಾರ್ಡ್ ಡಿಸ್ಕ್ ಹೊಂದಿತ್ತು.

ಭೂಮಿಯಿಂದ ಹಾರುವಾಗಲೇ ನೌಕೆಯನ್ನು ಎಲ್ಲಿ ಇಳಿಸಬೇಕೆಂದು ತೀರ್ಮಾನಿಸಲಾಗಿತ್ತು. 'ಅಪೊಲೊ–11' ಯಾನಕ್ಕಿಂತ ಮುಂಚೆ ಕೈಗೊಂಡ ಗಗನ ಯಾತ್ರೆಗಳ ಫಲವಾಗಿ ದೊರೆತ ಚಿತ್ರ ಮತ್ತು ಮಾಹಿತಿಗಳನ್ನಾಧರಿಸಿ, ನೌಕೆಯನ್ನು ಸುರಕ್ಷಿತವಾಗಿ ಕೆಳಗಿಳಿಸಲು ಐದು ಜಾಗಗಳನ್ನು 'ನಾಸಾ' ಅಂತಿಮಗೊಳಿಸಿತ್ತು. ಆ ಜಾಗಗಳನ್ನು ಕಂಪ್ಯೂಟರ್ ಬಳಸಿ ಪತ್ತೆ ಹಚ್ಚಬೇಕಿತ್ತು. ಆದರೆ, ಸರಿಯಾದ ಸಮಯದಲ್ಲಿ ಕಂಪ್ಯೂಟರ್ ಕೈಕೊಟ್ಟಿತ್ತು.

ಕಂಪ್ಯೂಟರ್‌ನಿಂದ ಯಾವ ಪ್ರಯೋಜನವೂ ಆಗದು ಎಂದು ನಿರ್ಧರಿಸಿದ ನೀಲ್ ಆರ್ಮ್‌ಸ್ಟ್ರಾಂಗ್, 300 ಅಡಿ ಎತ್ತರದಲ್ಲಿ ಸಮಾನಾಂತರವಾಗಿ ನೌಕೆಯನ್ನು ಹಾರಿಸಿ, ಸ್ವಲ್ಪ ಸಮತಟ್ಟಾಗಿದೆ ಎನ್ನಬಹುದಾದ ಜಾಗವನ್ನು ಕಣ್ಣಳತೆಯಿಂದಲೇ ನಿರ್ಧರಿಸಿ, ಅಲ್ಲಿ ನೌಕೆಯನ್ನು ಇಳಿಸಿದರು. ಮೊದಲು ನಿರ್ಧರಿಸಿದ ಜಾಗಕ್ಕಿಂತ 6 ಕಿ.ಮೀ ದೂರವಿದ್ದ ಆ ಜಾಗವನ್ನು 'ಸೀ ಆಫ್ ಟ್ರಾನ್ಕ್ವಲಿಟಿ' (ಶಾಂತ ಸಮುದ್ರ) ಎಂದು ಕರೆದರು. ಅದಕ್ಕೂ ಮುಂಚೆ ಚಂದ್ರನ ಮೇಲ್ಮೈ ಸ್ಪಷ್ಟವಾಗಿ ಗೋಚರಿಸುತ್ತಿದ್ದಂತೆ ನೀಲ್ ಎದೆ ಝಲ್ ಎಂದಿತ್ತು. ಎತ್ತ ನೋಡಿದರೂ ಆಳದ ಕುಳಿಗಳು, ಎತ್ತರದ ಬಂಡೆಗಳು!

ಚಂದ್ರನ ನೆಲದ ಮೇಲೆ ಇಳಿದಾಕ್ಷಣ ನೀಲ್ ನೌಕೆಯಿಂದ ಹೊರಬರಲಿಲ್ಲ. ನೌಕೆ ಚಂದ್ರನ ಮೇಲಿಳಿದು ಸುಮಾರು 6 ಗಂಟೆ 38 ನಿಮಿಷದ ನಂತರ, ಅಮೆರಿಕದ ಕಾಲಮಾನ– ಜುಲೈ 20ರ ರಾತ್ರಿ 10 ಗಂಟೆ, 56 ನಿಮಿಷ, 15 ಸೆಕೆಂಡಿಗೆ (ಭಾರತೀಯ ಕಾಲಮಾನ ಜುಲೈ 21ರ ಬೆಳಿಗ್ಗೆ 8.26) ನೌಕೆಯ ಮುಚ್ಚಳ ತೆರೆದು, ಏಣಿಯ ಮೂಲಕ ಕೆಳಗಿಳಿದರು; ಚಂದ್ರನ ಮೇಲೆ ಮೊದಲ ಹೆಜ್ಜೆ ಇರಿಸಿದರು. ಅಲ್ಲಿಗೆ ಮಾನವ ಅಭ್ಯುದಯದ ಚಾರಿತ್ರಿಕ ಘಟನೆಯೊಂದು ಸಾಕಾರಗೊಂಡಿತ್ತು.

ಜಗತ್ತಿನಾದ್ಯಂತ ಕೋಟ್ಯಂತರ ಜನ ಟೆಲಿವಿಷನ್ ಮೂಲಕ ನೀಲ್ ಚಂದ್ರನ ಮೇಲೆ ಇಡುವ ಹೆಜ್ಜೆಯನ್ನು ಕಣ್ತುಂಬಿಕೊಂಡರು. ನೀಲ್ ಇಳಿದ 19 ನಿಮಿಷಗಳ ನಂತರ ಬಜ್ ಆಲ್ಡ್ರಿನ್ ನೌಕೆಯಿಂದ ಹೊರಬಂದು ಚಂದ್ರನ ಮೇಲೆ ನಿಂತರು. ಮೈಕಲ್ ಕಾಲಿನ್ಸ್ ನೌಕೆಯಲ್ಲೇ ಉಳಿದುಕೊಂಡಿದ್ದರು.

ಚಂದ್ರನ ನೆಲದ ಮೇಲೆ ಒಟ್ಟು 21 ಗಂಟೆ 36 ನಿಮಿಷಗಳ ಕಾಲ ಕಳೆದ ಅವರು, ಸುಮಾರು ಎರಡೂವರೆ ತಾಸು ನೆಲದ ಮೇಲೆ ಓಡಾಡಿದರು; ಅಲ್ಲಿನ ಕಲ್ಲು– ಮಣ್ಣು ಸಂಗ್ರಹಿಸಿದರು. ನಂತರ ಲೂನಾರ್ ಮಾಡ್ಯೂಲ್‌ನಲ್ಲಿ ಸಂಚರಿಸಿ, ಮೈಕಲ್ ಕಾಲಿನ್ಸ್ ನಡೆಸುತ್ತಿದ್ದ 'ಕೊಲಂಬಿಯಾ ಕಮಾಂಡ್ ಮಾಡ್ಯೂಲ್'ಗೆ ಬಂದು ತಲುಪಿದರು. ಅಲ್ಲಿಂದ ಎರಡು ದಿನ 19 ಗಂಟೆ ಸಂಚರಿಸಿ 1969ರ ಜುಲೈ 24ರಂದು ಸಂಜೆ 4.50ಕ್ಕೆ ಭೂಮಿಗೆ ತಲುಪಿದರು. ತಮ್ಮ ಸಾಧನೆಯನ್ನು ನೀಲ್ ಆರ್ಮ್‌ಸ್ಟ್ರಾಂಗ್ ಬಣ್ಣಿಸಿದ್ದುದು ಹೀಗೆ: 'ಮಾನವನಿಗೆ ಇದೊಂದು ಹೆಜ್ಜೆ; ಮನುಕುಲಕ್ಕೆ ದೈತ್ಯ ಜಿಗಿತ'.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಅಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಅವಕಾಶ ಕೊಡಲ್ಲ’

• ರಾಜೇಶ್ ರೈ ಚಟ್ಲ



ಎಂ.ಬಿ.ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

• ದೇವನಹಳ್ಳಿ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು ಬಿಜೆಪಿ ಸರ್ಕಾರದ ಕಾಲದಲ್ಲಿ. ಆಗ ಕಾಂಗ್ರೆಸ್ ಪಕ್ಷ ಇದನ್ನು ವಿರೋಧಿಸಿತ್ತು. ಈಗ ನೀವು ಕೈಗಾರಿಕೆಗಳಿಗೆ ಭೂಮಿ ಬೇಕು ಎನ್ನುತ್ತೀರಿ. ಯಾಕೆ ಈ ವಿರೋಧಾಭಾಸ?

ಉತ್ತರ: ರಾಜಕಾರಣ ಮತ್ತು ಅಭಿವೃದ್ಧಿ ಎರಡನ್ನೂ ಪರಸ್ಪರ ಬೆರೆಸುವ ಪ್ರವೃತ್ತಿ ಒಳ್ಳೆಯದಲ್ಲ. ಆದರೆ, ನಮ್ಮಲ್ಲಿ ಇಂಥದ್ದಕ್ಕೇ ಹೆಚ್ಚು ಪ್ರಚಾರ ಸಿಗುತ್ತಿದೆ. ನನಗೆ ಗೊತ್ತಿರುವ ಹಾಗೆ ಅಧಿಸೂಚನೆಯನ್ನು ಪಕ್ಷ ಸಂಪೂರ್ಣ ವಿರೋಧಿಸಿರಲಿಲ್ಲ. ಹೀಗೆ ವಿರೋಧ ಮಾಡುತ್ತ ಹೋದರೆ, ಕೊನೆಗೆ ಏನೂ ಆಗುವುದಿಲ್ಲ. ಅಲ್ಲಿ ರೈತರು ಧರಣಿ ಕುಳಿತಿದ್ದಾಗ ಸಿದ್ದರಾಮಯ್ಯನವರು ಹೋಗಿದ್ದು ನಿಜ. ಜೊತೆಗೆ, ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಈ ಭೂಸ್ವಾಧೀನ ವಿಚಾರವನ್ನು ಮರುಪರಿಶೀಲಿಸುವ ಭರವಸೆಯನ್ನೂ ಕೊಟ್ಟಿದ್ದರು. ಸಂಪೂರ್ಣ ರದ್ದುಪಡಿಸಿಯೇ ಬಿಡುತ್ತೇವೆ ಎಂದೇನೂ ಹೇಳಿರಲಿಲ್ಲ. ಇದಕ್ಕೆ ತಕ್ಕಂತೆ ನೀರಾವರಿ, ಕೃಷಿ, ವಸತಿ ಈ ಮೂರು ಅಂಶಗಳನ್ನು ಪರಿಗಣಿಸಿ ಚನ್ನರಾಯಪಟ್ಟಣ, ಮಟ್ಟಬಾರ್ಲು, ಶ್ರೋತ್ರಿಯ ತೆಲ್ಲೋಹಳ್ಳಿಗೆ ಸೇರಿದ 495 ಎಕರೆ ಜಮೀನನ್ನು ನಾವು ಸ್ವಾಧೀನದಿಂದ ಕೈಬಿಟ್ಟೆವು. ಜೊತೆಗೆ, ಚನ್ನರಾಯಪಟ್ಟಣ ಹೋಬಳಿಯಲ್ಲಿ ಇನ್ನು ಮುಂದೆ ಕೈಗಾರಿಕೆಗಳಿಗಾಗಿ ಜಮೀನು ಸ್ವಾಧೀನ ಮಾಡಿಕೊಳ್ಳುವುದಿಲ್ಲ ಎಂದೂ ಹೇಳಿದೆವು. ಸರ್ಕಾರ ಅಂದ ಮೇಲೆ, ಉತ್ತರದಾಯಿತ್ವ ಇರುತ್ತದೆ. ನಾವಿಲ್ಲಿ ಏಮ್ಮುಖವಾಗಿ ಯೋಚಿಸಲು ಸಾಧ್ಯವಿಲ್ಲ. ರೈತರ ಬಗ್ಗೆಯೂ ಯೋಚಿಸಬೇಕು, ಕೈಗಾರಿಕೆಗಳ ಬಗ್ಗೆಯೂ ಯೋಚಿಸಬೇಕು. ಹಾಗೆಂದು, ಕೈಚೆಲ್ಲಿ ಕುಳಿತುಕೊಳ್ಳಲೂ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆ ಸುವರ್ಣ ಮಧ್ಯಮವನ್ನು ಕಂಡುಕೊಳ್ಳಬೇಕಾಗುತ್ತದೆ. ಸರ್ಕಾರ ಅಂದ ಮೇಲೆ, ಸಮಷ್ಟಿ ಹಿತ ನೋಡಬೇಕಾಗುತ್ತದೆ.

• ರೈತರಲ್ಲೇ ಕೆಲವರು 449 ಎಕರೆ ಭೂಮಿ ಕೊಡಲು ಮುಂದೆ ಬಂದರು. ಕೆಲವರು ಭೂಸ್ವಾಧೀನ ಬೇಡವೆಂದರು. ರೈತರ ನಡುವೆ ಸರ್ಕಾರ ಒಡಕು ಮೂಡಿಸಲು ಯತ್ನಿಸಿತ್ತಾ?

ಉ: ಮುಖ್ಯಮಂತ್ರಿ ಸಿದ್ದರಾಮಯ್ಯನವರಾಗಲಿ, ನಾನಾಗಲಿ, ನಾವೆಲ್ಲರೂ ರೈತಾಪಿ ಹಿನ್ನೆಲೆಯಿಂದ ಬಂದಿರುವವರೇ. ರೈತರ ಕಷ್ಟ-ನಷ್ಟಗಳು ಏನೆಂದು ನಮಗೂ ಗೊತ್ತು. ರೈತರ ವಿರುದ್ಧವಾಗಿ ನಾವು ಯಾವತ್ತೂ ಹೋಗಿಲ್ಲ. ಅತ್ಯಾಧುನಿಕ ರಕ್ಷಣೆ ಮತ್ತು ವೈಮಾಂತರಿಕ್ಷ (ಏರೋಸ್ಪೇಸ್) ಪಾರ್ಕ್ ವಿಚಾರದಲ್ಲಿ ಮೊದಲು ಅಧಿಸೂಚನೆ ಹೊರಬಿದ್ದಿದ್ದೇ ಈ 449 ಎಕರೆ ಜಮೀನಿಗೆ. ಅವರು ತಾವಾಗಿಯೇ ಜಮೀನು ಬಿಟ್ಟುಕೊಡಲು ಬಂದರು. ಈ ಮಧ್ಯೆ, ಸರ್ಕಾರ ಅಂತಿಮ ತೀರ್ಮಾನಕ್ಕೆ ಬರಲು ಹತ್ತು ದಿನ ಅವಕಾಶ ಕೇಳಿತ್ತಷ್ಟೆ. ಏಕೆಂದರೆ, ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬಿದ್ದ ಮೇಲೆ ಅದನ್ನು ರದ್ದುಪಡಿಸುವುದು ಸುಲಭವಲ್ಲ. ಅದೊಂದು ಜಟಿಲ ವಿದ್ಯಮಾನ. ಆರೋಪ ಮಾಡುವುದು ಸುಲಭ. ಆದರೆ, ಈ ಬಗ್ಗೆ ಸುಪ್ರೀಂ ಕೋರ್ಟ್ ಏನು ಹೇಳಿದೆ ಎನ್ನುವುದು ಟೀಕಾಕಾರರಿಗೆ ಗೊತ್ತಿಲ್ಲ.

• ರೈತರ ಹೋರಾಟ ದಿಢೀರ್ ಬೇರೆ ಸ್ತರಕ್ಕೆ ಹೋಯಿತು. ರೈತರ ಪರ ಸಾಹಿತಿಗಳು, ಕಲಾವಿದರು, ನಟರು, ಉತ್ತರ ಭಾರತದವರೆಲ್ಲ ಕಾಣಿಸಿಕೊಂಡರು. ಇದನ್ನು ಹೇಗೆ ನೋಡುತ್ತೀರಿ?

ಉ: ಪ್ರಜಾಪ್ರಭುತ್ವ ಅಂದಮೇಲೆ ಎಲ್ಲರಿಗೂ ಹೋರಾಡುವ, ಆಗ್ರಹಿಸುವ, ಪತ್ರ ಬರೆಯುವ ಹಕ್ಕುಗಳಿವೆ. ನಾನೂ ಹೋರಾಟಗಾರನೇ. ಆದರೆ, ದೇವನಹಳ್ಳಿ ಹೋರಾಟದಲ್ಲಿ ಒಂದು ಅಸಂಗತ ಅಂಶವಿತ್ತು. ಅದೇನೆಂದರೆ, ರೈತರ ಕಳವಳಕ್ಕೆ ನಾವು ಸ್ಪಂದಿಸಿ, ಉನ್ನತ ಮಟ್ಟದ ಸಭೆಗಳನ್ನು ಮಾಡಿ, 495 ಎಕರೆಯನ್ನು ಭೂಸ್ವಾಧೀನದಿಂದ ಬಿಟ್ಟ ಮೇಲೆ, ನೀವು ಹೇಳಿದಂತೆ ಆಯಿತು. ಇದರ ಹಿಂದೆ ಸ್ಥಾಪಿತ ಹಿತಾಸಕ್ತಿಗಳಿದ್ದವು. ಆ ಬಗ್ಗೆ ಸಮಯ ಬಂದಾಗ ಮಾತನಾಡುತ್ತೇನೆ. ಕೈಗಾರಿಕಾ ಉದ್ದೇಶಕ್ಕೆ ಭೂಸ್ವಾಧೀನ ನಡೆಯಲೇಬೇಕು. ಹಿಂದೆ ನಮ್ಮಲ್ಲಿ ಐಐಎಸ್‌ಸಿ, ಎಚ್‌ಎಎಲ್, ಬಿಇಎಲ್, ಬಿಎಚ್‌ಇಎಲ್, ಇಸ್ರೊ, ಎಚ್‌ಎಂಟಿ ಎಲ್ಲವೂ ಬಂದಿರುವುದು ಹೀಗೆಯೇ. ಭೂಮಿಯ ಬಳಕೆಯ ಉದ್ದೇಶಗಳ ರೂಪಾಂತರ ಎಲ್ಲ ಕಡೆಗಳಲ್ಲೂ ಆಗುತ್ತಲೇ ಬಂದಿದೆ. ಇಂತಹ ಪ್ರಕ್ರಿಯೆ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಹೀಗೆ ಎಲ್ಲ ಕಡೆಗಳಲ್ಲೂ ನಡೆಯುತ್ತಿದೆ. ಅಮೆರಿಕ-ಯೂರೋಪ್‌ನಲ್ಲೂ ಇದೇ ನಡೆಯುತ್ತಿರುವುದು. ದೇವನಹಳ್ಳಿಯಲ್ಲೇನೋ ಹೋರಾಟ ನಡೆಯಿತು. ತಮಿಳುನಾಡು, ಆಂಧ್ರದಲ್ಲೇಕೆ ಇಂಥ ಹೋರಾಟ ಎಲ್ಲೂ ಕಾಣುತ್ತಿಲ್ಲ? ಇಂತಹ ದ್ವಂದ್ವಗಳ ಬಗ್ಗೆ ಚರ್ಚೆ ಆಗಬೇಕು.

• ಅಲ್ಲಿ ರಾಜಕಾರಣಿಗಳು, ಬಿಲ್ಡರ್‌ಗಳ ಜಮೀನು ಕೂಡ ಇದೆ ಎಂದು ನೀವು ಹೇಳುತ್ತಿದ್ದೀರಿ; ಯಾರದ್ದು?

ಉ: ನಿಜವಾದ ರೈತರೆಷ್ಟಿದ್ದಾರೆ, ಬಿಲ್ಡರ್‌ಗಳು ಎಷ್ಟಿದ್ದಾರೆ ಎಲ್ಲವೂ ನನಗೆ ಗೊತ್ತಿದೆ. ಸಮಯ ಬಂದಾಗ ಎಲ್ಲವನ್ನೂ ಹೇಳುತ್ತೇನೆ.

• ಸರ್ಕಾರದಿಂದ ಜಮೀನು ಬಿಡಿಸಿಕೊಂಡು, ರಿಯಲ್ ಎಸ್ಟೇಟ್ ಕೆಲಸ ಆರಂಭಿಸಿದರೆ ಏನು ಮಾಡುತ್ತೀರಿ?

ಉ: ಒಂದಂತೂ ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲಿ ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಅವಕಾಶವೇ ಇರುವುದಿಲ್ಲ. ಅಂತಹ ಯೋಚನೆ ಇದ್ದವರು ನಿರಾಶರಾಗುವುದು ಖಚಿತ. ಅಂಥವರ ಉದ್ದೇಶ ಫಲಿಸದಂತೆ ನೋಡಿಕೊಳ್ಳುತ್ತೇವೆ.

• ದೇವನಹಳ್ಳಿಯಲ್ಲಿ ಭೂಸ್ವಾಧೀನವನ್ನು ಸಂಪೂರ್ಣ ಕೈಬಿಡುತ್ತೀರಾ?

ಉ: ಹೌದು. ಆದರೆ, ನಾವೊಂದು ಮುಕ್ತ ಅವಕಾಶವನ್ನೂ ಕೊಟ್ಟಿದ್ದೇವೆ. ಅಂದರೆ, ರೈತರು ಸರ್ಕಾರಕ್ಕೆ ಜಮೀನು ಬಿಟ್ಟು ಕೊಡಲು ಸ್ವಯಂ ಮುಂದಾದರೆ ಅಂಥವರ ಜಮೀನು ತೆಗೆದುಕೊಳ್ಳುತ್ತೇವೆ. ಅದರಲ್ಲೇನೂ ತಪ್ಪಿಲ್ಲ. ಅದಕ್ಕೆ 2013ರ ಕಾಯ್ದೆ ಪ್ರಕಾರ ನ್ಯಾಯಬದ್ಧ ಪರಿಹಾರ ಕೊಡುತ್ತೇವೆ. ರೈತರು ಈಗ ಹೆಚ್ಚಿನ ಪರಿಹಾರ ಕೇಳುತ್ತಿದ್ದಾರೆ. ಅದರ ಸಾಧಕಬಾಧಕಗಳನ್ನೂ ಪರಿಶೀಲಿಸುತ್ತೇವೆ. ಕೃಷಿ ಮತ್ತು ಕೈಗಾರಿಕೆ ಒಂದು ರಥದ ಚಕ್ರಗಳ ತರಹ. ಒಂದಿಲ್ಲದೆ ಇನ್ನೊಂದಿಲ್ಲ. ಈಗ ಕೃಷಿ ಉತ್ಪನ್ನಗಳನ್ನು ಆಧರಿಸಿದ ಉದ್ಯಮಗಳೂ ಬರುತ್ತಿವೆ. ಇದರಿಂದ ರೈತರಿಗೆ ಲಾಭವಿದೆ. ಹಾಗೆಯೇ, ಏರೋಸ್ಪೇಸ್ ರೀತಿಯದ್ದೂ ಬರಬೇಕು. ಕರ್ನಾಟಕದಲ್ಲಿ ಕೈಗಾರಿಕಾ ಸಂಸ್ಕೃತಿ ಬೆಳೆದು ಬಂದಿರುವುದೇ ಹೀಗೆ. ಇದರಿಂದಾಗಿಯೇ ನಾವಿಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದೇವೆ. ತೀರಾ ಇದಮಿತ್ಥಂ ಎಂದು ಹೋದರೆ, ಕೇರಳ ಮತ್ತು ಪಶ್ಚಿಮ ಬಂಗಾಳಕ್ಕೆ ಬಂದ ದುರ್ಗತಿಯೇ ನಮಗೂ ಬಂದುಬಿಡುತ್ತದೆ.

• ಈ ಭೂಸ್ವಾಧೀನ ಕೈಬಿಟ್ಟಿದ್ದರಿಂದ ಎಷ್ಟು ಪ್ರಮಾಣದ ಹೂಡಿಕೆ ತಕ್ಷಣಕ್ಕೆ ಕೈತಪ್ಪಿದಂತಾಯಿತು?

ಉ: ನೋಡಿ, ಇಲ್ಲಿ ರೈತರೇ ಸ್ವಯಂಪ್ರೇರಿತರಾಗಿ ಜಮೀನು ಕೊಟ್ಟರೆ ಹಾನಿಯ ಪ್ರಮಾಣ ಕಡಿಮೆ ಆಗಬಹುದು. ಆದರೆ, ಒಟ್ಟಾರೆ ಈ ಜಾಗವನ್ನು ಕೈಗಾರಿಕೋದ್ಯಮಕ್ಕೆ ಕೊಟ್ಟಿದ್ದರೆ ಅಂದಾಜು ₹50 ಸಾವಿರ ಕೋಟಿಯಿಂದ ₹60 ಸಾವಿರ ಕೋಟಿ ಹೂಡಿಕೆ ಬರುತ್ತಿತ್ತು; ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ ಆಗುತ್ತಿತ್ತು.

• ನಿಮ್ಮ ಮುಂದಿನ ಹೆಜ್ಜೆ ಏನು?

ಉ: ನಾವು ಸೀಮಿತ ಆಲೋಚನೆಗಳಿಂದ ಹೊರಬರಬೇಕು. ಇಲ್ಲಿ ಎಲ್ಲದರ ಬಗ್ಗೆಯೂ ಪ್ರಾಮಾಣಿಕವಾದ ಸಂವಾದ ನಡೆಯಬೇಕು. ಕೈಗಾರಿಕೆಗಳು ಬೇಡವೆನ್ನುವ ಸ್ಥಿತಿಯಲ್ಲಿ ನಾವಿದ್ದೇವೇಯೇ? ಖಂಡಿತವಾಗಿಯೂ ಇಲ್ಲ. ಅಂದಮಾತ್ರಕ್ಕೆ, ನನಗೆ ರೈತವಿರೋಧಿ ಎಂದು ಹಣೆಪಟ್ಟಿ ಹಾಕಬಾರದು. ಕೃಷಿ ಮತ್ತು ಕೈಗಾರಿಕೆ ಒಟ್ಟೊಟ್ಟಿಗೆ ಸಾಗಬೇಕು ಎನ್ನುವುದು ನನ್ನ ಕಳಕಳಿ. ಅಭಿವೃದ್ಧಿ ಹಳಿ ತಪ್ಪಬಾರದು, ಅದು ಸ್ಥಗಿತಗೊಳ್ಳಬಾರದು. ಅದು ಪ್ರತಿಗಾಮಿ ನೀತಿಗೆ ದಾರಿ ಮಾಡಿಕೊಡಬಾರದು. ನಮಗೆ ಬರುತ್ತಿರುವ ಎಫ್‌ಡಿಐ, ನಮ್ಮಲ್ಲಿ ನಡೆಯುತ್ತಿರುವ ಆವಿಷ್ಕಾರಗಳು, ಪ್ರಸ್ತಾವನೆಯ ಹಂತದಲ್ಲಿರುವ ಯೋಜನೆಗಳು ಎಲ್ಲವೂ ಮುಂದುವರಿಯಬೇಕು. ಕರ್ನಾಟಕ ಹಿಂದಕ್ಕೆ ಹೋಗಬಾರದು. ಅದು ಎತ್ತರಕ್ಕೆ ಬೆಳೆಯಬೇಕು. ಇದನ್ನು ಸಾಧಿಸಬೇಕೆನ್ನುವುದು ಮುಖ್ಯಮಂತ್ರಿಯವರ, ನನ್ನ ಮತ್ತು ಒಟ್ಟಾರೆ ಸರ್ಕಾರದ ಸಂಕಲ್ಪ. ಅದನ್ನು ಮಾಡುವ ವಿಶ್ವಾಸ ನಮಗಿದೆ.

• ಫಲವತ್ತಾದ ಕೃಷಿ ಭೂಮಿ ಉಳಿಸಿಕೊಂಡು, ಕೃಷಿ ಇಲ್ಲದ ಕಡೆಗಳಲ್ಲಿ ಉದ್ಯಮಗಳಿಗೆ ಭೂಮಿ ಕೊಡಬಹುದಲ್ಲವೇ?

ಉ: ನಿಜ, ಒಂದು ಆದರ್ಶವಾಗಿ ಇದು ಚೆನ್ನಾಗಿದೆ. ಒಂದು ಕೈಗಾರಿಕಾ ಯೋಜನೆ ಅಂದರೆ, ಅದು ಒಂದು ದಿನದಲ್ಲಿ ಬಂದುಬಿಡುವುದಿಲ್ಲ. ಇದೊಂದು ದೀರ್ಘ ಪ್ರಕ್ರಿಯೆ. ಇದಕ್ಕೆ ಏನಿಲ್ಲವೆಂದರೂ ಮೂರ್ನಾಲ್ಕು ವರ್ಷಗಳು ಬೇಕಾಗುತ್ತವೆ. ಹಾಗೆಯೇ, ಎಲ್ಲ ಕಡೆಗಳಲ್ಲೂ ಒಂದೇ ರೀತಿಯ ಉದ್ಯಮಗಳೂ ಹೋಗಲು ಸಾಧ್ಯವಿಲ್ಲ. ಇದರಲ್ಲಿ ಕಾರ್ಯಪರಿಸರ, ಸಂಶೋಧನೆ ಮತ್ತು ಅಭಿವೃದ್ಧಿ, ಉತ್ಪಾದನಾ ವಾತಾವರಣ, ರಫ್ತು ವಹಿವಾಟಿನ ಸೌಲಭ್ಯ, ಹೆದ್ದಾರಿ, ವಿಮಾನ ನಿಲ್ದಾಣ, ಕೌಶಲ ಇರುವ ಮಾನವ ಸಂಪನ್ಮೂಲ, ಜಾಗತಿಕ ವಿದ್ಯಮಾನ, ಹೂಡಿಕೆದಾರರ ಆದ್ಯತೆ, ಉದ್ಯೋಗಸೃಷ್ಟಿ ಎಲ್ಲವೂ ಮುಖ್ಯವಾಗುತ್ತವೆ. ಉದಾಹರಣೆಗೆ, ಇಡೀ ಭಾರತದಲ್ಲೇ ರಕ್ಷಣೆ ಮತ್ತು ವೈಮಾಂತರಿಕ್ಷ ಕ್ಷೇತ್ರ ಚೆನ್ನಾಗಿರುವುದು ನಮ್ಮ ಬೆಂಗಳೂರಿನಲ್ಲಿ. ಅಂದಮೇಲೆ, ಇದಕ್ಕೆ ಸಂಬಂಧಿಸಿದ ಹೂಡಿಕೆ, ಉದ್ಯಮ ಎಂದೂ ಇಲ್ಲೇ ಆಗಬೇಕು. ಆಗ ಅದು ರಾಜ್ಯದ ಬೊಕ್ಕಸಕ್ಕೂ ಲಾಭದಾಯಕ. ನೀವು ರಕ್ಷಣಾ ಕೈಗಾರಿಕೆಯನ್ನು ಇಲ್ಲಿಂದ 500 ಮೈಲಿಯಾಚೆ ಮಾಡಲು ಸಾಧ್ಯವಿಲ್ಲ. ಕೃಷಿ ಉತ್ಪನ್ನ ಆಧರಿತ ಉದ್ಯಮಗಳೂ ಅಷ್ಟೇ, ಅವುಗಳಿಗೆ ಬೇಕಾದ ಕಚ್ಚಾಸಾಮಗ್ರಿ ಇತ್ಯಾದಿ ಎಲ್ಲಿದೆಯೋ ಅಲ್ಲಿಯೇ ನೆಲೆಯೂರಬೇಕು. ಇದೊಂದು ತಾರ್ಕಿಕ ಮತ್ತು ವಸ್ತುನಿಷ್ಠ ಚಿಂತನೆ. ರಕ್ಷಣಾ ಉದ್ಯಮವನ್ನು ನೀವು ಶಿರಸಿಯಲ್ಲೋ ಶಿರಹಟ್ಟಿಯಲ್ಲೋ ಹಾಸನದಲ್ಲೋ ಮಾಡಲು ಸಾಧ್ಯವಿಲ್ಲ.

ಪ್ರಶ್ನೆ: ಸರ್ಕಾರದ ಈಗಿನ ತೀರ್ಮಾನದಿಂದ ಉದ್ಯಮಿಗಳಿಗೆ ನಕಾರಾತ್ಮಕ ಸಂದೇಶ ಹೋದಂತಾಗುವುದಿಲ್ಲವೇ? ಅವರು ಆಂಧ್ರ, ತಮಿಳುನಾಡು ಮತ್ತಿತರ ರಾಜ್ಯಗಳಿಗೆ ಹೋಗಬಹುದೇ?

ಉತ್ತರ: ಹೌದು, ಸಹಜವಾಗಿಯೇ ಹೀಗೆಲ್ಲ ಸ್ವಲ್ಪಮಟ್ಟಿಗೆ ಆಗುತ್ತದೆ. ನೀವೇ ನೋಡಿ, ನಮ್ಮ ಸರ್ಕಾರದ ತೀರ್ಮಾನ ಹೊರಬಿದ್ದ ಕೂಡಲೇ ಆಂಧ್ರದ ಸಚಿವ ನಾರಾ ಲೋಕೇಶ್, ಇಲ್ಲಿನ ಉದ್ಯಮಿಗಳನ್ನು ತಮ್ಮಲ್ಲಿಗೆ ಆಹ್ವಾನಿಸಿ ಟ್ವೀಟ್ ಮಾಡಿದರು. ಆದರೆ, ನಾವು ಇಲ್ಲಿಂದ ಒಂದು ಸಣ್ಣ ಉದ್ಯಮವೂ ಹೊರಹೋಗಲು ಬಿಡುವುದಿಲ್ಲ. ಅಲ್ಲಿ ಭೂಮಿ ಕೊಡಬಹುದು. ಆದರೆ, ನಮ್ಮಲ್ಲಿರುವ ಕಾರ್ಯ ಪರಿಸರ ಭಾರತದಲ್ಲೆಲ್ಲೂ ಇಲ್ಲ. ಈ ದೃಷ್ಟಿಯಲ್ಲಿ ನಾವು ಜಾಗತಿಕವಾಗಿ ತೃತೀಯ ಸ್ಥಾನದಲ್ಲಿದ್ದೇವೆ. ದೇಶದಲ್ಲಿ ನಡೆಯುವ ರಕ್ಷಣಾ ಮತ್ತು ವೈಮಾಂತರಿಕ್ಷ ವಹಿವಾಟಿನಲ್ಲಿ ರಾಜ್ಯದ ಪಾಲು ಶೇಕಡ 65ರಷ್ಟು. ಉದ್ಯಮಿಗಳು ಕೇಳಿದ ಜಾಗದಲ್ಲಿ, ಅವರಿಗೆ ಅಗತ್ಯವಿರುವಷ್ಟು ಭೂಮಿ ಕೊಡುತ್ತೇವೆ. ಜೊತೆಗೆ ನೀರು, ವಿದ್ಯುತ್, ಸಂಪರ್ಕ ರಸ್ತೆ ಹೀಗೆ ಎಲ್ಲವನ್ನೂ ಒದಗಿಸುತ್ತೇವೆ. ಏಕೆಂದರೆ, ನೆರೆ ರಾಜ್ಯಗಳಿಂದ ನಮಗಿರುವ ಸ್ಪರ್ಧೆಯ ತೀವ್ರತೆ ಏನೆಂಬುದು ನನಗೆ ಗೊತ್ತಿದೆ.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ರೈತರ ಪ್ರತಿಭಟನೆಗೆ ಮಣಿದು ಸರ್ಕಾರವು 1,777 ಎಕರೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಟ್ಟಿದೆ. ಇದು ರೈತರ ಹೋರಾಟಕ್ಕೆ ಸಂದ ಜಯ ಎಂದು ಹಲವರು ವ್ಯಾಖ್ಯಾನಿಸುತ್ತಿದ್ದರೆ, ಕೈಗಾರಿಕಾಭಿವೃದ್ಧಿಗೆ ಆದ ಹಿನ್ನಡೆ ಎಂದು ಕೆಲವರು ವಿಶ್ಲೇಷಿಸುತ್ತಿದ್ದಾರೆ. ಈ ಕುರಿತು ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷರಾದ ಬಡಗಲಪುರ ನಾಗೇಂದ್ರ ಅವರು ‘ಪ್ರಜಾವಾಣಿ’ ಸಂದರ್ಶನದಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ

‘ಕುಮ್ಮಕ್ಕಿನಿಂದ 1,198 ದಿನ ಹೋರಾಟ ಸಾಧ್ಯವೇ?’

• ಜಯಸಿಂಹ ಆರ್.



ಬಡಗಲಪುರ ನಾಗೇಂದ್ರ, ಕರ್ನಾಟಕ ರೈತಸಂಘದ ರಾಜ್ಯಾಧ್ಯಕ್ಷ

• ಭೂಸ್ವಾಧೀನವನ್ನು ಕೈಬಿಡಬೇಕು ಎಂದು ರೈತರು ನಡೆಸಿದ ಹೋರಾಟಕ್ಕೆ ಸರ್ಕಾರ ಮಣಿದದ್ದು ಹೇಗೆ?

ಉತ್ತರ: ಈ ಹೋರಾಟ ಯಶಸ್ವಿಯಾಗಲು ರೈತರ ಇಚ್ಛಾಶಕ್ತಿ ಮತ್ತು ಒಗ್ಗಟ್ಟು ಮಾತ್ರವೇ ಕಾರಣ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆಂದು ದೇವನಹಳ್ಳಿಯ ಸಾವಿರಾರು ರೈತರು ಈ ಹಿಂದೆಯೇ ಜಮೀನು ನೀಡಿದ್ದರು. ಪರಿಹಾರವಾಗಿ ದೊರೆತ ಹಣವನ್ನು ಉಳಿಸಿಕೊಳ್ಳಲು ಬಹುತೇಕ ರೈತರಿಂದ ಆಗಿಲ್ಲ. ಅಂತಹವರು ತಮ್ಮದೇ ಜಾಗದಲ್ಲಿ ತಲೆಯೆತ್ತಿದ ಕಾರ್ಖಾನೆಗಳಲ್ಲಿ ಕಾವಲುಗಾರರಾಗಿಯೋ, ಶೌಚಾಲಯ ತೊಳೆಯುವವರಾಗಿಯೋ ಕೆಲಸ ಮಾಡುತ್ತಿದ್ದಾರೆ. ಜಮೀನು ಇದ್ದಾಗ ಹಲವರಿಗೆ ಕೂಲಿ ನೀಡುತ್ತಿದ್ದವರು, ಈಗ ತಾವು ಕೂಲಿಗೆ ಹೋಗುತ್ತಿದ್ದಾರೆ. ಚನ್ನರಾಯಪಟ್ಟಣ ಹೋರಾಟದಲ್ಲಿ ಭಾಗಿಯಾದ ರೈತರು ಇವೆಲ್ಲದಕ್ಕೂ ಸಾಕ್ಷಿಯಾಗಿದ್ದಾರೆ. ತಾವು ಭೂಮಿಯ ಕೈಬಿಡದಿದ್ದರೆ, ಅದೂ ತಮ್ಮ ಕೈಬಿಡುವುದಿಲ್ಲ ಎಂಬುದು ಅವರಿಗೆ ಅರ್ಥವಾಗಿತ್ತು. ಹೀಗಾಗಿ ಯಾವುದೇ ಒತ್ತಡ, ಆಮಿಷಗಳಿಗೆ ಒಳಗಾಗದೆ, ಪಟ್ಟು ಬಿಗಿಗೊಳಿಸಿದರು. ‘ನಾವು ಅಧಿಕಾರಕ್ಕೆ ಬಂದರೆ, ಭೂಸ್ವಾಧೀನ ಕೈಬಿಡುತ್ತೇವೆ’ ಎಂದು ಸಿದ್ದರಾಮಯ್ಯ ಅವರು ವಿರೋಧ ಪಕ್ಷದಲ್ಲಿದ್ದಾಗ ಹೇಳಿದ್ದರು. ಸಿದ್ದರಾಮಯ್ಯ ಅವರು ತಮ್ಮ ಮಾತಿಗೆ ಬದ್ಧರಾಗಿ ನಡೆಯುವಂತೆ ರೈತಮಂದಿ ಮಾಡಿದರು.

• ರೈತ-ಕಾರ್ಮಿಕ-ದಲಿತ ಹೋರಾಟಗಾರರು ಒಟ್ಟಿಗೆ ಒಂದು ಹೋರಾಟ ನಡೆಸಿದ ಉದಾಹರಣೆಗಳು ಈಚಿನ ದಶಕಗಳಲ್ಲಿ ಇಲ್ಲವೇ ಇಲ್ಲ. ಈ ಹೋರಾಟದಲ್ಲಿ ಮೂರೂ ಧಾರೆಯ ಚಳವಳಿಗಾರರು ಒಟ್ಟಾಗಿದ್ದು ಹೇಗೆ ಮತ್ತು ಒಗ್ಗಟ್ಟು ಕಾಯ್ದುಕೊಂಡಿದ್ದು ಹೇಗೆ?

ಉ: ಉದಾರೀಕರಣದ ನಂತರ ರೈತ ಚಳವಳಿ, ಕಾರ್ಮಿಕ ಚಳವಳಿಗಳು ಶಕ್ತಿ ಕಳೆದುಕೊಂಡಿದ್ದವು. ಕೋವಿಡ್ ನಂತರದಲ್ಲಿ ನವಬಂಡವಾಳಶಾಹಿ-ಕಾರ್ಪೊರೇಟ್ ಪರವಾದ ನೀತಿಗಳನ್ನು ಸರ್ಕಾರಗಳು ರೂಪಿಸುತ್ತಾ ಹೋದವು. ರೈತರು ಭೂಮಿ ಕಳೆದುಕೊಂಡರೆ, ಕಾರ್ಮಿಕರ ಹಕ್ಕುಗಳು ದುರ್ಬಲಗೊಂಡವು, ದಲಿತರ ಹಕ್ಕುಗಳಿಗೆ ಮನ್ನಣೆಯೇ ಇಲ್ಲದಂತಾಯಿತು. ನಮ್ಮೆಲ್ಲರ ಎದುರಿನ ದೊಡ್ಡ ಅಪಾಯ ಕಾರ್ಪೊರೇಟ್ ಅಥವಾ ನವಬಂಡವಾಳಶಾಹಿ ಎಂಬುದು ಅರ್ಥವಾಯಿತು. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪಂಜಾಬ್-ಹರಿಯಾಣದ ರೈತರು ನಡೆಸಿದ ಹೋರಾಟಕ್ಕೆ ಕಾರ್ಮಿಕ ಹಾಗೂ ದಲಿತ ಸಂಘಟನೆಗಳು ಜತೆಯಾಗಿದ್ದವು. ಆ ಹೋರಾಟ ಯಶಸ್ವಿಯಾಗಿತ್ತು. ಆ ಮಾದರಿಯನ್ನೇ ಇನ್ನಷ್ಟು ಸುಧಾರಿಸಿ, ‘ಸಂಯುಕ್ತ ಹೋರಾಟ ಕರ್ನಾಟಕ’ವನ್ನು ಸ್ಥಾಪಿಸಿದೆವು. ಆರೋಗ್ಯಕರ ಭಿನ್ನಾಭಿಪ್ರಾಯಗಳನ್ನು ಇರಿಸಿಕೊಂಡೇ, ರೈತರ ಪರವಾಗಿ ನಿಂತೆವು. ಹೋರಾಟದ ಹೊಸ ಮಾದರಿ ಕಂಡುಕೊಂಡಿದ್ದೇವೆ. ಇದು ಹೀಗೇ ಮುಂದುವರಿಯಲಿದೆ.

• ಈ ಹೋರಾಟ ಒಟ್ಟು 1,198 ದಿನ ನಡೆದಿದೆ. ಆರಂಭದಲ್ಲಿ ಬಂದವರು, ಕಡೆಯ 38 ದಿನಗಳಲ್ಲಿ ಮತ್ತೆ ಭಾಗಿಯಾದಿರಿ. ಇನ್ನೂ ಮೊದಲೇ ಬಂದಿದ್ದರೆ, ಹೋರಾಟವೂ ಬೇಗ ಯಶಸ್ಸು ಕಾಣುತ್ತಿತ್ತೇ?

ಉ: ನನಗೆ ಹಾಗೆ ಅನಿಸುವುದಿಲ್ಲ. ಚನ್ನರಾಯಪಟ್ಟಣದ ರೈತರು ಪ್ರತಿಭಟನಾ ಸ್ವರೂಪದ ಹೋರಾಟದಲ್ಲಿ ತೊಡಗಿದ್ದರು. ಸಚಿವರು, ಮುಖ್ಯಮಂತ್ರಿಗೆ ನಾವೆಲ್ಲ ಮನವಿ ಪತ್ರಗಳನ್ನು ಸಲ್ಲಿಸಿ ಭೂಸ್ವಾಧೀನ ಕೈಬಿಡಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದೆವು. ಈ ಹಂತದಲ್ಲೇ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿತು. ಆಗ ಅನಿವಾರ್ಯವಾಗಿ ಎಲ್ಲರೂ ಬೀದಿಗೆ ಇಳಿಯಬೇಕಾಯಿತು. ಅಂತಿಮ ಅಧಿಸೂಚನೆ ಹೊರಡಿಸಿದ್ದು ರೈತರಲ್ಲಿ ಮತ್ತು ಹೋರಾಟಗಾರರಲ್ಲಿ ಆತಂಕ ಮೂಡಿಸಿತಲ್ಲದೇ, ಹೋರಾಟದ ಕಿಚ್ಚನ್ನೂ ಹೆಚ್ಚಿಸಿತು. ಅದರ ಬಿಸಿ ಸರ್ಕಾರಕ್ಕೂ ತಟ್ಟಿತು.

• ರಿಯಲ್ ಎಸ್ಟೇಟ್ ಉದ್ಯಮಿಗಳು, ರಾಜಕಾರಣಿಗಳು ಚನ್ನರಾಯಪಟ್ಟಣ ವ್ಯಾಪ್ತಿಯ ರೈತರ ಜತೆಗೆ ಜಿಪಿಎ ಮಾಡಿಕೊಂಡಿದ್ದು, ಈ ಹೋರಾಟಕ್ಕೆ ಅವರೇ ಕುಮ್ಮಕ್ಕು ನೀಡಿದ್ದರು ಎಂಬ ವಾದವಿದೆಯಲ್ಲಾ?

ಉ: ಹೊರಗಿನವರ ಕುಮ್ಮಕ್ಕಿನಿಂದ 1,198 ದಿನ ಹೋರಾಟ ನಡೆಸಲು ಸಾಧ್ಯವಿದೆಯೇ? ಈ ಆರೋಪ ಸತ್ಯಕ್ಕೆ ದೂರವಾದುದು. ಅಧಿಸೂಚನೆಯಲ್ಲಿ ಗುರುತಿಸಲಾಗಿದ್ದ ಎರಡು ಹಳ್ಳಿಗಳಲ್ಲಿ 163 ದಲಿತ ಕುಟುಂಬಗಳು ಇದ್ದು, ಅವರದ್ದು ದರಖಾಸ್ತು ಭೂಮಿ. ಸರ್ಕಾರ ಅವರಿಗೆ ಭೂಮಿ ನೀಡಿದೆಯೇ ಹೊರತು, ಪೋಡಿ ಮಾಡಿಕೊಟ್ಟಿಲ್ಲ. ಪೋಡಿ-ಸರ್ವೆ ಸ್ಕೆಚ್ ಇಲ್ಲದೇ ಇದ್ದರೆ, ಪರಿಹಾರ ದೊರೆಯುವುದಿಲ್ಲ. ಕುಟುಂಬಗಳ ಅಸಹಾಯಕ ಸ್ಥಿತಿಯನ್ನು ದುರ್ಬಳಕೆ ಮಾಡಿಕೊಂಡ ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಕೆಲ ರಾಜಕಾರಣಿಗಳು ಜಿಪಿಎ ಮಾಡಿಸಿಕೊಂಡಿದ್ದು ಹೌದು. ಅಂತಹವರೇ ಹೋರಾಟದ ಕಡೆಯ ದಿನಗಳಲ್ಲಿ 449 ಎಕರೆ ನೀಡಲು ಸಿದ್ಧರಿದ್ದೇವೆ ಎಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದು. ಈಗ ಸರ್ಕಾರ ಭೂಸ್ವಾಧೀನವನ್ನು ಕೈಬಿಟ್ಟ ನಂತರ, ಆ ರೈತರೂ ನಮ್ಮೊಂದಿಗೆ ಚರ್ಚೆ ನಡೆಸಿದ್ದಾರೆ. ಸರ್ಕಾರಕ್ಕೆ ಭೂಮಿ ನೀಡುವುದಿಲ್ಲ ಎಂದು ನಿರ್ಧರಿಸಿದ್ದಾರೆ. ಇನ್ನು ಯಾರೂ ಒಬ್ಬಿಬ್ಬ ರೈತರು ಮಾತ್ರ ಜಮೀನು ನೀಡಿದರೆ, ಸರ್ಕಾರಕ್ಕೆ ಆಗುವ ಉಪಯೋಗವಾದರೂ ಏನು?

• ಭೂಸ್ವಾಧೀನಕ್ಕೆ ಗುರುತಿಸಲಾಗಿದ್ದ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ನಿರ್ಬಂಧಿಸುವ ವಿಚಾರವೂ ಪ್ರಸ್ತಾಪವಾಗಿತ್ತು. ಸರ್ಕಾರ ಅಂತಹ ಕ್ರಮ ತೆಗೆದುಕೊಂಡರೆ, ರೈತರ ಪ್ರತಿಕ್ರಿಯೆ ಹೇಗಿರಲಿದೆ?

ಉ: ಭೂಮಿಯನ್ನು ಉಳಿಸಿಕೊಳ್ಳಬೇಕು ಎಂಬುದೇ ಈ ಹೋರಾಟದ ಮೂಲ ಮತ್ತು ಏಕೈಕ ಉದ್ದೇಶವಾಗಿತ್ತು. ಪ್ರಾಥಮಿಕ ಅಧಿಸೂಚನೆಯಲ್ಲಿ ಇದ್ದವರ ಪೈಕಿ, 8 ಗುಂಟೆ, 12 ಗುಂಟೆ, 15 ಗುಂಟೆಯಷ್ಟು ಕಡಿಮೆ ಜಮೀನು ಇದ್ದ ರೈತರೂ ಇದ್ದರು. ಅವರು ಕೃಷಿಯನ್ನು ಮುಂದುವರಿಸಿ, ಲಾಭ ಪಡೆದುಕೊಳ್ಳುವಂತೆ ಮಾಡುವ ಬಗೆ ಹೇಗೆ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಆ ಭಾಗದ ಭೂಮಿ ಫಲವತ್ತಾಗಿದೆ, ನೀರೂ ಉತ್ತಮವಾಗಿದೆ. ಮಾರುಕಟ್ಟೆ ಮತ್ತು ರಫ್ತು ಅವಕಾಶಗಳು ವಿಪುಲವಾಗಿವೆ. ಸಣ್ಣ ರೈತರು ಮತ್ತು ದೊಡ್ಡ ರೈತರು ಸಹಕಾರ ತತ್ವದಲ್ಲಿ ಬೇಸಾಯ ಮಾಡಿ, ಹೊಸ ಮಾದರಿಯನ್ನು ರೂಪಿಸುವುದು ಸೂಕ್ತ ಎಂಬ ಸಲಹೆ ವ್ಯಕ್ತವಾಗಿದೆ. ಈ ಬಗೆಗಿನ ಚರ್ಚೆ ಇನ್ನೂ ಆರಂಭಿಕ ಹಂತದಲ್ಲಿದೆ. ಹೀಗಾಗಿ ಸರ್ಕಾರ ನಿರ್ಬಂಧ ಹೇರಿದರೂ, ರೈತ ಮಂದಿ ಆ ಬಗ್ಗೆ ತಲೆಕೆಡಿಸಿಕೊಳ್ಳುವ ಸಾಧ್ಯತೆ ಕಡಿಮೆ.

• ಈ ಹೋರಾಟದಲ್ಲಿ ಸರ್ಕಾರವು ಭೂಸ್ವಾಧೀನವನ್ನು ಕೈಬಿಟ್ಟ ನಂತರ ಬಳ್ಳಾರಿಯ ಕುಡಿತಿನಿ ಮತ್ತು ಚಿಕ್ಕಬಳ್ಳಾಪುರದ ಜಂಗಮಕೋಟೆಯಲ್ಲಿ ರೈತರ ಹೋರಾಟ ತೀವ್ರಗೊಂಡಿದೆ. ಇದು ಹೀಗೆಯೇ ಹಬ್ಬುತ್ತದೆಯೇ?

ಉ: ಚನ್ನರಾಯಪಟ್ಟಣ ರೈತರ ಹೋರಾಟಕ್ಕೆ ಯಶ ದೊರೆತಿರುವುದು ಇತರ ರೈತರಲ್ಲೂ ಉತ್ಸಾಹ ಹೆಚ್ಚಿಸಿದೆ. ಕುಡುತಿನಿಯದ್ದು ಬೇರೆ ರೀತಿಯದ್ದೇ ಪ್ರಕರಣ. ಈಗಾಗಲೇ ಸ್ವಾಧೀನಕ್ಕೆ ತೆಗೆದುಕೊಂಡಿರುವ ಭೂಮಿಯನ್ನು ಬಳಸಿಕೊಳ್ಳಿ ಮತ್ತು ಪರಿಹಾರ ಹೆಚ್ಚಿಸಿ ಎಂಬುದು ಅಲ್ಲಿನ ರೈತರ ಒತ್ತಾಯ. ಜಂಗಮಕೋಟೆಯಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಕೈಬಿಡಿ ಎಂದು ಒತ್ತಾಯಿಸುತ್ತಿದ್ದಾರೆ. ಭೂಬಳಕೆ ನೀತಿ ಮತ್ತು ಸಮಗ್ರ ಕೃಷಿ-ಕೈಗಾರಿಕಾ ನೀತಿ ರೂಪಿಸುವುದೇ ಇದಕ್ಕೆ ಪರಿಹಾರ.

• ಒಂದು ನಾಡಿನ ಅಭಿವೃದ್ಧಿಗೆ ಕೈಗಾರಿಕೆಗಳೂ ಮುಖ್ಯವಾಗುತ್ತವೆ. ಭೂಸ್ವಾಧೀನ ನಡೆಸದೇ ಇದ್ದರೆ ಅಥವಾ ಕೈಬಿಟ್ಟರೆ ಕೈಗಾರಿಕೆಗಳು ರಾಜ್ಯದಿಂದ ದೂರ ಹೋಗುವುದಿಲ್ಲವೇ?

ಉ: ಕೈಗಾರಿಕೆಗಳ ಸ್ಥಾಪನೆಗೆ ನಮ್ಮ ವಿರೋಧವಿಲ್ಲ. ಬದಲಿಗೆ ನಾವು ಕೈಗಾರಿಕೆಗಳ ಪರವಾಗಿ ಇದ್ದೇವೆ. ವೈಮಾಂತರಿಕ್ಷ ಪಾರ್ಕ್‌ಗೆಂದು ಎರಡನೇ ಹಂತದಲ್ಲಿ ಸ್ವಾಧೀನಕ್ಕೆ ಪಡೆದುಕೊಂಡ ನೂರಾರು ಎಕರೆ ಭೂಮಿ ಇನ್ನೂ ಹಂಚಿಕೆಯಾಗಿಲ್ಲ. ಕೈಗಾರಿಕೆಗಳಿಗೆಂದು ಪಡೆದುಕೊಂಡ ಭೂಮಿಯನ್ನು ಸರ್ಕಾರವೇ ಬಿಲ್ಡರ್‌ಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನೀಡಿದೆ. ಅವನ್ನು ರಕ್ಷಣಾ ಮತ್ತು ವೈಮಾಂತರಿಕ್ಷ ಉದ್ಯಮಗಳಿಗೇ ನೀಡಬಹುದಿತ್ತಲ್ಲಾ? ಈಗಾಗಲೇ ಸರ್ಕಾರದ ಸ್ವಾಧೀನದಲ್ಲಿರುವ ನೂರಾರು ಎಕರೆಯಷ್ಟು ಭೂಮಿ ಇನ್ನೂ ಖಾಲಿ ಇದೆ. ಅದನ್ನೇ ಉದ್ಯಮಗಳಿಗೆ ನೀಡಲಿ.

ಬೆಂಗಳೂರಿನಾಚೆಗೆ, ಬೇರೆ ಜಿಲ್ಲೆಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಬೇಕು. ತಮಿಳುನಾಡು ಪ್ರತಿ ಜಿಲ್ಲೆಯಲ್ಲೂ ಒಂದೊಂದು ಸ್ವರೂಪದ ಕೈಗಾರಿಕೆಗೆ ಒತ್ತು ನೀಡಿದೆ. ನಮಗೆ ಅದು ಮಾದರಿಯಾಗಬಲ್ಲದು. ಸರ್ಕಾರವು ಕೃಷಿ ಮತ್ತು ಕೈಗಾರಿಕೆ ಮಧ್ಯೆ ಸಮತೋಲನ ಸಾಧಿಸುವ ಸಮಗ್ರ ಕೃಷಿ ನೀತಿ, ಸಮಗ್ರ ಕೈಗಾರಿಕಾ ನೀತಿ ಮತ್ತು ಭೂಬಳಕೆ ನೀತಿಯನ್ನು ರೂಪಿಸಬೇಕು ಎಂಬುದು ನಮ್ಮ ಒತ್ತಾಯ.

ಪ್ರಶ್ನೆ: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ಭಾಗವಾಗಿ ರಾಜ್ಯದ ಹಿಂದಿನ ಬಿಜೆಪಿ ಸರ್ಕಾರವು ಎಪಿಎಂಸಿ, ಭೂಸುಧಾರಣೆ ಮತ್ತು ಕಾರ್ಮಿಕರ ಕಾಯ್ದೆಗಳಿಗೆ ತಿದ್ದುಪಡಿ ತಂದಿತ್ತು. ಇವುಗಳನ್ನು ಹಿಂದಕ್ಕೆ ಪಡೆಯುತ್ತೇವೆ ಎಂದು ಕಾಂಗ್ರೆಸ್ ಹೇಳಿತ್ತು. ಆದರೆ ಈವರೆಗೂ ಆ ಕೆಲಸ ಆಗಿಲ್ಲ. ಇದರ ವಿರುದ್ಧದ ಹೋರಾಟ ಹೇಗಿರಲಿದೆ?

ಉತ್ತರ: ನಾವು ಅಧಿಕಾರಕ್ಕೆ ಬಂದರೆ ಈ ತಿದ್ದುಪಡಿಗಳನ್ನು ವಾಪಸ್ ಪಡೆಯುತ್ತೇವೆ ಎಂದು ಸ್ವತಃ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಹೇಳಿದ್ದರು. ಧರಣಿ ನಡೆಸುತ್ತಿದ್ದ ನಮ್ಮೊಂದಿಗೆ ಬಂದು ಕುಳಿತಿದ್ದರು. ಅವರು ನೀಡಿದ್ದ ಭರವಸೆಯ ಮೇಲೆಯೇ ಹಲವು ಸಂಘಟನೆಗಳು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ್ದವು. ಆದರೆ ಕಾಂಗ್ರೆಸ್ ಸರ್ಕಾರ ಬಂದು ಎರಡು ವರ್ಷವಾದರೂ ಈ ತಿದ್ದುಪಡಿಗಳು ರದ್ದಾಗಿಲ್ಲ. ಎಪಿಎಂಸಿ ತಿದ್ದುಪಡಿ ರದ್ದತಿ ಮಸೂದೆ ವಿಧಾನ ಪರಿಷತ್ತಿನಲ್ಲಿ ಬಿದ್ದುಹೋಯಿತು. ಭೂಸುಧಾರಣೆ ಮತ್ತು ಕಾರ್ಮಿಕರ ಕಾಯ್ದೆಗಳ ತಿದ್ದುಪಡಿ ರದ್ದತಿಗೆ ಸರ್ಕಾರ ಕ್ರಮವನ್ನೇ ತೆಗೆದುಕೊಂಡಿಲ್ಲ. ಇದರ ವಿರುದ್ಧವೂ ಹೋರಾಟ ನಡೆಸಬೇಕು ಎಂಬ ಒತ್ತಾಯ ಸಂಯುಕ್ತ ಹೋರಾಟ ಕರ್ನಾಟಕದ ವೇದಿಕೆಯಲ್ಲಿ ಚರ್ಚೆಯಾಗಿದೆ. ಕೆಲವೇ ದಿನಗಳಲ್ಲಿ ಈ ಹೋರಾಟವೂ ಆರಂಭವಾಗಲಿದೆ.




ಗುಂಡಣ್ಣ



ಪದಬಂಧ 6108

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಆನೆಗಳ ಒಡೆಯ (4)
3.ಗಾಳಿಪಟದ ಕೆಳಗೆ ಸಮತೋಲನಕ್ಕಾಗಿ ಕಟ್ಟುವ ಕುಚ್ಚು (4)
5.ರಾಮನ ಮಗ ಹಿಡಿದಿರುವ ಉಪ್ಪು (3)
7.ಶರಣ ಹಿಡಿದಿರುವ ಬಾಣ (2)
9.ನೀನೊಲಿದರೆ ಕೊರಡು ಹೀಗೆ ಚಿಗುರೀತು! (3)
10.ಮುಷ್ಟಿಯಿಂದ ಹೊಡೆಯುವಿಕೆ (2)
11.ಸೂರು ಅಥವಾ ಕಪಾಟು (2)
12.ಒರೆಗಲ್ಲು ಇಲ್ಲಿದೆ (3)
14.ರಭಸದಲ್ಲಿ ಚಲ್ಲಿರುವ ದ್ರವ (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
18.ಕಲೆಯೊಳಡಗಿರುವ ಆಹ್ವಾನ (4)
19.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
2.ತಿರುಮಲದಲ್ಲಿ ಖರೀದಿಸಿರುವ ಎಳ್ಳು (2)
3.ಬಾದಾರಾಯಣ ಕಾಲದ ಶರ (2)
4.ಕನ್ನಡಿಗ ಹಿಡಿದಿರುವ ಡೈನಮೈಟ್! (4)
6.ವನದಲ್ಲಿ ನೀಡಿರುವ ವಾಗ್ದಾನ (3)
8.ಉತ್ತರದ ಕಡೆಯವರ ವಿಪುಲತೆ! (3)
10.ಗುಡಾಣವಿರುವ ಡೇರೆ (3)
11.ಮನಸ್ಸಿಗೆ ಸಂಬಂಧಿಸಿದ್ದು (4)
13.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ! (3)
15.ನೆಮ್ಮದಿ ಹೀಗೆ ಬಂದಿದೆ (4)
16.ಅಬಲೆ ಬೀಸಿದ ಗಾಳ (2)
17.ವಿರೋಧದ ವಿರುದ್ಧ ಪದ (2)

6107ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಅಂಟು 4.ಪರಾವಲಂಬಿ
5.ಉಮ್ಮಳ 6.ಗಜ
7.ಪರಾಗ 9.ಮಂಡೂಕ
10.ಮರ್ಮಭೇದಕ 11.ನಿಧಾನ
12.ರಿಕಾಪು 14.ತೂತು
16.ಕುಶಲ 17.ಕತಚಿಂತಹಿ
18.ಬಂಡಿ

ಮೇಲಿಂದ ಕೆಳಕ್ಕೆ:

1.ಅಪರೂಪ 2.ಅಂಬಿಗ
3.ನಳಪಾಕ 8.ಗಮನ
9.ಮಂಕರಿ 11.ನಿರಂಕುಶ
13.ಪುರೋಹಿತ 15.ತುಕಡಿ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

19 ಜುಲೈ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ನವಮಿ ಗಂ. 14-43 **ನಕ್ಷತ್ರ:** ಭರಣಿ ಗಂ. 24-38 **ಯೋಗ:** ಶೂಲ ಗಂ. 24-55 **ಕರಣ:** ಗರ ಗಂ. 14-43, ಕರ್ಕಾಟಕ ಮಾಸದ 03 ನೇ ದಿನ. **ಮಳೆ ನಕ್ಷತ್ರ :** ಪುನರ್ವಸು 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00- 10-30 . **ಸೂರ್ಯೋದಯ :** 06-16 **ಸೂರ್ಯಾಸ್ತ :** 06-58 **ಮುಸ್ಲಿಂ ದಿನಾಂಕ :** 23 ಮೊಹರಮ್ , **ಅದೃಷ್ಟ ಸಂಖ್ಯೆ :** 2, 8

ಮೇಷ: ಉತ್ಪತ್ತಿಯನ್ನು ಲೆಕ್ಕಿಸಿ ಅರಸಿ ಬಂದ ಉದ್ಯೋಗವನ್ನು ದೂರ ಮಾಡುವುದು ಮೂರ್ಖತನಕ್ಕೆ ಉದಾಹರಣೆ. ಸಾಯಂಕಾಲದ ವೇಳೆ ಬಾಲ್ಯದ ನೆನಪುಗಳ ಜತೆಯಲ್ಲಿ ಆತ್ಮೀಯರೊಂದಿಗೆ ಕಾಲ ಕಳೆಯುವ ಲಕ್ಷಣಗಳಿವೆ.

ವೃಷಭ: ಮನೆಯಲ್ಲಿ ಸಣ್ಣ ಪ್ರಮಾಣದ ಕಲಹಕ್ಕೆ ಕಾರಣರಾದಿರಿ ಎಂದು ದುಃಖಿಸುವಂತಾಗುತ್ತದೆ. ವಿಮರ್ಶಿಕೊಳ್ಳಬೇಕಾದ ಸ್ಥಿತಿ ಬರಲಿದೆ. ಅನಿರೀಕ್ಷಿತ-ವಾಗಿ ತೋರಿಬರುವ ಅಡ್ಡಿ-ಆತಂಕಗಳಿಗೆ ಧೈರ್ಯಗೆಡದಿರಿ.

ಮಿಥುನ: ಪದವಿ ಹಂತದಲ್ಲಿರುವ ವಿದ್ಯಾರ್ಥಿಗಳಿಗೆ ಕೆಲಸದ ವಿಚಾರವಾಗಿ ದೀರ್ಘ ಶ್ವಾಸವನ್ನು ಬಿಡುವಂಥ ಸಂದರ್ಭ ಎದುರಾಗಲಿದೆ. ಭೇಟಿ ಮಾಡುವಂಥ ವ್ಯಕ್ತಿಯ ಸಾಂಗತ್ಯವು ಸಾರ್ಥಕವೆಂದು ಎನಿಸುವುದು.

ಕರ್ಕಾಟಕ: ಹಿಂದಿನ ಕಹಿ ಘಟನೆಗಳನ್ನು ಮರೆತು ಮುನ್ನಡೆದಲ್ಲಿ ಸಿಹಿ ದಿನಗಳನ್ನು ಆನಂದದಿಂದ ಅನುಭವಿಸುವಂತೆ ಆಗಲಿದೆ. ವೈದ್ಯಕೀಯ ಲೋಕದಲ್ಲಿ ಅದರಲ್ಲೂ ಆಯುರ್ವೇದ ತಿಳಿದವರಿಗೆ, ನಾಟಿ ವೈದ್ಯರಿಗೆ ಬೇಡಿಕೆ ಹೆಚ್ಚಾದೀತು.

ಸಿಂಹ: ದಿನಗೂಲಿ ಕೆಲಸದಲ್ಲಿ ಇರುವವರಿಗೆ ಕೆಲಸದಲ್ಲಿ ಹೊಸತನ ಕಂಡುಕೊಳ್ಳುವಿರಿ. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಪ್ರಗತಿಯ ಹಾದಿಯನ್ನು ಸ್ಪರ್ಶಿಸಲಿದ್ದೀರಿ.

ಕನ್ಯಾ: ಅಕ್ಕ ಪಕ್ಕದಲ್ಲಿನ ಭಿನ್ನಾಭಿಪ್ರಾಯಗಳಿಗೆ ಪ್ರತಿಕ್ರಿಯಿಸುವುದು ಸಮಂಜಸವಲ್ಲ. ಭಾರದ ವಸ್ತುಗಳನ್ನು ಎತ್ತಿ ಇಳಿಸುವಂಥ ಕೆಲಸ ಮಾಡಲು ಹೋಗಿ ದೇಹದ ಭಾಗಗಳನ್ನು ಉಳುಕಿಸಿಕೊಳ್ಳುವಂತೆ ಆಗಬಹುದು ಎಚ್ಚರ.

ತುಲಾ: ಪರಿಸ್ಥಿತಿ , ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆ ಪ್ರಾಪ್ತಿಯಾಗುವುದು. ಏಕಾಗ್ರತೆಯ ಕೊರತೆಯಿಂದ ನೀವು ಮಾಡುವ ಕೆಲಸದಲ್ಲಿ ಏನಾದರೂ ತಪ್ಪುಗಳಾಗುತ್ತಲೇ ಇರುತ್ತವೆ.

ವೃಶ್ಚಿಕ: ಉತ್ತಮ ಕಾರ್ಯವನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಬೇಡ. ಕೃಷಿಗೆ ಸಂಬಂಧಿಸಿದಂತೆ ಪ್ರಾಕೃತಿಕ ವಿಕೋಪ, ಕಾಡು ಪ್ರಾಣಿಗಳ ಹಾವಳಿ, ಬೆಳೆರೋಗದಂಥ ಸಮಸ್ಯೆ ಕಾಡಬಹುದು. ಅಪವಾದಗಳಿಗೆ ಕುಗ್ಗಬೇಡಿ.

ಧನು: ಮನೆಯ ನವೀಕರಣ ವಿಷಯದಲ್ಲಿ ಮಾಡುವ ಪ್ರಯತ್ನ ಸಫಲವಾಗುತ್ತದೆ. ಗೆಳೆತನದ ಮಧ್ಯದಲ್ಲಿ ಹಣಕಾಸು ಬಂದು ಸಂಬಂಧ, ಬಾಂಧವ್ಯ ಸ್ಥಾನ ಕಳೆದುಕೊಳ್ಳಲಿವೆ. ಪರೋಪಕಾರದ ಪ್ರತಿಫಲ ಅನುಭವಕ್ಕೆ ಬರುತ್ತದೆ.

ಮಕರ: ಹೊಸ ವ್ಯಕ್ತಿಗಳ ಸ್ನೇಹವನ್ನು ಬೆಳೆಸಿ ವ್ಯವಹರಿಸುವಾಗ ಸರಿಯಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಅತಿಯಾದ ಉಷ್ಣದಿಂದ ಕೆಲವು ಸಮಸ್ಯೆಗಳಾಗಬಹುದು. ನಷ್ಟವಾದ ವಸ್ತು ಮರಳಿ ಕೈ ಸೇರಲಿದೆ.

ಕುಂಭ: ಮಾಡದೆ ಇರುವ ತಪ್ಪುಗಳ ಆಪಾದನೆ ಬಂದು ಅದನ್ನು ನಿವಾರಿಸಿಕೊಳ್ಳಲಾಗದೇ ತೊಳಲಾಡಬೇಕಾಗುವುದು. ಇತರರ ಬಗ್ಗೆ ಗೌರವ ಹಾಗೂ ತಾಳ್ಮೆ ಹೊಂದಿರುವುದು ಮುಖ್ಯ.

ಮೀನ: ವಿದ್ಯುತ್ ಉಪಕರಣಗಳ ಮಾರಾಟ, ರಿಪೇರಿ ಮಾಡುವವರಿಗೆ ಲಾಭ. ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗಲಿದೆ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಪುಸ್ತಕ ಓದುವ ಹವ್ಯಾಸ ಇಮ್ಮಡಿಗೊಳ್ಳುವುದು.

ಸುಡೊಕು 6492

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

6491 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ವಿನಿಮಯ ದರ | ಡಾಲರ್ 86.16 | ಪೌಂಡ್ 115.82 | ಯುರೊ 100.25 | ಯೆನ್ (100ಕ್ಕೆ) 58

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,111
ಇಂದಿನ ಅಂತ್ಯ: 24,968
ದಿನದ ಗರಿಷ್ಠ: 24,918
143

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹580; 12 ಕ್ಕೆ ₹80
ಮೈಸೂರು: 100 ಕ್ಕೆ ₹590

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹16000-25000
ಬೆಂಗಳೂರು ₹20000–25000
ಮಂಗಳೂರು ₹9000–18000

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹280-562
ದ್ವಿತಳಿ (ಬಿ.ವಿ) ₹333-688

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹206
ಆರ್‌ಎಸ್‌ಎಸ್-5 ₹200
ಗುಡ್ ಲಾಟ್ ₹184.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1450 (1440)
ಸೋಯಾ (ರಿಫೈನ್ಡ್) ₹1230 (1225)
ಸೂರ್ಯಕಾಂತಿ (ರಿಫೈನ್ಡ್) ₹1360 (1355)
ಪಾಮೋಲಿನ್ ₹1200 (1190)

ಅಡಿಕೆ ಧಾರಣೆ

ಪುತ್ತೂರು		ಸರಕು	60109-80809	ತಟ್ಟಬೆಟ್ಟೆ	31899-38000
ಕೋಕ	20000-27500	**ಸಿದ್ದಾಪುರ**		**ಶಿರಸಿ**	
ಹೊಸತು	26000-47500	ಬಿಳಿಗೋಟು	24109-30599	ಬೆಟ್ಟೆ	20901-36599
ಶಿವಮೊಗ್ಗ		ಚಾಲಿ	34699-41069	ಬಿಳಿಗೋಟು	19399-33333
ಬೆಟ್ಟೆ	54699-60109	ಕೋಕ	15719-21669	ಚಾಲಿ	36099-42669
ಗೊರಬಲು	18040-30999	ಕೆಂಪುಗೋಟು	20619-23099	ಕೆಂಪುಗೋಟು	14499-26899
ರಾಶಿ	46399-57501	ರಾಶಿ	42699-47339	ರಾಶಿ	40000-46992

₹3 ಸಾವಿರ ಕೋಟಿ ಸಂಗ್ರಹಕ್ಕೆ ಮುಂದಾದ ಹುಡ್ಕೊ

ನವದೆಹಲಿ (ಪಿಟಿಐ): ಷೇರುಗಳಾಗಿ ಪರಿವರ್ತಿಸಲಾಗದ ಸಾಲದ ಪತ್ರಗಳ (ಎನ್‌ಸಿಡಿ) ಹಂಚಿಕೆ ಮೂಲಕ ₹3 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಯೋಜಿಸಲಾಗಿದೆ ಎಂದು ವಸತಿ ಮತ್ತು ನಗರಾಭಿವೃದ್ಧಿ ನಿಗಮ (ಹುಡ್ಕೊ) ತಿಳಿಸಿದೆ.

ಬಂಡವಾಳ ಸಂಗ್ರಹಿಸಲು ಬಾಂಡ್ ಹಂಚಿಕೆ ಸಮಿತಿ ಅನುಮತಿ ನೀಡಿದೆ ಎಂದು ಹುಡ್ಕೊ ಷೇರುಪೇಟೆಗೆ ತಿಳಿಸಿದೆ. ಹುಡ್ಕೊ ವಸತಿ ಮತ್ತು ನಗರದ ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ.

ಮುಂಬೈ ಧಾರಣೆ (ಶೇಂಗಾ)
18-07-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1460 (1450)
ಒಂದು ವಾರದ ಡೆಲಿವರಿ	1455 (1445)
ಪಾಮ್ ವಾರದ ಡೆಲಿವರಿ	1198 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,900 (96,900)
ಬೆಳ್ಳಿ ಕೆ.ಜಿಗೆ	1,12,500 (1,10,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಯೋತ್ಪಾದನೆ ನಿಗ್ರಹ ಸಹಕಾರಕ್ಕೆ ಮನವಿ

ಬೀಜಿಂಗ್ (ಪಿಟಿಐ): 'ಪ್ರಾದೇಶಿಕ ಭದ್ರತೆ ಖಾತರಿಪಡಿಸುವ ನಿಟ್ಟನಲ್ಲಿ ಭಯೋತ್ಪಾದನೆ ನಿಗ್ರಹ ಸಹಕಾರವನ್ನು ಹೆಚ್ಚಿಸಬೇಕು' ಎಂದು ಚೀನಾ ಶುಕ್ರವಾರ ಕರೆ ನೀಡಿದೆ. ನಿಷೇಧಿತ ಲಷ್ಕರ್–ಎ–ತಯಬಾದ (ಎಲ್‌ಇಟಿ) ಅಧೀನ ಸಂಘಟನೆಯಾಗಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್'ಅನ್ನು (ಟಿಆರ್‌ಎಫ್) 'ವಿದೇಶಿ ಭಯೋತ್ಪಾದಕ ಸಂಘಟನೆ' ಎಂದು ಅಮೆರಿಕ ಘೋಷಿಸಿದ ಬೆನ್ನಲ್ಲೇ, ಈ ಹೇಳಿಕೆ ಹೊರಬಿದ್ದಿದೆ.

'ಎಲ್ಲ ಮಾದರಿಯ ಭಯೋತ್ಪಾದನೆಗಳನ್ನು ಚೀನಾ ವಿರೋಧಿಸುತ್ತಿದ್ದು, ಏ.22ರಂದು ಸಂಭವಿಸಿದ ಪಹಲ್ಗಾಮ್ ದಾಳಿಯನ್ನು ಕಟುವಾಗಿ ಖಂಡಿಸುತ್ತೇವೆ' ಎಂದು ಚೀನಾದ ವಿದೇಶಾಂಗ ಇಲಾಖೆಯ ವಕ್ತಾರ ಲಿನ್ ಜಿಯಾನ್ ತಿಳಿಸಿದ್ದಾರೆ. 'ಪ್ರಾದೇಶಿಕ ಭದ್ರತೆ, ಸುರಕ್ಷತೆ ಖಾತರಿಪಡಿಸಲು ಭಯೋತ್ಪಾದನೆ ನಿಗ್ರಹ ಸಹಕಾರವನ್ನು ಹೆಚ್ಚಿಸಬೇಕು' ಎಂದು ಈ ವೇಳೆ ಕರೆ ನೀಡಿದ್ದಾರೆ.

ಟಿಆರ್‌ಎಫ್ 'ಭಯೋತ್ಪಾದಕ ಸಂಘಟನೆ'

ಪಹಲ್ಗಾಮ್ ದಾಳಿಯ ಹೊಣೆ ಹೊತ್ತಿದ್ದ ಉಗ್ರರ ಗುಂಪು; ಅಮೆರಿಕ ವಿದೇಶಾಂಗ ಇಲಾಖೆ ಘೋಷಣೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನ್ಯೂಯಾರ್ಕ್/ ವಾಷಿಂಗ್ಟನ್/ ನವದೆಹಲಿ: ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿದ್ದ ಪಾಕಿಸ್ತಾನ ಮೂಲದ ಉಗ್ರರ ಗುಂಪು 'ದಿ ರೆಸಿಸ್ಟೆನ್ಸ್ ಫ್ರಂಟ್'ಅನ್ನು (ಟಿಆರ್‌ಎಫ್) 'ವಿದೇಶಿ ಭಯೋತ್ಪಾದಕ ಸಂಘಟನೆ' ಎಂದು ಅಮೆರಿಕ ಘೋಷಿಸಿದೆ.

'ಪಹಲ್ಗಾಮ್ ಭಯೋತ್ಪಾದಕ ದಾಳಿಯ ಸಂತ್ರಸ್ತರಿಗೆ ನ್ಯಾಯ ಒದಗಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಭರವಸೆಯನ್ನು ಈಡೇರಿಸುವಲ್ಲಿ ಅಮೆರಿಕ ಹೊಂದಿರುವ ಬದ್ಧತೆಯನ್ನು ಇದು ತೋರಿಸುತ್ತದೆ' ಎಂದು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಗುರುವಾರ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಪಾಕ್ ಮೂಲದ ಎಲ್‌ಇಟಿಯ ಅಧೀನ ಸಂಘಟನೆ
- ಪಾಕಿಸ್ತಾನಕ್ಕೆ ಮತ್ತೊಂದು ಹಿನ್ನಡೆ
- ಏ.22 ರಂದು ಪಹಲ್ಗಾಮ್‌ನಲ್ಲಿ ನಡೆದಿದ್ದ ದಾಳಿ

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ಏಪ್ರಿಲ್ 22ರಂದು ಉಗ್ರರು ನಡೆಸಿದ್ದ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು.

ನಿಷೇಧಿತ ಲಷ್ಕರ್–ಎ–ತಯಬಾದ (ಎಲ್‌ಇಟಿ) ಅಧೀನ ಸಂಘಟನೆಯಾಗಿರುವ ಟಿಆರ್‌ಎಫ್, ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿತ್ತು. ಆದರೆ, ಭಾರತ– ಪಾಕಿಸ್ತಾನ ನಡುವೆ ಉದ್ವಿಗ್ನ ಸ್ಥಿತಿ ಹೆಚ್ಚಿದಂತೆ ತನ್ನ ಹೇಳಿಕೆ ವಾಪಸ್ ಪಡೆದುಕೊಂಡಿತ್ತು.

'ಅಮೆರಿಕದ ವಿದೇಶಾಂಗ ಇಲಾಖೆಯು ಟಿಆರ್‌ಎಫ್‌ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ (ಎಫ್‌ಟಿಒ) ಮತ್ತು ವಿಶೇಷವಾಗಿ ಗೊತ್ತುಪಡಿಸಿದ ಜಾಗತಿಕ ಭಯೋತ್ಪಾದಕ (ಎಸ್‌ಡಿಜಿಟಿ) ಸಂಘಟನೆಯಾಗಿ ಹೆಸರಿಸುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

ಅಮೆರಿಕ ವಿದೇಶಾಂಗ ಇಲಾಖೆಯ ನಿರ್ಧಾರವು ಪಾಕಿಸ್ತಾನಕ್ಕೆ ಹಿನ್ನಡೆಯಾಗಿ ಪರಿಣಮಿಸಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಪಹಲ್ಗಾಮ್ ದಾಳಿ ಖಂಡಿಸಿ ಏ.25ರಂದು ಹೊರಡಿಸಿದ್ದ ಹೇಳಿಕೆಯಲ್ಲಿ ಟಿಆರ್‌ಎಫ್ ಬಗ್ಗೆ ಇದ್ದ ಉಲ್ಲೇಖವನ್ನು ಪಾಕಿಸ್ತಾನವು ಚೀನಾದ ನೆರವಿನಿಂದ ತೆಗೆದುಹಾಕುವಲ್ಲಿ ಯಶಸ್ವಿಯಾಗಿತ್ತು.

ಟಿಆರ್‌ಎಫ್ ವಿರುದ್ಧದ ಈ ಕ್ರಮವು 'ರಾಷ್ಟ್ರೀಯ ಭದ್ರತಾ ಹಿತಾಸಕ್ತಿ ಕಾಪಾಡುವಲ್ಲಿ ಮತ್ತು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಟ್ರಂಪ್ ಆಡಳಿತದ ಬದ್ಧತೆಯನ್ನು ತೋರಿಸುತ್ತದೆ' ಎಂದು ರುಬಿಯೊ ಹೇಳಿದ್ದಾರೆ.

'ಪಹಲ್ಗಾಮ್ ದಾಳಿಯು ಎಲ್‌ಇಟಿ ನಡೆಸಿದ 2008ರ ಮುಂಬೈ ದಾಳಿಯ ನಂತರ ಭಾರತದಲ್ಲಿ ನಾಗರಿಕರನ್ನು ಗುರಿಯಾಗಿಸಿ ನಡೆದ ಅತ್ಯಂತ ಭೀಕರ ದಾಳಿಯಾಗಿದೆ. ಭಾರತದ ಭದ್ರತಾ ಪಡೆಗಳನ್ನು ಗುರಿಯಾಗಿಸಿ ನಡೆದ ಹಲವಾರು ದಾಳಿಗಳ ಹೊಣೆಯನ್ನೂ ಟಿಆರ್‌ಎಫ್ ವಹಿಸಿಕೊಂಡಿದೆ' ಎಂದಿದ್ದಾರೆ.

ಭಾರತ ಸ್ವಾಗತ

'ದಿ ರೆಸಿಸ್ಟೆನ್ಸ್ ಫ್ರಂಟ್'ಅನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿರುವ ಅಮೆರಿಕದ ಕ್ರಮವನ್ನು ಭಾರತ ಸ್ವಾಗತಿಸಿದೆ.

'ಈ ಕ್ರಮ ಕೈಗೊಂಡಿದ್ದಕ್ಕೆ ಮಾರ್ಕೊ ರುಬಿಯೊ ಅವರನ್ನು ಅಭಿನಂದಿಸುತ್ತೇನೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಈ ಬೆಳವಣಿಗೆಯು ಭಯೋತ್ಪಾದನೆಯ ನಿಗ್ರಹದಲ್ಲಿ ಭಾರತ ಮತ್ತು ಅಮೆರಿಕ ನಡುವಣ ಸಹಕಾರವನ್ನು ಬಲವಾಗಿ ದೃಢೀಕರಿಸುತ್ತದೆ' ಎಂದಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಲಾಭ ಶೇ 78ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ₹26,994 ಕೋಟಿ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹15,138 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 78ರಷ್ಟು ಏರಿಕೆಯಾಗಿದೆ. ಗ್ರಾಹಕ ವಹಿವಾಟಿನಲ್ಲಿನ ಹೆಚ್ಚಳದಿಂದಾಗಿ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ಕಂಪನಿ ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

ವರಮಾನವು ಶೇ 5ರಷ್ಟು ಹೆಚ್ಚಳವಾಗಿದ್ದು, ₹2.48 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಲಾಭ ಹೆಚ್ಚಳ: ರಿಲಯನ್ಸ್ ಸಮೂಹದ ರಿಲಯನ್ಸ್ ರಿಟೇಲ್ ವೆಂಚರ್ ಲಿಮಿಟೆಡ್ (ಆರ್‌ಆರ್‌ವಿಎಲ್) ಜೂನ್ ತ್ರೈಮಾಸಿಕದ ತೆರಿಗೆ ನಂತರದ ಲಾಭದ (ಪಿಎಟಿ) ಪ್ರಮಾಣದಲ್ಲಿ ಶೇ 28ರಷ್ಟು ಹೆಚ್ಚಳವಾಗಿದ್ದು, ₹3,271 ಕೋಟಿ ಗಳಿಸಿದೆ. ವರಮಾನದಲ್ಲಿ ಶೇ 11ರಷ್ಟು ಏರಿಕೆಯಾಗಿದ್ದು, ₹84,171 ಕೋಟಿ ಆಗಿದೆ ಎಂದು ತಿಳಿಸಿದೆ.

ಜಿಯೊ ಲಾಭ ಏರಿಕೆ: ಜೂನ್ ತ್ರೈಮಾಸಿಕದಲ್ಲಿ ಜಿಯೊ ಕಂಪನಿಯು ₹7,110 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 25ರಷ್ಟು ಅಧಿಕ. ವರಮಾನವು ಶೇ 19ರಷ್ಟು ಹೆಚ್ಚಳವಾಗಿದ್ದು, ₹41,054 ಕೋಟಿಯಾಗಿದೆ ಎಂದು ಕಂಪನಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಎಸ್‌ಬಿಐ: ಜಗತ್ತಿನ ಅತ್ಯುತ್ತಮ ಗ್ರಾಹಕ ಬ್ಯಾಂಕ್

ನವದೆಹಲಿ (ಪಿಟಿಐ): ಅಮೆರಿಕದ 'ಗ್ಲೋಬಲ್ ಫೈನಾನ್ಸ್' ನಿಯತಕಾಲಿಕ ನೀಡುವ 2025ನೇ ಸಾಲಿನ 'ಜಗತ್ತಿನ ಅತ್ಯುತ್ತಮ ಗ್ರಾಹಕ ಬ್ಯಾಂಕ್' ಪ್ರಶಸ್ತಿಗೆ, ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಭಾಜನವಾಗಿದೆ.

ಅಕ್ಟೋಬರ್ 18ರಂದು ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರಿಗೆ 'ಗ್ಲೋಬಲ್ ಫೈನಾನ್ಸ್' ಈ ಪ್ರಶಸ್ತಿಯನ್ನು ಪ್ರದಾನ ಮಾಡಲಿದೆ ಎಂದು ಬ್ಯಾಂಕ್ ಶುಕ್ರವಾರ ತಿಳಿಸಿದೆ.

'ಗ್ರಾಹಕರ ಅನುಭವವು ಬ್ಯಾಂಕ್‌ನ ಬೆಳವಣಿಗೆಯ ಕಾರ್ಯತಂತ್ರದ ಕೇಂದ್ರ ಬಿಂದುವಾಗಿದೆ. ಈ ಜಾಗತಿಕ ಮನ್ನಣೆಯು ತನ್ನ ಸುಮಾರು 52 ಕೋಟಿ ಗ್ರಾಹಕರಿಗೆ ಸಲ್ಲುತ್ತದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್.ಸೆಟ್ಟಿ ಹೇಳಿದ್ದಾರೆ.

ಐಒಬಿಗೆ ₹1,111 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ (ಐಒಬಿ) ನಿವ್ವಳ ಲಾಭದಲ್ಲಿ ಶೇ 76ರಷ್ಟು ಏರಿಕೆಯಾಗಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹633 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,111 ಕೋಟಿ ಲಾಭ ಗಳಿಸಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಕೋಟಕ್‌ನಿಂದ ಟೆಸ್ಲಾ ವಾಹನ ಖರೀದಿಗೆ ಸಾಲ

ನವದೆಹಲಿ (ಪಿಟಿಐ): ಕೋಟಕ್ ಸಮೂಹದ ಕೋಟಕ್ ಮಹೀಂದ್ರ ಪ್ರೈಮ್ (ಕೆಎಂಪಿಎಲ್) ಟೆಸ್ಲಾ ಕಂಪನಿಯ ವಿದ್ಯುತ್‌ಚಾಲಿತ ವಾಹನಗಳ ಖರೀದಿಗೆ ಸಾಲ ನೀಡಲಿದೆ.

'ಕೋಟಕ್ ಮಹೀಂದ್ರ ಪ್ರೈಮ್, ಭಾರತದಲ್ಲಿನ ಟೆಸ್ಲಾ ಕಂಪನಿಯ ವಾಹನಗಳಿಗೆ ಸಾಲ ನೀಡಲು ಹಣಕಾಸುದಾರನಾಗಿ ನೇಮಕಗೊಂಡ ಮೊದಲಿಗ' ಎಂದು ಕಂಪನಿ ತಿಳಿಸಿದೆ.

ಟೆಸ್ಲಾ ಇ.ವಿ ಖರೀದಿದಾರರಿಗೆ ಕೆಎಂಪಿಎಲ್ ವಿಶೇಷವಾಗಿ ಕ್ಯುರೇಟೆಡ್ ಕಾರು ಹಣಕಾಸು ನೆರವು ನೀಡಲಿದೆ. ಖರೀದಿದಾರರು ಟೆಸ್ಲಾದ ಇಂಡಿಯಾ ಪೋರ್ಟಲ್/ಮೊಬೈಲ್ ಅಪ್ಲಿಕೇಶನ್‌ನಲ್ಲಿ ಕೆಎಂಪಿಎಲ್‌ನ ಸಾಲದ ಆಯ್ಕೆಗಳನ್ನು ಪರಿಶೀಲಿಸಬಹುದಾಗಿದೆ ಎಂದು ಹೇಳಿದೆ.

ಐಟಿಆರ್–2 ಸಲ್ಲಿಕೆ ಆರಂಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳು ಮತ್ತು ಹಿಂದೂ ಅವಿಭಕ್ತ ಕುಟುಂಬಗಳು (ಎಚ್‌ಯುಎಫ್) ಐಟಿಆರ್–2 ಅನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಎಂದು ಆದಾಯ ತೆರಿಗೆ ಇಲಾಖೆ ಶುಕ್ರವಾರ ತಿಳಿಸಿದೆ.



ಇ–ಫೈಲಿಂಗ್ ಪೋರ್ಟಲ್ ಮೂಲಕ ಐಟಿಆರ್–2 ಫಾರ್ಮ್ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದೆ. ಈ ನಮೂನೆಯಡಿ ಅರ್ಹ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಬಹುದಾಗಿದೆ ಎಂದು ಇಲಾಖೆ 'ಎಕ್ಸ್'ನಲ್ಲಿ ತಿಳಿಸಿದೆ.

ಸರ್ಕಾರವು ಈಗಾಗಲೇ 2025-26ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿ ಐಟಿಆರ್ ಸಲ್ಲಿಸುವ ಗಡುವನ್ನು ಸೆಪ್ಟೆಂಬರ್ 15ರವರೆಗೆ ವಿಸ್ತರಿಸಿದೆ.

ವಿಮಾನ ಅಪಘಾತದ ಸಂತ್ರಸ್ತರಿಗಾಗಿ ಟ್ರಸ್ಟ್ ಸ್ಥಾಪನೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ಅಪಘಾತದ ಸಂತ್ರಸ್ತರಿಗಾಗಿ ಟಾಟಾ ಸನ್ಸ್ ಮತ್ತು ಟಾಟಾ ಟ್ರಸ್ಟ್ ₹500 ಕೋಟಿ ಮೊತ್ತದ ಕ್ಷೇಮಾಭಿವೃದ್ಧಿ ಟ್ರಸ್ಟ್ ಅನ್ನು ಸ್ಥಾಪನೆ ಮಾಡಿವೆ.

ಎಐ–171 ಕ್ಷೇಮಾಭಿವೃದ್ಧಿ ಟ್ರಸ್ಟ್ ಹೆಸರಿನಲ್ಲಿ ಮುಂಬೈನಲ್ಲಿ ಟ್ರಸ್ಟ್ ನೋಂದಣಿಯಾಗಿದೆ.

ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ₹1 ಕೋಟಿ ಪರಿಹಾರ ಪಾವತಿ ಸೇರಿದಂತೆ ಲೋಕೋಪಕಾರಿ ಉದ್ದೇಶಗಳಿಗಾಗಿ ಟಾಟಾ ಸನ್ಸ್ ಮತ್ತು ಟಾಟಾ ಟ್ರಸ್ಟ್‌ಗಳು ಟ್ರಸ್ಟ್‌ಗೆ ತಲಾ ₹250 ಕೋಟಿ ಕೊಡುಗೆ ನೀಡಲು ಬದ್ಧವಾಗಿವೆ ಎಂದು ಶುಕ್ರವಾರ ತಿಳಿಸಿವೆ.

ದುರಂತದಲ್ಲಿ ತೀವ್ರ ಗಾಯಗೊಂಡಿರುವವರಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುವುದು. ಅಲ್ಲದೆ, ಅಪಘಾತದಲ್ಲಿ ಹಾನಿಗೀಡಾದ ಬಿ.ಜೆ. ವೈದ್ಯಕೀಯ ಕಾಲೇಜಿನ ವಸತಿ ನಿಲಯ ಸಮುಚ್ಚಯದ ಪುನಃ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದೆ.

ಜೂನ್ 12ರಂದು ಅಹಮದಾಬಾದ್‌ನಿಂದ ಲಂಡನ್‌ಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನ, ಟೇಕಾಫ್ ಆದ ಕೂಡಲೇ ಅಪಘಾತಕ್ಕೆ ಒಳಗಾಗಿತ್ತು. ಈ ಅಪಘಾತದಲ್ಲಿ 260 ಮಂದಿ ಮೃತಪಟ್ಟಿದ್ದರು.

ರೋಸ್ನೆಫ್ಟ್ ತೈಲ ಘಟಕಕ್ಕೂ ತಟ್ಟಿದ ಬಿಸಿ

ರಷ್ಯಾದ ಮೇಲೆ ಐರೋಪ್ಯ ಒಕ್ಕೂಟ ನಿರ್ಬಂಧ

ನವದೆಹಲಿ (ಪಿಟಿಐ): ರಷ್ಯಾಕ್ಕೆ ಬಿಸಿ ಮುಟ್ಟಿಸಿರುವ ಐರೋಪ್ಯ ಒಕ್ಕೂಟವು ರಷ್ಯಾದ 'ರೋಸ್ನೆಫ್ಟ್' ತೈಲ ಸಂಸ್ಕರಣಾ ಘಟಕದ ಮೇಲೆ ನಿರ್ಬಂಧ ಹೇರಿದೆ. ರಷ್ಯಾದ ಕಚ್ಚಾತೈಲದಿಂದ ತಯಾರಿಸಿದ ಇಂಧನಗಳ ಮೇಲೆ ಹೊಸದಾಗಿ ನಿರ್ಬಂಧ ಹೇರಿ ಕ್ರಮ ಕೈಗೊಂಡಿದೆ. ಒಕ್ಕೂಟದ ಸದಸ್ಯ ರಾಷ್ಟ್ರವಾಗಿರುವ ಉಕ್ರೇನ್ ವಿರುದ್ಧ ರಷ್ಯಾ ಯುದ್ಧದಿಂದ ಹಿಂದೆ ಸರಿಯದ ಕಾರಣ ಈ ನಿರ್ಧಾರ ತೆಗೆದುಕೊಂಡಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ದರವು ಪ್ರತಿ ಬ್ಯಾರೆಲ್‌ಗೆ 60 ಡಾಲರ್‌ನಷ್ಟಿದೆ. ಭಾರತ ಸೇರಿದಂತೆ ಹಲವು ರಾಷ್ಟ್ರಗಳಿಗೆ ಕಡಿಮೆ ಬೆಲೆಗೆ ರಷ್ಯಾವು ಕಚ್ಚಾತೈಲ ಮಾರಾಟ ಮಾಡುತ್ತಿದೆ. ರಷ್ಯಾದ ಎರಡನೇ ಅತಿ ದೊಡ್ಡ ಕಚ್ಚಾತೈಲ ಖರೀದಿದಾರ ರಾಷ್ಟ್ರವಾಗಿರುವ ಭಾರತಕ್ಕೂ ದೊಡ್ಡ ಪ್ರಮಾಣದಲ್ಲಿ ಲಾಭವಾಗುತ್ತಿದೆ. ದೇಶದ ಒಟ್ಟು ಕಚ್ಚಾ ತೈಲದ ಆಮದು ಪೈಕಿ ಶೇಕಡ 40ರಷ್ಟನ್ನು ರಷ್ಯಾದಿಂದಲೇ ತರಿಸಿಕೊಳ್ಳಲಾಗುತ್ತಿದೆ.

'ನಾವು ಇದೇ ಮೊದಲ ಸಲ ಭಾರತದಲ್ಲಿರುವ 'ರೋಸ್ನೆಫ್ಟ್' ತೈಲ ಸಂಸ್ಕರಣಾ ಘಟಕದ ಮೇಲೂ ನಿರ್ಬಂಧ ವಿಧಿಸುತ್ತಿದ್ದೇವೆ' ಎಂದು ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿಯ ಮುಖ್ಯಸ್ಥ ಕಾಜಾ ಕಲ್ಲಾಸ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ನಯಾರಾ ಎನರ್ಜಿ ಲಿಮಿಟೆಡ್‌ನಲ್ಲಿ 'ರೋಸ್ನೆಫ್ಟ್' ಕಂಪನಿಯು ಶೇ 49.13ರಷ್ಟು ಪಾಲನ್ನು ಹೊಂದಿದೆ. ಗುಜರಾತ್‌ನ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿರುವ ವಡಿನಾರ್‌ನಲ್ಲಿರುವ ನಯಾರಾ ತೈಲ ಸಂಸ್ಕರಣಾ ಘಟಕದಲ್ಲಿ ವರ್ಷಕ್ಕೆ 2 ಕೋಟಿ ಟನ್‌ನಷ್ಟು ಕಚ್ಚಾ ತೈಲವನ್ನು ಸಂಸ್ಕರಣೆ ಮಾಡಲಾಗುತ್ತದೆ. ನಯಾರಾ ಸಂಸ್ಥೆಯು ದೇಶದಾದ್ಯಂತ 6,750 ಪೆಟ್ರೋಲ್ ಪಂಪ್‌ಗಳನ್ನು ಹೊಂದಿದೆ.

ಐರೋಪ್ಯ ಒಕ್ಕೂಟದ ನಿರ್ಬಂಧದಿಂದ ನಯಾರಾ ಸಂಸ್ಥೆಯು ಯುರೋಪ್‌ನ ಯಾವುದೇ ರಾಷ್ಟ್ರಗಳಿಗೆ ಪೆಟ್ರೋಲ್, ಡೀಸೆಲ್ ಅನ್ನು ರಫ್ತು ಮಾಡುವಂತಿಲ್ಲ.

ವಿದ್ಯುತ್ ಉತ್ಪಾದನೆ 113 ಗಿಗಾವಾಟ್‌ಗೆ ಹೆಚ್ಚಿಸಲು ಯೋಜನೆ: ಝಾ

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ (ಎನ್‌ಟಿಪಿಸಿ) ತನ್ನ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 2032ರ ವೇಳೆಗೆ ಪ್ರಸ್ತುತ 82 ಗಿಗಾವಾಟ್‌ಗಳಿಂದ 113 ಗಿಗಾವಾಟ್‌ಗಳಿಗೆ ಹೆಚ್ಚಿಸಲು ಯೋಜಿಸಿದೆ' ಎಂದು ಕೂಡಗಿಯ ಎನ್‌ಟಿಪಿಸಿ ಕಾರ್ಯನಿರ್ವಾಹಕ ನಿರ್ದೇಶಕ ಬಿದ್ಯಾನಂದ್ ಝಾ ಹೇಳಿದರು.

'ಒಟ್ಟು ಉತ್ಪಾದನೆಯಲ್ಲಿ 60 ಗಿಗಾವಾಟ್ ಸೌರಶಕ್ತಿ ಮತ್ತು ಪವನಶಕ್ತಿ ಸೇರಿ ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಕೂಡಗಿ ಎನ್‌ಟಿಪಿಸಿಯಲ್ಲಿ 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ದೇಶದ ಅತಿದೊಡ್ಡ ಏಕ ಹಂತದ ವಿದ್ಯುತ್ ಕೇಂದ್ರವಾಗಿದೆ. ಫಲಾನುಭವಿ ರಾಜ್ಯಗಳಾದ ಕರ್ನಾಟಕಕ್ಕೆ ಶೇ 50, ಆಂಧ್ರ ಪ್ರದೇಶಕ್ಕೆ ಶೇ 8.37, ತಮಿಳುನಾಡಿಗೆ ಶೇ 12.5, ತೆಲಂಗಾಣಕ್ಕೆ ಶೇ 9.75, ಕೇರಳ ಶೇ 4.37 ಮತ್ತು ಪಂಜಾಬ್‌ಗೆ ಶೇ 15ರಷ್ಟು ಸೇರಿ 12 ರಾಜ್ಯಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆ' ಎಂದರು.

'ಕೂಡಗಿ ಸ್ಥಾವರವು ನವೀಕರಿಸಬಹುದಾದ ಶಕ್ತಿಯ ಮೂಲಕ 3.37 ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದಿಸುತ್ತಿದೆ. ಇದರಲ್ಲಿ 2018ರಲ್ಲಿ ಕಾರ್ಯಾರಂಭ ಮಾಡಿದ ಭಾರತದ ಮೊದಲ ಹೈಬ್ರಿಡ್ ಸ್ಥಾವರದಿಂದ 2 ಮೆಗಾವಾಟ್ ಪವನ ವಿದ್ಯುತ್ ಮತ್ತು 1.37 ಮೆಗಾವಾಟ್ ಸೌರಶಕ್ತಿ ವಿದ್ಯುತ್ ಕೂಡ ಸೇರಿದೆ' ಎಂದರು.

'ಪರಿಸರ ಮಾಲಿನ್ಯವಾಗದಂತೆ ಎನ್‌ಟಿಪಿಸಿ ಸ್ಥಾವರವು ಸುಧಾರಿತ ತಂತ್ರಜ್ಞಾನಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಕರ್ನಾಟಕ ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ 1,580 ಎಕರೆಗಳಿಗೂ ಹೆಚ್ಚು ಪ್ರದೇಶದಲ್ಲಿ 9.5 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನಡೆಲಾಗಿದೆ' ಎಂದು ಹೇಳಿದರು.

ಹವಾಮಾನ ಅಪಾಯಗಳ ಬಹಿರಂಗ ಬ್ಯಾಂಕುಗಳಿಗೆ ಶೀಘ್ರವೇ ನಿಯಮ

ನವದೆಹಲಿ (ರಾಯಿಟರ್ಸ್): ಹವಾಮಾನ ಬದಲಾವಣೆಯಿಂದ ಉಂಟಾಗುವ ಆರ್ಥಿಕ ಅಪಾಯಗಳನ್ನು ಬಹಿರಂಗಪಡಿಸಲು ಮತ್ತು ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಮಗಳನ್ನು ಅಂತಿಗೊಳಿಸುವ ಹಂತದಲ್ಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅಮೆರಿಕದಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದ ಬಳಿಕ ಜೆ.ಪಿ.ಮಾರ್ಗನ್, ಸಿಟಿ ಬ್ಯಾಂಕ್, ಮಾರ್ಗನ್ ಸ್ಟಾನ್ಲಿ ಮತ್ತು ಎಚ್‌ಎಸ್‌ಬಿಸಿ ಸೇರಿದಂತೆ ಹಲವು ಪ್ರತಿಷ್ಠಿತ ಜಾಗತಿಕ ಬ್ಯಾಂಕುಗಳು ಹವಾಮಾನ ಬದ್ಧತೆಗಳನ್ನು ಕಡಿಮೆಗೊಳಿಸಲು ನಿರ್ಧರಿಸಿವೆ. ಅದರ ಬೆನ್ನಲ್ಲೇ ಆರ್‌ಬಿಐ ಈ ನಿಟ್ಟಿನಲ್ಲಿ ಚಿಂತನೆ ನಡೆಸಿದೆ.

ನಗದು ವಹಿವಾಟಿಗೂ ಜಿಎಸ್‌ಟಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗದು ಮೂಲಕವೇ ವ್ಯಾಪಾರ ನಡೆಸುತ್ತಿದ್ದು, ವಾರ್ಷಿಕ ವಹಿವಾಟಿನ ಮೊತ್ತ ₹40 ಲಕ್ಷ ದಾಟಿದರೆ ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಮಾಡಿಸಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಹೇಳಿದೆ.

ಯುಪಿಐ ವಹಿವಾಟು ವಾರ್ಷಿಕ ₹40 ಲಕ್ಷ ದಾಟಿದ ಬೇಕರಿ, ಹೋಟೆಲ್, ಬೀಡಾ ಅಂಗಡಿ ಮತ್ತು ಟೀ ಅಂಗಡಿ ಮಾಲೀಕರಿಗೆ ಇಲಾಖೆಯು ನೋಟಿಸ್ ನೀಡಿತ್ತು. ಜಿಎಸ್‌ಟಿಗೆ ನೋಂದಣಿ ಮಾಡಿಸಿ ಮತ್ತು ಜಿಎಸ್‌ಟಿ ಪಾವತಿಸಿ ಎಂದು ಸೂಚಿಸಿತ್ತು. ಆನಂತರ ಹಲವು ವ್ಯಾಪಾರಿಗಳು ಯುಪಿಐ ಬಳಕೆಯನ್ನು ನಿಲ್ಲಿಸಿ, ನಗದು ಮೂಲಕ ವಹಿವಾಟು ನಡೆಸುತ್ತಿದ್ದಾರೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಇಲಾಖೆಯು, 'ಈಗಾಗಲೇ ನೋಟಿಸ್ ಪಡೆದಿದ್ದು, ಈಗ ಯುಪಿಐ ಬಳಕೆ ನಿಲ್ಲಿಸಿದರೆ ಜಿಎಸ್‌ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರು ಜಿಎಸ್‌ಟಿಗೆ ನೋಂದಣಿ ಮಾಡಿಸಲೇಬೇಕು ಮತ್ತು ತೆರಿಗೆ ಪಾವತಿಸಲೇಬೇಕು. ಇಲ್ಲದಿದ್ದಲ್ಲಿ ಅವರ ನಗದು ವಹಿವಾಟಿನ ವಿವರಗಳನ್ನೂ ಪಡೆದು ಜಿಎಸ್‌ಟಿ ವಿಧಿಸಲಾಗುತ್ತದೆ' ಎಂದು ತಿಳಿಸಿದೆ.

'ನಗದು, ಯುಪಿಐ, ಪಿಒಎಸ್ ಯಂತ್ರ, ಚೆಕ್, ಆನ್‌ಲೈನ್ ಬ್ಯಾಂಕಿಂಗ್ ಸೇರಿ ಯಾವುದೇ ರೀತಿಯಲ್ಲಿ ವಹಿವಾಟು ನಡೆಸಿದರೂ ಜಿಎಸ್‌ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಾರ್ಷಿಕ ವಹಿವಾಟಿನ ಮಿತಿ ಮುಟ್ಟಿದವರು ಜಿಎಸ್‌ಟಿಗೆ ನೋಂದಣಿ ಮಾಡಿಸಲೇಬೇಕು. ಇಲ್ಲದಿದ್ದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದೆ.

'₹40 ಲಕ್ಷದ ವಹಿವಾಟು ನಡೆಸಿದವರೆಲ್ಲರೂ ದೊಡ್ಡ ಮೊತ್ತದ ಜಿಎಸ್‌ಟಿ ಪಾವತಿಸಲೇಬೇಕು ಎಂದೇನಿಲ್ಲ. ಎಲ್ಲ ಸರಕು ಮತ್ತು ಸೇವೆಗಳಿಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲ. ವ್ಯಾಪಾರಿಗಳು ನೋಂದಣಿ ಮಾಡಿಸಿ, ವ್ಯಾಪಾರದ ಸ್ವರೂಪವನ್ನು ವಿವರಿಸಬೇಕು. ಆಗ ಅವರಿಗೆ ಎಷ್ಟು ಜಿಎಸ್‌ಟಿ ಅನ್ವಯವಾಗುತ್ತದೆ ಎಂದು ಮಾಹಿತಿ ನೀಡುತ್ತೇವೆ' ಎಂದಿದೆ.

ಪ್ರತಿ ಕ್ಷೇತ್ರಕ್ಕೆ ₹50 ಕೋಟಿ

ಒಂದನೇ ಪುಟದಿಂದ..

ಅದರಲ್ಲೂ ಶೇ 50ರಷ್ಟು ಅನುದಾನವನ್ನು ಲೋಕೋಪಯೋಗಿ ಕಾಮಗಾರಿಗಳಿಗೆ, ಶೇ 25ರಷ್ಟು ಗ್ರಾಮೀಣ ಮೂಲಸೌಕರ್ಯ ಕಾಮಗಾರಿಗಳಿಗೆ ವಿನಿಯೋಗಿಸಲು ಸೂಚಿಸಲಾಗಿದೆ.

ವಿವೇಚನಾ ಕೋಟಾದಲ್ಲೂ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಒದಗಿಸುವುದು, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ರಸ್ತೆಗಳ ನಿರ್ಮಾಣ, ಜನರ ದೈನಂದಿನ ಕಾರ್ಯಗಳಿಗೆ ಅಗತ್ಯವಾದ ಮೂಲಸೌಕರ್ಯ ಅನುಷ್ಠಾನಗೊಳಿಸಲು ಅನುದಾನ ಬಳಕೆ ಮಾಡಬೇಕು ಎಂದು ಷರತ್ತು ವಿಧಿಸಲಾಗಿದೆ.

₹10 ಕೋಟಿವರೆಗಿನ ಕಾಮಗಾರಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಆಡಳಿತಾತ್ಮಕ ಅನುಮೋದನೆ ನೀಡಬೇಕು. ₹10 ಕೋಟಿಗೂ ಅಧಿಕ ಮೊತ್ತಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕು.

> ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ತಲಾ ₹50 ಕೋಟಿ, ಬಿಜೆಪಿ–ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ₹25 ಕೋಟಿ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಈ ತಾರತಮ್ಯ ಏಕೆ?
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ಕಾಮಗಾರಿಗಳ ಕನಿಷ್ಠ ಮೊತ್ತ ₹1 ಕೋಟಿ, ಗ್ರಾಮೀಣಾಭಿವೃದ್ಧಿ ಮತ್ತು ಇತರೆ ಇಲಾಖೆಗಳ ಕಾಮಗಾರಿಗಳ ಕನಿಷ್ಠ ಮೊತ್ತ ₹20 ಲಕ್ಷಕ್ಕೆ ನಿಗದಿ ಮಾಡಲಾಗಿದೆ.

ಭೂಸ್ವಾಧೀನ ಕಾಮಗಾರಿ, ಆಡಳಿತಾತ್ಮಕ ವೆಚ್ಚಗಳಿಗೆ ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಬಳಕೆ ಮಾಡಿಕೊಳ್ಳುವುದಕ್ಕೆ ನಿರ್ಬಂಧ ವಿಧಿಸಲಾಗಿದೆ.

ನೆಲದ ಮೇಲೆ ಕುಳಿತು ಜೆಡಿಎಸ್ ಶಾಸಕಿ ಧರಣಿ

ಒಂದನೇ ಪುಟದಿಂದ..

ಶುಕ್ರವಾರ ಇಲ್ಲಿ ನಡೆದ ಕೆಡಿಪಿ ಸಭೆಯಲ್ಲೇ ಧರಣಿ ಕುಳಿತ ಅವರು, 'ಕ್ಷೇತ್ರದ ಪ್ರಗತಿಗೆ ಅನುದಾನ ಕೊಡುತ್ತಿಲ್ಲ. 33 ಪಿಡಿಒಗಳ ಅಮಾನತು ಮಾಡಲಾಗಿದೆ. ಈಗ 6 ಪಿಡಿಒಗಳಷ್ಟೇ ಕೆಲಸ ಮಾಡುತ್ತಿದ್ದಾರೆ. 40 ಕಿ.ಮೀ ಅಂತರದಲ್ಲಿ ಎರಡು ಟೋಲ್ ಇವೆ. ಇದನ್ನು ಪ್ರಶ್ನಿಸಿದ ಹೋರಾಟಗಾರರ ಮೇಲೇ ದೂರು ದಾಖಲಿಸಲಾಗಿದೆ. ಪೊಲೀಸ್ ದಬ್ಬಾಳಿಕೆ ಹೆಚ್ಚಿದೆ' ಎಂದು ದೂರಿದರು. 'ಟೋಲ್ ಕೇಂದ್ರ ರದ್ದುಪಡಿಸಿ' ಎಂದು ಹೇಳಿದರು.

'ಅಕ್ರಮವಾಗಿ ಅಕ್ಕಿ ಸಾಗಾಟ, ಅಕ್ರಮ ನಿವೇಶನಗಳ ಮಾರಾಟ ಮುಂತಾದ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ. 'ಪ್ರಜಾವಾಣಿ'ಯಲ್ಲಿ ವರದಿಗಳು ಬಂದರೂ ಏಕೆ ತನಿಖೆ ನಡೆಸುತ್ತಿಲ್ಲ? ಶಾಸಕಿಯಿಂದ ಜೀವಭಯವಿದೆ ಎಂದು 60 ಪೊಲೀಸರು ಪತ್ರಕೊಟ್ಟರೆ ಮೂರು ದಿನಗಳಲ್ಲೇ ತನಿಖೆ ನಡೆಯುತ್ತದೆ. ಬೇರೆ ಅಕ್ರಮಗಳ ತನಿಖೆ ನಡೆಸಲು ತಾರತಮ್ಯ ಏಕೆ' ಎಂದು ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು, 'ಲೋಕೋಪಯೋಗಿ ಸಚಿವರೊಂದಿಗೆ ಸಭೆ ನಡೆಸುವವರೆಗೂ ತಾತ್ಕಾಲಿಕವಾಗಿ ಟೋಲ್ ಸಂಗ್ರಹ ತಡೆಯಲು ಕ್ರಮಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು. ನಂತರ ಕರೆಮ್ಮ ಧರಣಿ ಅಂತ್ಯಗೊಳಿಸಿದರು.

ಸಚಿವ ಶರಣಪ್ರಕಾಶ ವಿರುದ್ಧ 'ಕೈ' ಶಾಸಕರ ಆಕ್ರೋಶ

ಒಂದನೇ ಪುಟದಿಂದ...

ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ, ಎ.ವಸಂತಕುಮಾರ, ಶರಣಗೌಡ ಪಾಟೀಲ ಬಯ್ಯಾಪುರ ಅವರೂ ತುರುವಿಹಾಳ ಅವರ ಆಕ್ರೋಶಕ್ಕೆ ದನಿಗೂಡಿಸಿದರು.

ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರು ಸಚಿವರ ಬೆಂಬಲಕ್ಕೆ ನಿಂತರು. ದದ್ದಲ್ ಒಂದು ಹಂತದಲ್ಲಿ ಏಕವಚನ ಬಳಸಿದಾಗ ಬಸನಗೌಡ ಬಾದರ್ಲಿ ಅವರೂ ಏಕವಚನದಲ್ಲೇ ತರಾಟೆಗೆ ತೆಗೆದುಕೊಂಡರು. ಸ್ವಪಕ್ಷದ ಶಾಸಕರೇ ಸಭೆಯಲ್ಲಿ ಗರಂ ಆದ್ದರಿಂದ ಸಚಿವ ಶರಣಪ್ರಕಾಶ ಪಾಟೀಲ ತೀವ್ರ ಮುಜುಗರಕ್ಕೆ ಒಳಗಾಗಬೇಕಾಯಿತು.

> ಕೆಡಿಪಿ ಸಭೆಯಲ್ಲಿ ರಮ್ಮಿ ಆಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸೂಚನೆ ನೀಡಿದ್ದೇನೆ
> **ಈಶ್ವರ ಬಿ. ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಸಭೆಯಲ್ಲಿ ರಮ್ಮಿ ಆಡಿದ ಅಧಿಕಾರಿ

ಕೆಡಿಪಿ ಸಭೆಯಲ್ಲಿ ಕಾಂಗ್ರೆಸ್ ಶಾಸಕರು ಸಚಿವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರೆ, ಇತ್ತ ಪ್ರಾದೇಶಿಕ ಅರಣ್ಯ ಇಲಾಖೆಯ ಡಿಸಿಎಫ್ ಪ್ರವೀಣ ಅವರು ಬಹಳ ಹೊತ್ತಿನವರೆಗೂ ಮೊಬೈಲ್‌ನಲ್ಲಿ 'ರಮ್ಮಿ' ಆಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.



ಕೆಡಿಪಿ ಸಭೆಯಲ್ಲೇ ಅರಣ್ಯ ಇಲಾಖೆಯ ಡಿಸಿಎಫ್ ಪ್ರವೀಣ ಅವರು ಮೊಬೈಲ್‌ನಲ್ಲಿ ರಮ್ಮಿ ಆಡಿದರು

'ರಮ್ಮಿ' ಆಡಿದ ವಿಷಯ ಸಚಿವರ ಗಮನಕ್ಕೆ ಬರುತ್ತಿದ್ದಂತೆಯೇ, ಸಭೆಯಿಂದ ಡಿಸಿಎಫ್ ಅವರನ್ನು ಹೊರಗೆ ಕಳುಹಿಸಿದರು. ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆಯುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದರು.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 501 ಅಂಶ ಇಳಿಕೆಯಾಗಿ, 81,757ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 143 ಅಂಶ ಕಡಿಮೆಯಾಗಿ, 24,968ಕ್ಕೆ ಅಂತ್ಯಗೊಂಡಿದೆ.

ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಎಸ್‌ಬಿಐ, ಭಾರತ್ ಎಲೆಕ್ಟ್ರಾನಿಕ್ಸ್, ಭಾರ್ತಿ ಏರ್‌ಟೆಲ್, ಟೈಟನ್ ಮತ್ತು ಎಟರ್ನಲ್ ಕಂಪನಿಗಳ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಹಳೇ ಮಾದರಿಯಲ್ಲಿ ಹೊಸ ಕಥೆ 'ಎಕ್ಕ'

ನಾವು ನೋಡಿದ ಸಿನಿಮಾ

ಎಕ್ಕ (ಕನ್ನಡ)

- ನಿರ್ಮಾಣ: ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್
- ನಿರ್ದೇಶನ: ರೋಹಿತ್ ಪದಕಿ
- ತಾರಾಗಣ: ಯುವ ರಾಜ್‌ಕುಮಾರ್, ಸಂಜನಾ ಆನಂದ್, ಸಂಪದಾ, ಅತುಲ್ ಕುಲಕರ್ಣಿ, ಆದಿತ್ಯ, ರಾಹುಲ್ ದೇವ್ ಶೆಟ್ಟಿ, ಶೃತಿ, ಪೂರ್ಣಚಂದ್ರ ಮೈಸೂರು, ಹರಿಣಿ, ಡಾ.ಸೂರಿ ಮತ್ತಿತರರು.


ಯುವ, ಸಂಜನಾ ಆನಂದ್

ಪುನೀತ್ ರಾಜ್‌ಕುಮಾರ್ ನಟನೆಯ 'ಜಾಕಿ' ಸಿನಿಮಾದ ಆರಂಭಿಕ ಶೀರ್ಷಿಕೆ 'ಎಕ್ಕ' ಆಗಿತ್ತು. ಈಗಿನ 'ಎಕ್ಕ' ಹೊಸ ಕಥೆಯೊಂದಿಗೆ ಹಳೇ ಮಾದರಿಯಲ್ಲೇ ಬಂದಿದೆ. ಯಾವುದೋ ಒಂದು ಕಾರಣಕ್ಕೆ ಹುಟ್ಟಿದ ಊರು ಬಿಟ್ಟು ನಗರ ಸೇರುವ ನಾಯಕ ಮುಂದೆ ಯಾವುದೋ ಕಾರಣಕ್ಕೆ ಭೂಗತ ಜಗತ್ತಿಗೆ ಹೆಜ್ಜೆ ಇಡುವ, ತಾಯಿ ಪ್ರೀತಿ ಅರಸುವ ಹಲವು ಕಥೆಗಳು ತೆರೆ ಮೇಲೆ ಬಂದಿವೆ. 'ಜೋಗಿ' ಈ ಪೈಕಿ ಹಿಟ್ ಸಾಲಿಗೆ ಸೇರಿದ ಚಿತ್ರ. ಇದೇ ಮಾದರಿಯಲ್ಲಿ ಭಿನ್ನವಾದ ಹೊಸ ಕಥೆಯೊಂದನ್ನು ಇಟ್ಟುಕೊಂಡು ರೋಹಿತ್ ಪದಕಿ 'ಎಕ್ಕ' ಹೆಣೆದಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ಅಂಕ ಗಿಟ್ಟಿಸಿಕೊಳ್ಳುವ ಈ ಕಥೆ ಕ್ಲೈಮ್ಯಾಕ್ಸ್‌ನಲ್ಲಿ ಕೊಂಚ ಎಡವಿದೆ.

'ಮುತ್ತು'(ಯುವ ರಾಜ್‌ಕುಮಾರ್) ಪಾರ್ವತಿಪುರದ 'ರತ್ನ'ನ(ಶೃತಿ) ಪುತ್ರ. ತಾಯಿಯನ್ನು 'ರತ್ನ' ಎಂದೇ ಕರೆಯುವಷ್ಟು ಸಲುಗೆ. ಮಗುವಿನಂತೆ ಬೆಳೆದ ಈತ ಕ್ಯಾಬ್ ಡ್ರೈವರ್. ವೃತ್ತಿಯಿಂದ ಬಿಡುವಾದಾಗ ಇಸ್ಪಿಟ್ ಆಟದ ಹವ್ಯಾಸ. ತಾಯಿ, ಗೆಳೆಯರು ಹಾಗೂ ಊರು ಬಿಟ್ಟು ಬೆಂಗಳೂರಿಗೆ ಹೋಗಲೊಲ್ಲದ ಮನಸ್ಸು ಈತನದು. ಇಂತಹ ಸಂದರ್ಭದಲ್ಲಿ ಸ್ನೇಹಿತನೋರ್ವನ ಕಾರಣಕ್ಕೆ ಊರು ಬಿಡುವ ಸಂದರ್ಭ ಬರುತ್ತದೆ. ಬೆಂಗಳೂರಿಗೆ ಬಂದು ಕ್ಯಾಬ್ ಡ್ರೈವರ್ ವೃತ್ತಿಯನ್ನು ಮುಂದುವರಿಸುವ 'ಮುತ್ತು'ವಿಗೆ ಹೆಜ್ಜೆ ಇಟ್ಟ ಕೂಡಲೇ 'ನಂದಿನಿ'(ಸಂಜನಾ ಆನಂದ್) ಜೊತೆ ಪ್ರೇಮ. 'ಮುತ್ತು' ಕೆಲಸ ನಿರ್ವಹಿಸುತ್ತಿರುವಾಗಲೇ ನಡೆದ ಘಟನೆಯೊಂದು ಕಥೆಗೆ ತಿರುವು ನೀಡುತ್ತದೆ. ಮಗುವಾಗಿದ್ದ 'ಮುತ್ತು' ಕ್ಲೈಮ್ಯಾಕ್ಸ್ ತಲುಪುತ್ತಾ ಪರಿಸ್ಥಿತಿಯಿಂದಾಗಿ ಮೃಗವಾಗುವ ಮತ್ತೆ ಕಥಾಂತ್ಯದಲ್ಲಿ ಮಗುವಾಗುವ ಕಥೆಯೇ 'ಎಕ್ಕ'.

ಕ್ಲೈಮ್ಯಾಕ್ಸ್‌ನಿಂದ ಕಥೆ ಆರಂಭಿಸುತ್ತಾ ನಾಯಕನ ಹಿನ್ನೆಲೆಯ ವಿವರಣೆಗೆ ಇಳಿಯುವ ಶೈಲಿಯಲ್ಲಿ ಚಿತ್ರವಿದೆ. 'ರತ್ನನ್‌ಪ್ರಪಂಚ'ದಲ್ಲಿ ತಾಯಿ–ಮಗನ ನಡುವೆ ಒಂದು ಗಾಢವಾದ ಭಾವನಾತ್ಮಕ ಕಥೆ ಹೆಣೆದಿದ್ದ ರೋಹಿತ್, ಇಲ್ಲೂ ಆ ಅಂಶವನ್ನು ಚೆನ್ನಾಗಿಯೇ ಬಳಸಿಕೊಂಡಿದ್ದಾರೆ. ಜೊತೆಗೆ 'ಮುತ್ತು ಹಾಗೂ ಪಮ್ಮಿ'ಯ ದೃಶ್ಯಗಳನ್ನೂ ಅಷ್ಟೇ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ಹಲವು ದೃಶ್ಯಗಳಲ್ಲಿ ಪುನೀತ್ ಅವರ ಹಾವಭಾವವನ್ನು ಅನುಕರಿಸುವ ಯುವ 'ಜಾಕಿ'ಯ ನೆನಪುಗಳನ್ನು ಹರಿಸುತ್ತಾರೆ. ಈ ಸಿನಿಮಾ ಸಂಭಾಷಣೆ ದೃಷ್ಟಿಯಿಂದ ಗೆದ್ದಿದೆ. ಪಾತ್ರಗಳ ಸಂಭಾಷಣೆಯ ಬರವಣಿಗೆ ಚೆನ್ನಾಗಿದೆ. 'ಬ್ಯಾಂಗಲ್ ಬಂಗಾರಿ' ಹಾಗೂ 'ಎಕ್ಕ ಮಾರ್..' ಹಾಡು ಚಿತ್ರಕಥೆಗೆ ಇಂಬು. ಹಳೆ ಮಾದರಿಯಲ್ಲೇ ಸಿನಿಮಾವಿರುವ ಕಾರಣ ದೃಶ್ಯಗಳನ್ನು ಊಹಿಸಬಹುದಾಗಿದೆ.

ನಟನೆಯಲ್ಲಿ ಯುವ ರಾಜ್‌ಕುಮಾರ್ ಮತ್ತಷ್ಟು ಪಳಗಿದ್ದಾರೆ. ಡಾನ್ಸ್, ಭಾವನಾತ್ಮಕ ದೃಶ್ಯಗಳಲ್ಲಿ, ಫೈಟ್ಸ್‌ಗಳಲ್ಲಿ ಅವರ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಸಂಜನಾ ಆನಂದ್ ಪಾತ್ರ ಹಠಾತ್ ಸ್ಥಗಿತವಾಗುತ್ತದೆ. ಸಂಭಾಷಣೆ ಹಾಗೂ ಭಾಷಾಶೈಲಿಯಿಂದ ಗಮನ ಸೆಳೆಯುವ ಈ ಪಾತ್ರದ ಬರವಣಿಗೆ ಇನ್ನಷ್ಟು ಗಟ್ಟಿಯಾಗಿರಬೇಕಿತ್ತು. ಸಂಪದಾ ತಮ್ಮ ಪಾತ್ರಕ್ಕೆ ಪೂರ್ಣ ನ್ಯಾಯ ಒದಗಿಸಿದ್ದಾರೆ. ಪೂರ್ಣಚಂದ್ರ ಮೈಸೂರು, ಹರಿಣಿ ಹಾಗೂ ಸೂರಿ ಅವರೂ ತಮ್ಮ ಪಾತ್ರವನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಪೊಲೀಸ್ ಅಧಿಕಾರಿಯಾಗಿ ಆದಿತ್ಯ ಪಾತ್ರದ ಬರವಣಿಗೆ ಮನರಂಜನಾತ್ಮಕವಾಗಿದೆ. ಆ ಪಾತ್ರವನ್ನು ಅಷ್ಟೇ ಚೆನ್ನಾಗಿ ಮಾಡಿದ್ದಾರೆ ಆದಿತ್ಯ.

ಕ್ಲೈಮ್ಯಾಕ್ಸ್ ದೃಶ್ಯಗಳ ಕಟ್ಟುವಿಕೆಯಲ್ಲಿ ಇನ್ನಷ್ಟು ಕೆಲಸವಾಗಬೇಕಿತ್ತು. ಕಥೆಯನ್ನು ಇಲ್ಲಿ ಹಠಾತ್ ಆಗಿ ಕೊನೆಗೊಳಿಸಲಾಗಿದೆ. 'ಜಾಕಿ' ಮಾದರಿಯ ದೃಶ್ಯವನ್ನು ರಿಕ್ರಿಯೇಟ್ ಮಾಡುವ ಸಂದರ್ಭದಲ್ಲಿ ಚಿತ್ರಕಥೆ ಇನ್ನಷ್ಟು ಬಲವಾಗಿರಬೇಕಿತ್ತು. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ಸಿನಿಮಾಗೆ ಹೊಸ ರೂಪ ನೀಡಿವೆ.

-ಅಭಿಲಾಷ್ ಪಿ.ಎಸ್.

ಇದು ನೋಡಬಹುದಾದ ಚಿತ್ರ

ಸಿರಿವಂತ ಸಿನಿಮಾದಲ್ಲಿ ಕಥೆಯೇ ಬಡವ


ಕಿರೀಟಿ, ಶ್ರೀಲೀಲಾ

ನಾವು ನೋಡಿದ ಸಿನಿಮಾ

ಜೂನಿಯರ್

- ನಿರ್ಮಾಣ: ಸಾಯಿ ಕೊರಪತಿ
- ನಿರ್ದೇಶನ: ರಾಧಾಕೃಷ್ಣ ರೆಡ್ಡಿ
- ತಾರಾಗಣ: ಕಿರೀಟಿ, ಶ್ರೀಲೀಲಾ, ರವಿಚಂದ್ರನ್, ಜೆನಿಲಿಯಾ

ಆ್ಯಕ್ಷನ್ ಇದೆ, ಉತ್ಸಾಹ ತುಂಬುವ ಹಾಡು, ನೃತ್ಯಗಳಿವೆ. ಪಾತ್ರವರ್ಗ ಜೋರಾಗಿದೆ. ಪ್ರತಿ ಫ್ರೇಮ್‌ನಲ್ಲಿಯೂ ಅದ್ದೂರಿತನ ಎದ್ದು ಕಾಣುತ್ತದೆ. ಇವೆಲ್ಲದರ ನಡುವೆ ಸಿದ್ಧಸೂತ್ರಗಳಿಂದ ಕೂಡಿದ ಕಥೆ ಬಡವಾಗಿದೆ. ಗಣಿ ಉದ್ಯಮಿ, ಶಾಸಕ ಜನಾರ್ದನ ರೆಡ್ಡಿ ಪುತ್ರ ಕಿರೀಟಿಯನ್ನು ಮಾಸ್ ಹೀರೊ ಆಗಿ ಪರಿಚಯಿಸಲೆಂದೇ ಸಿದ್ಧಗೊಂಡ ಸಿನಿಮಾವಿದು ಎಂಬುದು ಚಿತ್ರ ನೋಡುವಾಗ ಸಾಕಷ್ಟು ಕಡೆ ಭಾಸವಾಗುತ್ತದೆ. ಈಗಷ್ಟೇ ಚಿತ್ರರಂಗಕ್ಕೆ ಕಾಲಿಟ್ಟಿರುವ ಕಿರೀಟಿಗೆ ದೊಡ್ಡ ಸ್ಟಾರ್ ನಟರಿಗೆ ನೀಡಿರುವ ಬಿಲ್ಡಪ್ ನೀಡಿರುವುದು ಸಿನಿಮಾವನ್ನು ಸಾಕಷ್ಟು ಕಡೆ ನಾಟಕೀಯ ಎನ್ನಿಸುವಂತೆ ಮಾಡುತ್ತದೆ.

ಕಾಲೇಜಿನಲ್ಲಿ, ಉದ್ಯೋಗದಲ್ಲಿ ಜೂನಿಯರ್ ಆಗಿದ್ದ ನಾಯಕ ಅಭಿ, ಬುದ್ಧಿ ಬಳಸಿ ಎದುರಾಳಿಗಳನ್ನು ಮಣಿಸುವುದು ಚಿತ್ರದ ಒಂದೆಳೆ ಕಥೆ. ಹುಟ್ಟುತ್ತಲೇ ಅಮ್ಮನನ್ನು ಕಳೆದುಕೊಳ್ಳುವ ನಾಯಕ ಅಪ್ಪನ ಆಶ್ರಯದಲ್ಲೇ ಬೆಳೆಯುತ್ತಾನೆ. ಅಪ್ಪನ ಅತಿಯಾದ ಪ್ರೀತಿ ಮಗನಿಗೆ ಕಿರಿಕಿರಿಯನ್ನುಂಟು ಮಾಡುತ್ತದೆ. ಹೀಗಾಗಿ ಕಾಲೇಜಿನ ಸಮಯದಲ್ಲಿ ಮನೆಯಿಂದ, ಅಪ್ಪನಿಂದ ದೂರ ಉಳಿಯಲು ನಿರ್ಧರಿಸುತ್ತಾನೆ. ತಾನು ಮಾಡುವ ಎಲ್ಲ ಕೆಲಸಗಳಲ್ಲಿಯೂ ತನ್ನ ಮೊದಲ ಅನುಭವ ನೆನಪಿನಲ್ಲಿ ಉಳಿಯುವಂತೆ ಇರಬೇಕು ಎಂಬುದು ಆತನ ಬಯಕೆ. ಅದಕ್ಕಾಗಿ ಆತ ಕಾಲೇಜಿನಲ್ಲಿ ಮಾಡುವ ಒಂದಷ್ಟು ಚೇಷ್ಟೆಗಳೇ ಚಿತ್ರದ ಮೊದಲಾರ್ಧ.

ಕಾಲೇಜು, ಹಾಡು, ಆ್ಯಕ್ಷನ್, ಗೆಳೆಯರ ಬಳಗ, ತಮಾಷೆಯೊಂದಿಗೆ ಮೊದಲಾರ್ಧ ಸಾಗುತ್ತದೆ. ದೇವಿಶ್ರೀ ಪ್ರಸಾದ್ ಸಂಗೀತ ಹಾಗೂ ನೃತ್ಯ ಸಂಯೋಜನೆ ಚಿತ್ರದ ಹೈಲೈಟ್. ಚಿತ್ರದ ಎಲ್ಲ ನೃತ್ಯಗಳು ಸಾಕಷ್ಟು ಎನರ್ಜಿಯಿಂದ ಕೂಡಿವೆ. ತಾವೊಬ್ಬ ಉತ್ತಮ ನೃತ್ಯಗಾರ ಎಂಬುದನ್ನು ಕಿರೀಟಿ ಮೊದಲ ಯತ್ನದಲ್ಲಿಯೇ ಸಾಬೀತುಪಡಿಸಿದ್ದಾರೆ. ಜತೆಗೆ ಛಾಯಾಚಿತ್ರಗ್ರಾಹಕ ಸೆಂಥಿಲ್ ಕುಮಾರ್ ಪ್ರತಿ ದೃಶ್ಯವನ್ನು ವರ್ಣಮಯವಾಗಿಸಿದ್ದಾರೆ. ಈ ಪಯಣದಲ್ಲಿ ಅಭಿಗೆ ನಾಯಕಿ ಸಿಗುತ್ತಾಳೆ. ಅಲ್ಲಿಂದ ಸಿದ್ಧಸೂತ್ರದ ಕಥೆಗೆ ಪ್ರೇಮಕಥೆಯೂ ಸೇರಿಕೊಳ್ಳುತ್ತದೆ. ಇಲ್ಲಿ ನಡೆಯುವ ಹಾಡು, ಹೊಡೆದಾಟ ಯಾವುದಕ್ಕೂ ಲಾಜಿಕ್ ಇರುವುದಿಲ್ಲ. ಕಥೆಯಲ್ಲಿ ಗಟ್ಟಿತನವೇ ಇಲ್ಲದ ಕಾರಣ 'ಇದೇ' ಚಿತ್ರದ ಮೊದಲಾರ್ಧದ ಕಥೆ ಎನ್ನಲು ಸಾಧ್ಯವಿಲ್ಲ. ಅಭಿಯ ಕಾಲೇಜು ಮುಗಿದು ಆತನ ಕೆಲಸ ಮಾಡುವ ಕಚೇರಿಗೆ ಕಥೆ ವರ್ಗಾವಣೆಯಾಗುತ್ತದೆ. ಅಲ್ಲಿಂದ ಕಥೆ ಬೇರೆಯೇ ದಿಕ್ಕಿಗೆ ಹೊರಳುತ್ತದೆ.

ಅಪ್ಪ–ಮಗನ ಸಂಬಂಧ, ಅಕ್ಕ–ತಮ್ಮನ ಬಾಂಧವ್ಯ, ದ್ವೇಷದೊಂದಿಗೆ ಚಿತ್ರದ ದ್ವಿತೀಯಾರ್ಧ ಪ್ರಾರಂಭವಾಗುತ್ತದೆ. ಕಚೇರಿ ರಾಜಕೀಯ, ಖಳನಾಯಕನೊಂದಿಗೆ ಹೊಡೆದಾಟ, ಜತೆಗೆ ಒಂದಷ್ಟು ಭಾವನಾತ್ಮಕ ಸನ್ನಿವೇಶಗಳು ಈ ಭಾಗದಲ್ಲಿವೆ. ಅಭಿಯ ಗೆಳೆಯರ ಬಳಗ ಅಲ್ಲಲ್ಲಿ ನಗಿಸುವ ಕೆಲಸ ಮಾಡುತ್ತದೆ. ಸಾಕಷ್ಟು ಕಡೆ ಕಥೆಗೆ ಅಗತ್ಯವೇ ಇಲ್ಲದ ಅದ್ದೂರಿತನವಿದೆ. ಕಥೆಗೆ ಪಂಚತಾರಾ ಹೋಟೆಲ್‌ನಂತೆ ಭಾಸವಾಗುವ ಐಷಾರಾಮಿ ಕಚೇರಿ ಬೇಕಿರಲಿಲ್ಲ. ಆ ಐಷಾರಾಮಿತನದಿಂದಾಗಿಯೇ ಅಲ್ಲಿ ನಡೆಯುವ ಸನ್ನಿವೇಶಗಳು ಜಾಳು ಎನ್ನಿಸುತ್ತವೆ. ಇಂಥ ಸಾಕಷ್ಟು ದೃಶ್ಯಗಳು ಚಿತ್ರದುದ್ದಕ್ಕೂ ಕಾಣಸಿಗುತ್ತವೆ.

ಕಿರೀಟಿ ನಟನೆಯಲ್ಲಿ ಪಳಗಬೇಕು. ವಿಶೇಷವಾಗಿ ಭಾವನಾತ್ಮಕ ದೃಶ್ಯಗಳಲ್ಲಿ ನಟನೆ ಗಟ್ಟಿಯಾಗಬೇಕಿತ್ತು. ಮಾಸ್ ದೃಶ್ಯಗಳಲ್ಲಿ ಆ ಸನ್ನಿವೇಶಕ್ಕೆ ತೀರ ಎಳೆಯ ಹುಡುಗ ಎನ್ನಿಸುತ್ತಾರೆ. ನಾಯಕನ ಅಪ್ಪನಾಗಿ ರವಿಚಂದ್ರನ್ ಜೀವಿಸಿದ್ದಾರೆ. ಶ್ರೀಲೀಲಾ ಮುದ್ದಾಗಿ ಕಾಣುತ್ತಾರೆ. ಆದರೆ ಅವರ ಪಾತ್ರವನ್ನು ಗ್ಲಾಮರ್‌ಗೆ ಸೀಮಿತಗೊಳಿಸಲಾಗಿದೆ. ಹೀಗಾಗಿ ಅವರ ನಟನೆಗೆ ಹೆಚ್ಚು ಜಾಗ ಸಿಕ್ಕಿಲ್ಲ. ಕಚೇರಿಯಲ್ಲಿನ ಸಿಇಒ ಆಗಿ ಜೆನಿಲಿಯಾ ಖಡಕ್ ಆಗಿ ನಟಿಸಿದ್ದಾರೆ. ನಾಯಕನನ್ನು ಪರಿಚಯಿಸಲೆಂದೇ ಮಾಡಿದ ಈ ಚಿತ್ರದಲ್ಲಿ ನಿರ್ದೇಶಕರು ಅದಕ್ಕೆ ಸರಿಹೊಂದುವಂತೆ ಕಥೆ ಹೆಣೆದುಕೊಳ್ಳುವತ್ತ ಹೆಚ್ಚು ಗಮನವಹಿಸಬೇಕಿತ್ತು.

-ವಿನಾಯಕ ಕೆ.ಎಸ್.

'ಖರ್ಗೆ, ರಾಹುಲ್ ವಿರುದ್ಧವೂ ಕ್ರಮ'

ಅರಣ್ಯ ಜಮೀನು ಒತ್ತುವರಿಗೆ ಪ್ರಚೋದನೆ: ಅಸ್ಸಾಂ ಸಿ.ಎಂ ಎಚ್ಚರಿಕೆ

ಗುವಾಹಟಿ (ಪಿಟಿಐ): 'ಅರಣ್ಯ ಜಮೀನು ಒತ್ತುವರಿದಾರರನ್ನು ಪ್ರಚೋದಿಸಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಭಾಷಣ ಮಾಡಿದ್ದು ಕಂಡು ಬಂದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲೂ ಸರ್ಕಾರ ಹಿಂದೇಟು ಹಾಕುವುದಿಲ್ಲ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.


ಹಿಮಂತ ಬಿಸ್ವ ಶರ್ಮ

ಮುಖ್ಯಾಂಶಗಳು

- ಒತ್ತುವರಿಯಾಗಿದ್ದ 135 ಹೆಕ್ಟೇರ್ ಅರಣ್ಯ ಸಂಪೂರ್ಣ ತೆರವು
- ಮತ್ತೆ ಅತಿಕ್ರಮಣ ಮಾಡಲು ಬಿಡಲ್ಲ
- ಅಸ್ಸಾಂ ಮುಖ್ಯಮಂತ್ರಿ ಹೇಳಿಕೆ

'ರಾಜ್ಯ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ನನ್ನನ್ನು ಜೈಲಿನ ಕಂಬಿ ಹಿಂದೆ ಕಳುಹಿಸುವ ಏಕೈಕ ಅಜೆಂಡಾದೊಂದಿಗೆ ಕಾಂಗ್ರೆಸ್ ಪಕ್ಷವು ಸಿದ್ಧತೆ ನಡೆಸುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಗುರುವಾರ ರಾತ್ರಿ ಇಲ್ಲಿ ನಡೆದ ಪಕ್ಷದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಅಸ್ಸಾಂಗೆ ಭೇಟಿ ನೀಡುವುದಕ್ಕೆ ನಮ್ಮ ಯಾವುದೇ ವಿರೋಧವಿಲ್ಲ. ಅವರ ಸಭೆಯಲ್ಲಿ ಒತ್ತುವರಿದಾರರಿಗೆ ನೇರವಾಗಿ ಪ್ರಚೋದನೆ ನೀಡಿ, ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವ ಮೂಲಕ 'ಲ್ಯಾಂಡ್ ಜಿಹಾದ್'ಗೆ ಪ್ರೋತ್ಸಾಹ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

ಕಳೆದ ಬುಧವಾರ ಗುವಾಹಟಿಯಿಂದ 40 ಕಿ.ಮೀ ದೂರದ ಛಾಯಾಗಾಂವ್ ಗ್ರಾಮದಲ್ಲಿ ನಡೆದ ಗುಪ್ತ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾಗವಹಿಸಿ ಭಾಷಣ ಮಾಡಿದ್ದರು.

'ಈ ಸಭೆಯಲ್ಲಿ ಇಬ್ಬರೂ ನಾಯಕರು ಒತ್ತುವರಿದಾರರನ್ನು ಪ್ರೋತ್ಸಾಹಿಸಿ, ಭಾಷಣ ಮಾಡಿದ್ದರು. ಇದಾದ ಮರುದಿನವೇ ಪೈಕಾನ್ ಮೀಸಲು ಅರಣ್ಯದಲ್ಲಿ ಭದ್ರತಾ ಪಡೆಗಳ ಮೇಲೆ ಒತ್ತುವರಿದಾರರು ದಾಳಿ ನಡೆಸಿದ್ದಾರೆ. ಇದರಿಂದ ಒಬ್ಬ ನಾಗರಿಕ ಮೃತಪಟ್ಟು, ಪೊಲೀಸರು ಸೇರಿದಂತೆ 20 ಮಂದಿ ಗಾಯಗೊಂಡಿದ್ದಾರೆ' ಎಂದು ಹಿಮಂತ ಆರೋಪಿಸಿದರು.

ಒತ್ತುವರಿದಾರರಿಗೆ ಕಾಂಗ್ರೆಸ್ ಪಕ್ಷವು ಪುನರ್ವಸತಿ ಕಲ್ಪಿಸಲಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ನೀಡಿದ್ದಾರೆ. 'ಇಂತಹ ಭಾಷಣಗಳಿಂದಲೇ ಒತ್ತುವರಿದಾರರು ಪೊಲೀಸರ ಮೇಲೆ ಕಲ್ಲುತೂರಾಟ ನಡೆಸಿ, ಬಡಿಗೆಗಳಿಂದ ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ಪೊಲೀಸರು ಈಗಾಗಲೇ ಪ್ರಕರಣ ದಾಖಲಿಸಿದ್ದು, ಇದಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರಾದವರ ಮೇಲೂ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ರಾಹುಲ್ ವಿರುದ್ಧ ವಾಗ್ದಾಳಿ: 'ಭ್ರಷ್ಟಾಚಾರ ಪ್ರಕರಣದಲ್ಲಿ ನನ್ನನ್ನು ಜೈಲಿಗೆ ಕಳುಹಿಸುವುದಾಗಿ ರಾಹುಲ್ ಗಾಂಧಿ ಹೇಳಿಕೆ ನೀಡಿದ್ದಾರೆ. 'ಪ್ರಶ್ನೆ ಏನೆಂದರೆ, ರಾಹುಲ್ ಗಾಂಧಿಯೇ ಯಾವಾಗ ಜೈಲಿಗೆ ಹೋಗುತ್ತಾರೆ ಎಂಬುದು? ರಾಬರ್ಟ್ ವಾದ್ರಾ ಅವರಿಗೆ ಸೇರಿದ ಹಲವು ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿದೆ. ಗಾಂಧಿಗಳಿಗಾಗಿ ದೇಶದ ಹಲವು ಜೈಲುಗಳು ಕಾದು ಕೂತಿವೆ' ಎಂದು ಹಿಮಂತ ಬಿಸ್ವ ಶರ್ಮ ವ್ಯಂಗ್ಯವಾಡಿದರು.

'ಅವರು ಕೇವಲ ಒಬ್ಬ ಸಂಸದ. ಹಾಗಿದ್ದ ಮೇಲೆ ಒಬ್ಬ ಮುಖ್ಯಮಂತ್ರಿಯನ್ನು ಹೇಗೆ ಬಂಧಿಸಲು ಸಾಧ್ಯ? ಗಾಂಧಿ ಹೇಳಿಕೆಗೆ ಕಾಂಗ್ರೆಸ್ ನಾಯಕರೇ ಮಹತ್ವ ನೀಡುವುದಿಲ್ಲ' ಎಂದು ತಿಳಿಸಿದರು.

ದಾಳಿ: 10 ಮಂದಿ ಬಂಧನ

'ಪೈಕಾನ್ ಅರಣ್ಯದಲ್ಲಿ ಒತ್ತುವರಿ ತೆರವುಗೊಳಿಸುವ ವೇಳೆ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿದ ಆರೋಪದ ಮೇಲೆ 10 ಮಂದಿಯನ್ನು ಬಂಧಿಸಲಾಗಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.

'ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಘಟನೆ ನಡೆದ ಕೆಲವು ಗಂಟೆಗಳಲ್ಲಿಯೇ 10 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ನಮ್ಮ ತೆರವು ಕಾರ್ಯಾಚರಣೆ ಮುಗಿದಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಕಾವಡ್ ಯಾತ್ರಿಗಳ ಟೀಕೆ: ಯೋಗಿ ಕಿಡಿ

ಪ್ರಜಾವಾಣಿ ವಾರ್ತೆ

ಲಖನೌ: ಕಾವಡ್ ಯಾತ್ರಿಗಳನ್ನು ಗೂಂಡಾಗಳು, ಭಯೋತ್ಪಾದಕರು ಎಂಬಂತೆ ಬಿಂಬಿಸಲಾಗುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಶುಕ್ರವಾರ ಇಲ್ಲಿ ಕಿಡಿಕಾರಿದರು.

'ಕೆಲವು ಮಾಧ್ಯಮಗಳಲ್ಲಿ ಇಂತಹ ಪ್ರಯೋಗ ನಡೆದಿದ್ದು, ನಮ್ಮ ಪರಂಪರೆಯನ್ನು ಅವಹೇಳನ ಮಾಡಲಾಗುತ್ತಿದೆ' ಎಂದು ವಾರಾಣಸಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಹೇಳಿದರು.

'ಕಾವಡ್ ಯಾತ್ರಾ ಮಾರ್ಗದಲ್ಲಿ ಅಹಿತಕರ ಘಟನೆಗಳು ನಿರಂತರವಾಗಿ ನಡೆದಿವೆ' ಎಂದು ಮಾಧ್ಯಮಗಳಲ್ಲಿ ವರದಿ ಪ್ರಕಟಗೊಂಡ ಕೆಲವು ದಿನಗಳ ಬಳಿಕ ಮುಖ್ಯಮಂತ್ರಿಯವರು ಈ ಹೇಳಿಕೆ ನೀಡಿದ್ದಾರೆ.

'ಕಾವಡ್ ಯಾತ್ರೆಯಲ್ಲಿ ಎಲ್ಲ ಸಮಾಜದವರು ಭಾಗಿಯಾಗುತ್ತಾರೆ. ಜಾತಿ–ವರ್ಗದ ಭೇದವಿಲ್ಲ. ಭಂ ಬೋಲೆ ಪಠಣ ಮಾಡುತ್ತಾ ಹೆಜ್ಜೆ ಹಾಕುವ ಭಕ್ತರನ್ನು ಗೂಂಡಾಗಳು ಎನ್ನಲಾಗುತ್ತಿದೆ. ಇದು ತಪ್ಪು. ಇಂತಹ ಮನಸ್ಥಿತಿಯು ದೇಶದ ಪರಂಪರೆಗೆ ಅವಮಾನಕಾರಿಯಾದುದು' ಎಂದು ಯೋಗಿ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿಕೊಂಡಿರುವ ಕೆಲವರು ಸಮುದಾಯಗಳ ನಡುವೆ ಹಿಂಸಾಚಾರವನ್ನು ಹುಟ್ಟುಹಾಕಲು ಯತ್ನಿಸುತ್ತಿದ್ದಾರೆ. ಇಂತಹವರನ್ನು ಸಮಾಜದಿಂದ ಹೊರಹಾಕಬೇಕಿದೆ ಎಂದರು.

'ಮೂರು ವರ್ಷದ ಹಿಂದೆ ಬೆಂಕಿ ಹಚ್ಚುವ ಯತ್ನ ನಡೆದಿತ್ತು. ಆಗ ನಾನು ನಿರ್ದಿಷ್ಟ ಸಮುದಾಯ ಇಂತಹ ಕೆಲಸ ಮಾಡಬಾರದು ಎಂದು ಹೇಳಿದ್ದೆ. ತನಿಖೆಯಲ್ಲಿ ದುಷ್ಕರ್ಮಿ ಕೇಸರಿ ಸ್ಕಾರ್ಫ್ ಧರಿಸಿದ್ದ ಎಂಬುದು ಗೊತ್ತಾಗಿದೆ. ಆದರೆ ಆತ ಅಲ್ಲಾಹು ಎಂದು ಜಪಿಸಿದ್ದಾನೆ. ಇಂತಹವರನ್ನು ಗುರುತಿಸಿ ಸಮಾಜದಿಂದ ಬಹಿಷ್ಕರಿಸಬೇಕು. ಆಗ ಮಾತ್ರ ನಾವು ರಾಷ್ಟ್ರೀಯ ಏಕತೆಯನ್ನು ಬಲಪಡಿಸಬಹುದು' ಎಂದು ತಿಳಿಸಿದರು.

ಕಾವಡ್ ಯಾತ್ರಾ ಮಾರ್ಗದಲ್ಲಿ ಕೆಲವು ಯಾತ್ರಾರ್ಥಿಗಳು ಅಂಗಡಿಗಳನ್ನು ಲೂಟಿ ಮಾಡಿರುವುದಾಗಿ, ವಾಹನಗಳಿಗೆ ಜಖಂ ಮಾಡಿರುವುದಾಗಿ ವರದಿ ಪ್ರಕಟವಾಗಿವೆ.

ರೈಲು ಡಿಕ್ಕಿ: 3 ಕಾಡಾನೆ ಸಾವು

ಝಾರ್‌ಗ್ರಾಮ್ (ಪಿಟಿಐ): ಪಶ್ಚಿಮ ಬಂಗಾಳದ ಮೇದಿನಿಪುರ ಜಿಲ್ಲೆಯಲ್ಲಿ ರೈಲು ಡಿಕ್ಕಿ ಹೊಡೆದ ಪರಿಣಾಮ ಮೂರು ಕಾಡಾನೆಗಳು ಮೃತಪಟ್ಟಿವೆ.

'ಖರಗಪುರ –ಟಾಟಾನಗರ ಮಾರ್ಗವಾಗಿ ಸಂಚರಿಸುತ್ತಿದ್ದ ಜನಶತಾಬ್ದಿ ರೈಲು ಗುರುವಾರ ರಾತ್ರಿ ಬನ್‌ಸ್ತಳ ರೈಲು ನಿಲ್ದಾಣದ ಬಳಿ ಕಾಡಾನೆಯ ಹಿಂಡಿಗೆ ಡಿಕ್ಕಿ ಹೊಡೆದಿದೆ. ಎರಡು ಮರಿ ಆನೆಗಳು ಸೇರಿ ಒಟ್ಟು ಮೂರು ಆನೆಗಳು ಪ್ರಾಣ ಕಳೆದುಕೊಂಡಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆನೆ ಹಿಂಡು ಜಾರ್ಖಂಡ್‌ನ ದಲ್ಮಾ ಅರಣ್ಯದಿಂದ ಬಂದಿರುವ ಸಾಧ್ಯತೆಯಿದೆ. ಆನೆಗಳ ಹಿಂಡು ಅಲ್ಲೇ ಇದ್ದಿದ್ದರಿಂದ ತಕ್ಷಣ ಘಟನಾ ಸ್ಥಳಕ್ಕೆ ಹೋಗಲಾಗಲಿಲ್ಲ. ಅವಘಡದ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದ್ದಾರೆ.

ದಾಖಲೆ ಉತ್ತಮಪಡಿಸಿಕೊಂಡ ಶ್ರೀಹರಿ

ವಿಶ್ವ ಯೂನಿವರ್ಸಿಟಿ ಗೇಮ್ಸ್: 200 ಮೀ. ಫ್ರೀಸ್ಟೈಲ್ ಈಜು

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಜರ್ಮನಿಯಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನ ಪುರುಷರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಎರಡು ಬಾರಿ ಭಾರತದ ಶ್ರೇಷ್ಠ ಕಾಲಾವಧಿಯಲ್ಲಿ ಗುರಿ ತಲುಪಿದರು. ಆದರೆ, ಫೈನಲ್‌ಗೆ ಅರ್ಹತೆ ಪಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

ಕ್ರೀಡಾಕೂಟದ ಎರಡನೇ ದಿನವಾದ ಶುಕ್ರವಾರ ಕರ್ನಾಟಕದ 24 ವರ್ಷದ ಶ್ರೀಹರಿ, ಸೆಮಿಫೈನಲ್‌ನಲ್ಲಿ 1ನಿಮಿಷ 48.11ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಇದಕ್ಕೂ ಮುನ್ನ ತಮ್ಮ ಹೀಟ್ಸ್‌ನಲ್ಲೂ (1:48.11) ಅಗ್ರಸ್ಥಾನಿಯಾಗಿದ್ದರು. ಇದರೊಂದಿಗೆ ಕಳೆದ ತಿಂಗಳು ಸಿಂಗಪುರ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ತಾವೇ ನಿರ್ಮಿಸಿದ್ದ (1:48.66) ದಾಖಲೆಯನ್ನು ಎರಡು ಬಾರಿ ಉತ್ತಮಪಡಿಸಿಕೊಂಡರು.

ಸೆಮಿಫೈನಲ್‌ನಲ್ಲಿ ಒಟ್ಟಾರೆ ಒಂಬತ್ತನೇ ಸ್ಥಾನ ಪಡೆದ ಅವರು ಕೇವಲ 0.7 ಸೆಕೆಂಡ್‌ನಿಂದ ಫೈನಲ್ ಅರ್ಹತೆ ತಪ್ಪಿಸಿಕೊಂಡರು.


ಭಾರತದ ಶ್ರೀಹರಿ ನಟರಾಜ್

ಕರ್ನಾಟಕದ ಮತ್ತೊಬ್ಬ ಈಜುಪಟು ಅನೀಶ್ ಗೌಡ 1 ನಿ.52.42 ಸೆಕೆಂಡುಗಳಲ್ಲಿ ಗುರಿ ತಲುಪಿ, ತಮ್ಮ ಹೀಟ್ಸ್‌ನಲ್ಲಿ ಐದನೇ ಸ್ಥಾನ ಪಡೆದರು. ಅವರಿಗೆ ಸೆಮಿಫೈನಲ್ ಅರ್ಹತೆ ಗಳಿಸಲು ಸಾಧ್ಯವಾಗಲಿಲ್ಲ.

ಮತ್ತೊಂದೆಡೆ ಭಾರತದ ಪುರುಷ ಮತ್ತು ಮಹಿಳೆಯರ ಟೇಬಲ್ ಟೆನಿಸ್ ತಂಡಗಳು ಪ್ರಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದವು. ಮಹಿಳೆಯರ ತಂಡವು ಗುಂಪು ಹಂತದ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ 3–1ರಿಂದ ಗೆಲುವು ಸಾಧಿಸಿ 16ರ ಘಟ್ಟ ಪ್ರವೇಶಿಸಿತು.

ಭಾರತದ ಪುರುಷರ ತಂಡವು ಗುಂಪು ಹಂತದ ಪಂದ್ಯದಲ್ಲಿ 3–2ರಿಂದ ಕೊಲಂಬಿಯಾ ತಂಡವನ್ನು ಮಣಿಸಿತು. 16ರ ಘಟ್ಟದ ಮುಖಾಮುಖಿಯಲ್ಲಿ ಪ್ರಬಲ ಚೀನಾ ತಂಡವನ್ನು ಎದುರಿಸಲಿದೆ.

ಆದರೆ, ಭಾರತದ ಬ್ಯಾಡ್ಮಿಂಟನ್ ಮಿಶ್ರ ತಂಡವು ನಿರಾಸೆ ಮೂಡಿಸಿತು. ಗುಂಪು ಹಂತದ ಪಂದ್ಯದಲ್ಲಿ 2–3ರಿಂದ ಹಾಂಗ್‌ಕಾಂಗ್ ತಂಡಕ್ಕೆ ಮಣಿಯಿತು. ಇದಕ್ಕೂ ಮುನ್ನ ಭಾರತ 5–0ರಿಂದ ಮಕಾವು ತಂಡವನ್ನು ಸೋಲಿಸಿತ್ತು.

ಭಾರತದ ಟೆನಿಸ್ ಆಟಗಾರ್ತಿ ಅಂಜಲಿ ರಾಠಿ 6-0, 6-0 ಸೆಟ್‌ಗಳಿಂದ ಯುಗಾಂಡಾದ ಕ್ರಿಸ್ಟಿಯಾನಾ ಒವೊಮು ಹಂಗಿ ಅವರನ್ನು ಮಣಿಸಿ 32ರ ಘಟ್ಟಕ್ಕೆ ಮುನ್ನಡೆದರು. ವೈಷ್ಣವಿ ಅಡ್ಕರ್ 6-1, 6-0ರಿಂದ ನೆದರ್ಲೆಂಡ್ಸ್‌ನ ಜೋಲಿಯನ್ ಮಾರಿಯಾ ಅವರನ್ನು ಮಣಿಸಿದರು.

ಗೋವಾ ತಂಡಕ್ಕೆ ಮಾರ್ಕ್ವೆಝ್ ಕೋಚ್



ನವದೆಹಲಿ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಹುದ್ದೆಯಿಂದ ಕೆಳಗಿಳಿದ ಮನೊಲೊ ಮಾರ್ಕ್ವೆಝ್ ಅವರು 2025-26ರ ಋತುವಿಗಾಗಿ ಎಫ್‌ಸಿ ಗೋವಾವನ್ನು ಮತ್ತೆ ಸೇರಿಕೊಂಡಿದ್ದಾರೆ.

ಭಾರತ ಫುಟ್‌ಬಾಲ್ ತಂಡ ಸತತವಾಗಿ ಹಿನ್ನಡೆ ಕಾಣುತ್ತಿದ್ದ ಪರಿಣಾಮ ಈ ತಿಂಗಳ ಆರಂಭದಲ್ಲಿ ಸ್ಪೇನ್‌ನ ಮಾರ್ಕ್ವೆಝ್ ಪದತ್ಯಾಗ ಮಾಡಿದ್ದರು.

ಮುಂಬರುವ ಋತುವಿಗೆ 56 ವರ್ಷದ ಮಾರ್ಕ್ವೆಝ್ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಎಫ್‌ಸಿ ಗೋವಾ ಘೋಷಿಸಿದೆ. ಅವರು ಭಾರತ ತಂಡಕ್ಕೆ ಕೋಚ್ ಆಗುವ ಮುನ್ನ ಗೋವಾ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು.

ಐ–ಲೀಗ್: ಇಂಟರ್ ಕಾಶಿಗೆ ಚಾಂಪಿಯನ್‌ಪಟ್ಟ

ನವದೆಹಲಿ (ಪಿಟಿಐ): ಗೋವಾದ ಚರ್ಚಿಲ್ ಬ್ರದರ್ಸ್ ತಂಡವನ್ನು ಐ–ಲೀಗ್ ಫುಟ್‌ಬಾಲ್ ಚಾಂಪಿಯನ್ ಎಂದು ಘೋಷಿಸಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತೀರ್ಮಾನವನ್ನು ಸ್ವಿಜರ್ಲೆಂಡ್ ಮೂಲದ ಕ್ರೀಡಾ ಮಧ್ಯಸ್ಥಿಕೆ ನ್ಯಾಯಮಂಡಳಿ (ಸಿಎಎಸ್) ತಿರಸ್ಕರಿಸಿದೆ. ಇದರಿಂದಾಗಿ ಇಂಟರ್ ಕಾಶಿ ತಂಡವನ್ನು ಚಾಂಪಿಯನ್ ಎಂದು ಶುಕ್ರವಾರ ಪ್ರಕಟಿಸಲಾಗಿದೆ.

ಮೂರು ತಿಂಗಳ ಹಿಂದೆ ಎಐಎಫ್‌ಎಫ್, ಗೋವಾದ ತಂಡವನ್ನು ಚಾಂಪಿಯನ್ ಎಂದು ಘೋಷಿಸಿತ್ತು. ಈಗ ತನ್ನದೇ ನಿರ್ಧಾರ ಬದಲಾಗಿರುವುದು ಎಐಎಫ್‌ಎಫ್‌ಗೆ ಹಿನ್ನಡೆ ಆದಂತಾಗಿದೆ.

ಎದುರಾಳಿ ತಂಡವೊಂದು ತನ್ನ ವಿರುದ್ಧ ಅನರ್ಹ ಆಟಗಾರರನೊಬ್ಬನ್ನು ಆಡಿಸಿರುವ ವಿಷಯಕ್ಕೆ ಸಂಬಂಧಿಸಿ ಇಂಟರ್ ಕಾಶಿ ತಂಡ ಆಕ್ಷೇಪ ಎತ್ತಿತ್ತು. (ಆ ಪಂದ್ಯದಲ್ಲಿ ನಾಮಧಾರಿ ಎದುರು ಇಂಟರ್ ಕಾಶಿ 0–2 ಗೋಲುಗಳಿಂದ ಸೋತಿತ್ತು). ಆದರೆ ಅದರ ಆಕ್ಷೇಪವನ್ನು ಅಪೀಲುಗಳ ಸಮಿತಿ ತಳ್ಳಿಹಾಕಿತ್ತು. ಅಂತಿಮ ಲೀಗ್ ನಂತರ ಚರ್ಚಿಲ್ ಬ್ರದರ್ಸ್ 40 ಮತ್ತು ಇಂಟರ್ ಕಾಶಿ 39 ಪಾಯಿಂಟ್ ಗಳಿಸಿದ್ದವು. ಹೀಗಾಗಿ ಗೋವಾದ ತಂಡವನ್ನು ಏಪ್ರಿಲ್‌ನಲ್ಲಿ ಚಾಂಪಿಯನ್ ಎಂದು ಸಾರಲಾಗಿತ್ತು.

ಈಗ ಲುಸಾನ್ ಮೂಲದ ಕ್ರೀಡಾ ನ್ಯಾಯ ಮಂಡಳಿ ಆದೇಶದಿಂದ ಕಾಶಿ ತಂಡದ ಖಾತೆಗೆ ಎರಡು ಪಾಯಿಂಟ್ ಸೇರ್ಪಡೆಯಾಗಿದ್ದು, 2024–25ನೇ ಸಾಲಿನ ಐ–ಲೀಗ್ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿದೆ.

ಸಂಸತ್‌ನಲ್ಲಿ ಧ್ವನಿ ಎತ್ತಲು ಡಿಎಂಕೆ ಸಜ್ಜು

ಚೆನ್ನೈ: ತ್ರಿಭಾಷಾ ಸೂತ್ರದ ಹೆಸರಿನಲ್ಲಿ ನಡೆಯುತ್ತಿರುವ ಹಿಂದಿ ಹೇರಿಕೆ, ಸಮಗ್ರ ಶಿಕ್ಷಣ ಯೋಜನೆ (ಎಸ್‌ಎಸ್) ಅನ್ವಯ ನೀಡಬೇಕಿದ್ದ ಅನುದಾನದ ತಡೆ ಹಾಗೂ ಒಕ್ಕೂಟ ವ್ಯವಸ್ಥೆ ಸೇರಿದಂತೆ ರಾಜ್ಯ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಸಂಸತ್ ಚಳಿಗಾಲದ ಅಧಿವೇಶನದಲ್ಲಿ ಧ್ವನಿ ಎತ್ತಲು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷ ನಿರ್ಧರಿಸಿದೆ.

ಡಿಎಂಕೆ ಮುಖ್ಯಸ್ಥ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ನೇತೃತ್ವದಲ್ಲಿ ಶುಕ್ರವಾರ ನಡೆದ ಡಿಎಂಕೆ ಸಂಸದರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಶೇಕಡ 50ರಷ್ಟು ಪಾಲು ನೀಡಬೇಕು ಹಾಗೂ ಶ್ರೀಲಂಕಾ ನೌಕಾಪಡೆಯಿಂದ ತಮಿಳುನಾಡು ಮೀನುಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕೆಂದೂ ಎಂದು ಡಿಎಂಕೆ ಸಂಸದರು ಆಗ್ರಹಿಸಲಿದ್ದಾರೆ.

ತಿರುಕ್ಕುರಳ್ ಅನ್ನು ರಾಷ್ಟ್ರೀಯ ಪುಸ್ತಕವೆಂದು ಘೋಷಿಸಲು, ಶಿಕ್ಷಣವನ್ನು ಸಂವಿಧಾನದ ರಾಜ್ಯ ಪಟ್ಟಿಯ ವ್ಯಾಪ್ತಿಗೆ ಮರಳಿ ತರಬೇಕು, ಕೇಂದ್ರದ ಯೋಜನೆಗಳಿಗೆ ಇಂಗ್ಲಿಷ್‌ನಲ್ಲಿ ಹೆಸರಿಡಲು ಆಗ್ರಹಿಸಬೇಕು ಎಂಬ ನಿರ್ಣಯವನ್ನೂ ಅಂಗೀಕರಿಸಲಾಗಿದೆ.

ನವ ಬಿಹಾರ ನಿರ್ಮಾಣ: ಪ್ರಧಾನಿ

ಮೋತಿಹರಿ/ಬಿಹಾರ (ಪಿಟಿಐ): ಬಿಹಾರದಲ್ಲಿ ಶುಕ್ರವಾರ ಚುನಾವಣಾ ಕಹಳೆ ಮೊಳಗಿಸಿರುವ ಪ್ರಧಾನಿ ನರೇಂದ್ರ ಮೋದಿ, 'ರಾಜ್ಯವನ್ನು ಆರ್‌ಜೆಡಿ–ಕಾಂಗ್ರೆಸ್ ಕೂಟದ ದುಷ್ಟ ಉದ್ದೇಶಗಳಿಂದ ದೂರವಿಡಲು 'ಮತ್ತೊಮ್ಮೆ ಎನ್‌ಡಿಎ ಸರ್ಕಾರ' ಬೆಂಬಲಿಸಿ, ನಾವು ನವ ಬಿಹಾರ ನಿರ್ಮಾಣ ಮಾಡುತ್ತೇವೆ' ಎಂದರು.

ಪೂರ್ವ ಚಂಪಾರಣ್ ಜಿಲ್ಲೆಯ ಮೋತಿಹರಿ ಪಟ್ಟಣದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಆರ್‌ಜೆಡಿ ಉದ್ಯೋಗ ಸೃಷ್ಟಿ ಎಂಬ ಸುಳ್ಳು ಭರವಸೆ ನೀಡಿ ಬಡವರ ಜಮೀನು ಕಿತ್ತುಕೊಂಡಿದೆ. 'ಉದ್ಯೋಗಕ್ಕಾಗಿ ಜಮೀನು' ಹಗರಣವೇ ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರು. 'ವಿಕಸಿತ್ ಬಿಹಾರ್' ಯೋಜನೆಯು ಪೂರ್ವ ಭಾರತದ ಅಭಿವೃದ್ಧಿಯ ಕೀಲಿಕೈ ಎಂದು ಭರವಸೆ ನೀಡಿದರು.

'ಬಿಹಾರದ ಜನರು ಆರ್‌ಜೆಡಿಯ ಸಂಕೋಲೆಯಲ್ಲಿ ಸಿಲುಕಿ ನಲುಗಿದ್ದಾರೆ. ಇಲ್ಲಿನ ಯುವಜನರು ಬಿಹಾರವು ಎರಡು ದಶಕಗಳ ಹಿಂದೆ ಹತಾಶೆಯ ಕೂಪದಲ್ಲಿ ಇದ್ದಿದ್ದನ್ನು ಜ್ಞಾಪಿಸಿಕೊಳ್ಳಬೇಕು' ಎಂದರು. 'ಉದ್ಯೋಗಕ್ಕಾಗಿ ಜಮೀನು ಹಗರಣ'ವನ್ನು ಪ್ರಸ್ತಾಪಿಸಿದ ಅವರು, ಈ ಪ್ರಕರಣದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಪ್ರಮುಖ ಆರೋಪಿ ಎನ್ನುವುದನ್ನು ಪರೋಕ್ಷವಾಗಿ ಉಲ್ಲೇಖಿಸಿದರು.

ಬಿಹಾರದಲ್ಲಿ ಲಕ್ಷಾಂತರ ಯುವ ಜನರು ಸ್ವಯಂ ಉದ್ಯೋಗಕ್ಕಾಗಿ ಮುದ್ರಾ ಯೋಜನೆಯಡಿ ಸಾಲ ಪಡೆದುಕೊಂಡಿದ್ದಾರೆ. ಸರ್ಕಾರಿ ಉದ್ಯೋಗ ಸಿಗದವರಿಗೆ, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಕಂಡುಕೊಳ್ಳಲು ಅನುಕೂಲವಾಗುವಂತೆ (ಮೊದಲ ಕೆಲಸ) ₹ 15 ಸಾವಿರ ಸಹಾಯಧನ ನೀಡುವ ಹೊಸ ಯೋಜನೆಯನ್ನು ಕೇಂದ್ರ ಸರ್ಕಾರವು ಆ.1ರಿಂದ ಜಾರಿಗೊಳಿಸುತ್ತಿದೆ ಎಂದರು. ಇದಕ್ಕಾಗಿ ₹1 ಲಕ್ಷ ಕೋಟಿ ಖರ್ಚು ಮಾಡಲಾಗುವುದು ಎಂದರು. ಆಪರೇಷನ್ ಸಿಂಧೂರ, ನಕ್ಸಲ್ ನಿಗ್ರಹ ಕಾರ್ಯಾಚರಣೆಯ ಯಶಸ್ಸನ್ನೂ ಪ್ರಧಾನಿ ಭಾಷಣದಲ್ಲಿ ಪ್ರಸ್ತಾಪಿಸಿದರು.

₹7,200 ಕೋಟಿ ವೆಚ್ಚದ ಯೋಜನೆಗಳಿಗೆ ಚಾಲನೆ

ಮೋತಿಹರಿ (ಪಿಟಿಐ): ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿರುವ ಬಿಹಾರಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ₹ 7,200 ಕೋಟಿಗೂ ಹೆಚ್ಚು ಮೊತ್ತದ ರೈಲು, ಮೀನುಗಾರಿಕೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿ ಮತ್ತು ಯೋಜನೆಗಳಿಗೆ ಶುಕ್ರವಾರ ಚಾಲನೆ ನೀಡಿದರು.

ಬಿಹಾರ ರಾಜ್ಯಪಾಲರಾದ ಆರಿಫ್ ಮೊಹಮ್ಮದ್ ಖಾನ್, ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರು ಸೇರಿ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಈ ವೇಳೆ ನಾಲ್ಕು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು. ಅಲ್ಲದೇ ಹಲವು ರೈಲ್ವೆ, ರಸ್ತೆ ಯೋಜನೆಗಳನ್ನು ದೇಶಕ್ಕೆ ಸಮರ್ಪಿಸಿದರು.

ದರ್ಭಾಂಗ ಮತ್ತು ಪಾಟ್ನಾದಲ್ಲಿ ನೂತನ ಮಾಹಿತಿ ತಂತ್ರಜ್ಞಾನ ಪಾರ್ಕ್ ಮತ್ತು ನವೋದ್ಯಮಗಳನ್ನು ಪ್ರಧಾನಿ ಉದ್ಘಾಟಿಸಿದರು. 12 ಸಾವಿರ ಫಲಾನುಭವಿಗಳಿಗೆ ಹೊಸ ಮನೆಗಳ ಕೀಗಳನ್ನು ವಿತರಿಸಿದರು. ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ 40 ಸಾವಿರ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಡಲು ₹160 ಕೋಟಿ ಬಿಡುಗಡೆ ಮಾಡಿದರು.


ಪ್ರಧಾನಿ ನರೇಂದ್ರ ಮೋದಿ ಅವರು ಫಲಾನುಭವಿಗಳಿಗೆ ನೂತನ ಮನೆಗಳ ಕೀಗಳನ್ನು ಹಸ್ತಾಂತರ ಮಾಡಿದರು. ನಿತೀಶ್‌ಕುಮಾರ್ ಹಾಜರಿದ್ದರು — ಪಿಟಿಐ ಚಿತ್ರ

'10 ವರ್ಷದಿಂದ ಸರ್ಕಾರ ಕಿರುಕುಳ ನೀಡುತ್ತಿದೆ'

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ, ಉದ್ಯಮಿ ರಾಬರ್ಟ್ ವಾದ್ರಾ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಿರುವುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಕ್ಷೇಪಿಸಿದ್ದಾರೆ. ಕಳೆದ 10 ವರ್ಷದಿಂದ ಸರ್ಕಾರ ದುರುದ್ದೇಶದಿಂದ ತಮ್ಮ ಬಾವನಿಗೆ (ವಾದ್ರಾ) ಕಿರುಕುಳ ನೀಡುತ್ತಿದೆ ಎಂದೂ ಆರೋಪಿಸಿದ್ದಾರೆ.



ಕಳೆದ 10 ವರ್ಷಗಳಿಂದ ಸರ್ಕಾರ ನನ್ನ ಬಾವನಿಗೆ ಕಿರುಕುಳ ನೀಡುತ್ತಿದೆ. ಈಗ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವುದು ಕೂಡ ರಾಜಕೀಯ ಪ್ರೇರಿತ ದಾಳಿಯ ಭಾಗ

ರಾಹುಲ್, ಗಾಂಧಿ, ಕಾಂಗ್ರೆಸ್ ನಾಯಕ

ಹರಿಯಾಣದ ಶಿಕೋಹಪುರ ಭೂ ವ್ಯವಹಾರದಲ್ಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ್ರಾ ಅವರ ವಿರುದ್ಧ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಇದನ್ನು ಆಕ್ಷೇಪಿಸಿ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಲ್ಲದೇ, 'ನನ್ನ ಸಹೋದರಿ ಪ್ರಿಯಾಂಕಾ, ಬಾವ ರಾಬರ್ಟ್ ಹಾಗೂ ಅವರ ಮಕ್ಕಳು ರಾಜಕೀಯ ಪ್ರೇರಿತವಾದ ಮತ್ತೊಂದು ಕಿರುಕುಳವನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ನಾನು ಅವರ ಜತೆಗೆ ಇರಲಿದ್ದೇನೆ. ಅವರೆಲ್ಲರೂ ಇಂಥ ಯಾವುದೇ ಕಿರುಕುಳವನ್ನು ಮೆಟ್ಟಿ ನಿಲ್ಲುವಷ್ಟು ಧೈರ್ಯವಂತರು ಎಂದು ನನಗೆ ತಿಳಿದಿದೆ. ಅಂತಿಮವಾಗಿ ಸತ್ಯಕ್ಕೆ ಜಯ ಸಿಗಲಿದೆ' ಎಂದೂ ರಾಹುಲ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನಾಯಿಗೆ ಬೈದವನ ಮೂಗು ಕೊಯ್ದ ಪ್ರಕರಣ: ಇಬ್ಬರ ಬಂಧನ

ನೊಯಿಡಾ (ಪಿಟಿಐ): ಸಾಕು ನಾಯಿಗೆ ಬೈದಿದ್ದಾರೆ ಎಂಬ ಕಾರಣಕ್ಕೆ, ವ್ಯಕ್ತಿಯೊಬ್ಬ ಪಕ್ಕದ ಮನೆ ನಿವಾಸಿಯ ಮೂಗು ಕೊಯ್ದಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಪ್ರಕರಣ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಮತ್ತೊಬ್ಬನಿಗಾಗಿ ಹುಡುಕಾಟ ನಡೆದಿದೆ.

ನೊಯಿಡಾ ಜಿಲ್ಲೆಯ ನತ್ ಕಿ ಮದೈಯ್ಯ ಗ್ರಾಮದಲ್ಲಿ ಜುಲೈ 8ರಂದು ಈ ಘಟನೆ ನಡೆದಿದೆ. ಸಂತ್ರಸ್ತ ವ್ಯಕ್ತಿಯನ್ನು ದೇವೇಂದ್ರ ಎಂದು ಗುರುತಿಸಲಾಗಿದೆ.

ಪಕ್ಕದ ಮನೆಯ ನಾಯಿ ಪದೇ ಪದೇ ಬೊಗಳುತ್ತಿದ್ದ ಕಾರಣ ದೇವೇಂದ್ರ ಅದನ್ನು ಗದರಿಸಿ, ಬೈದಿದ್ದರು.. ಇದರಿಂದ ಕೋಪಗೊಂಡ ನಾಯಿಯ ಮಾಲೀಕ ಸತೀಶ್ ಹಾಗೂ ಅವರ ಸಹೋದರ ಅಮಿತ್ ಮತ್ತು ತುಷಾರ್ ಸೇರಿಕೊಂಡು ದೇವೇಂದ್ರ ಹಾಗೂ ಅವರ ಪತ್ನಿ ಮುನ್ನಿ ದೇವಿ ಮೇಲೆ ಹಲ್ಲೆ ನಡೆಸಿ, ಚೂಪಾದ ಆಯುಧದಿಂದ ದೇವೇಂದ್ರ ಅವರ ಮೂಗು ಕೊಯ್ದಿದ್ದಾರೆ ಎಂದು ದೇವೇಂದ್ರ ಅವರ ತಂದೆ ಸುಖ್‌ಬೀರ್ ಸಿಂಗ್ ದೂರು ದಾಖಲಿಸಿದ್ದಾರೆ.

ಸೆಮಿಗೆ ಅರ್ಜುನ್, ಸೋತ ಪ್ರಜ್ಞಾನಂದ

ಲಾಸ್ ವೇಗಸ್ ಫ್ರೀಸ್ಟೈಲ್ ಚೆಸ್: ಕ್ವಾರ್ಟರ್‌ಫೈನಲ್‌ನಲ್ಲಿ ಹಿಕಾರು ನಕಾಮುರ ಎದುರು ಅರೋನಿಯನ್‌ಗೆ ಗೆಲುವು


ಅರ್ಜುನ್ ಇರಿಗೇಶಿ

ಲಾಸ್ ವೇಗಸ್ (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಗುರುವಾರ ಸೋಲಿಸಿ ಲಾಸ್ ವೇಗಸ್ ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್ ಟೂರ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ಆದರೆ ಭಾರತದ ಇನ್ನೊಬ್ಬ ಯುವತಾರೆ ಆರ್. ಪ್ರಜ್ಞಾನಂದ ಸೋಲು ಕಂಡರು.

ಎರಡು ರ್‍ಯಾಪಿಡ್ ಪಂದ್ಯಗಳನ್ನು ಒಳಗೊಂಡಿದ್ದ ಕ್ವಾರ್ಟರ್‌ಫೈನಲ್‌ನಲ್ಲಿ ಅರ್ಜುನ್ 1.5–0.5 ರಿಂದ ಅಬ್ದುಸತ್ತಾರೋವ್ ಅವರನ್ನು ಸೋಲಿಸಿದರು. ಅಮೆರಿಕದ ಫ್ಯಾಬಿಯಾನೊ ಕರುವಾನ ತೀವ್ರ ಹೋರಾಟ ಕಂಡ ಇನ್ನೊಂದು ಪಂದ್ಯದಲ್ಲಿ ಪ್ರಜ್ಞಾನಂದ ಅವರನ್ನು 4–3 ರಿಂದ ಸೋಲಿಸಿದರು.

ಅರ್ಜುನ್– ಅಬ್ದುಸತ್ತಾರೋವ್ ನಡುವಣ ಮೊದಲ ಪಂದ್ಯ ಡ್ರಾ ಆಯಿತು. ಆದರೆ ಎರಡನೇ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಭಾರತದ ಆಟಗಾರ ಆರಂಭದಿಂದಲೇ ಮೇಲುಗೈ ಸಾಧಿಸಿ ಬೇಗನೇ ಎದುರಾಳಿಯ ರೂಕ್ ಮತ್ತು ಬಿಷಪ್ (‘ಆನೆ’ ಮತ್ತು ‘ರಥ’) ಪಡೆದರು. ಅವರ ಗೆಲುವು ಅಲ್ಲಿಂದಲೇ ಖಚಿತವಾಯಿತು.

ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಲೆವೊನ್ ಅರೋನಿಯನ್ 2.5–1.5 ರಿಂದ ಅಮೆರಿಕದ ಹಿಕಾರು ನಕಾಮುರ ಅವರನ್ನು, ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ 4–2 ರಿಂದ ಉಜ್ಬೇಕಿಸ್ತಾನದ ಜಾವೊಖಿರ್ ಸಿಂಧರೋವ್ ಅವರನ್ನು ಮಣಿಸಿದರು.

ಅರ್ಜುನ್ ಅವರು ಸೆಮಿಫೈನಲ್ ಪಂದ್ಯದಲ್ಲಿ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಅರೋನಿಯನ್ ಅವರನ್ನು ಎದುರಿಸಲಿದ್ದಾರೆ. ಅಮೆರಿಕದ ವ್ಯವಹಾರವಾದ ಇನ್ನೊಂದು ಸೆಮಿಫೈನಲ್‌ನಲ್ಲಿ ಹ್ಯಾನ್ಸ್ ನೀಮನ್ ಅವರು ಫ್ಯಾಬಿಯಾನೊ ಕರುವಾನ ಅವರಿಗೆ ಮುಖಾಮುಖಿಯಾಗುವರು.

ಟೂರ್ನಿಯು ₹6.5 ಕೋಟಿ ಬಹುಮಾನ ನಿಧಿ ಹೊಂದಿದೆ.

ಎರಡು ಗುಂಪುಗಳಿಂದ ತಲಾ ನಾಲ್ಕರಂತೆ ಅರ್ಹತೆ ಪಡೆದ ಮೊದಲ ಎಂಟು ಆಟಗಾರರು ಮೊದಲ ನಾಕೌಟ್ (ಅಪ್ಪರ್ ಬ್ರ್ಯಾಕೆಟ್) ಆಡುತ್ತಾರೆ. ಸ್ಥಾನ ಪಡೆಯದೇ ಇರುವ ಆಟಗಾರರ ನಡುವೆಯೂ ಇನ್ನೊಂದು ನಾಕೌಟ್ (ಲೋವರ್ ಬ್ರ್ಯಾಕೆಟ್) ನಡೆಯುತ್ತದೆ. ಎರಡೂ ನಾಕೌಟ್‌ಗಳ ಫೈನಲ್ ಜುಲೈ 19ರಂದು ನಡೆಯಲಿದೆ.


ಲೋವರ್ ಬ್ರ್ಯಾಕೆಟ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಗ್ರಮಾನ್ಯ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 2–0 ಯಿಂದ ಭಾರತದ ವಿದಿತ್ ಗುಜರಾತಿ ಅವರನ್ನು ಸೋಲಿಸಿದರೆ, ಅಮೆರಿಕದ ವೆಸ್ಲಿ ಸೊ 1.5–0.5 ರಿಂದ ಸ್ವದೇಶದ ಸಾಮ್ಯುಯೆಲ್ ಸೆವಿಯನ್ ಅವರನ್ನು, ಲೀನಿಯರ್ ಡೊಮಿಂಗೆಝ್ ಪೆರೆಝ್ 1.5–0.5 ರಿಂದ ಕಜಕಸ್ತಾನದ ಬಿಬಿಸಾರಾ ಅಸ್ಸುಬಯೇವಾ ಅವರನ್ನು ಮಣಿಸಿದರು. ಮೊದಲ ಲೆಗ್‌ನ ವಿಜೇತ ಜರ್ಮನಿಯ ವಿನ್ಸೆಂಟ್ ಕೀಮರ್ 2.5–1.5 ರಿಂದ ಅಮೆರಿಕದ ರಾಬ್ಸನ್ ರೇ ಅವರನ್ನು ಸೋಲಿಸಿದರು.

ಫಿಡೆ ಮಹಿಳಾ ವಿಶ್ವಕಪ್ ಟೂರ್ನಿ ಎಂಟರ ಘಟ್ಟಕ್ಕೆ ಭಾರತದ ನಾಲ್ವರು


ದಿವ್ಯಾ


ಹಂಪಿ


ಹಾರಿಕಾ


ವೈಶಾಲಿ

ಬಟುಮಿ (ಪಿಟಿಐ): ಭಾರತದ ಐಎಂ ಆಟಗಾರ್ತಿ ದಿವ್ಯಾ ದೇಶಮುಖ್ ಅವರು ತಮಗಿಂತ ಉನ್ನತ ರೇಟಿಂಗ್ ಪಡೆದಿರುವ ಚೀನಾದ ಗ್ರ್ಯಾಂಡ್ ಮಾಸ್ಟರ್ ಝು ಜಿನೆರ್ ಅವರನ್ನು ಟೈಬ್ರೇಕರ್‌ನಲ್ಲಿ ಸೋಲಿಸಿ ಫಿಡೆ ಮಹಿಳಾ ವಿಶ್ವಕಪ್‌ನಲ್ಲಿ ಶುಕ್ರವಾರ ಕ್ವಾರ್ಟರ್‌ಫೈನಲ್ ತಲುಪಿದರು. ಗ್ರ್ಯಾಂಡ್‌ಮಾಸ್ಟರ್ ಗಳಾದ ಕೋನೇರು ಹಂಪಿ, ಡಿ. ಹಾರಿಕಾ ಮತ್ತು ಆರ್.ವೈಶಾಲಿ ಅವರೂ ಎಂಟರ ಘಟ್ಟ ಪ್ರವೇಶಿಸಿದರು.

ಭಾರತದ ನಾಲ್ವರು ಆಟಗಾರ್ತಿಯರು ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆದಂತಾಗಿದೆ. ದಿವ್ಯಾ ಅವರು ಮುಂದಿನ ಸುತ್ತಿನಲ್ಲಿ ಸ್ವದೇಶದ ಹಾರಿಕಾ ಅವರನ್ನು ಎದುರಿಸಲಿದ್ದಾರೆ. ಹಂಪಿ ಅವರು ಸಂಗ್ ಯುಕ್ಸಿನ್ (ಚೀನಾ) ವಿರುದ್ಧ; ವೈಶಾಲಿ ಅವರು ತಾನ್ ಝೊಂಗಿ (ಚೀನಾ) ವಿರುದ್ಧ ಸೆಣಸಾಡುವರು.

ದಿವ್ಯಾ 25 + 10 ನಿಮಿಷಗಳ ರ್‍ಯಾಪಿಡ್ ಟೈಬ್ರೇಕ್‌ನ ಮೊದಲ ಆಟ ಗೆದ್ದು ಮಾನಸಿಕ ಮೇಲುಗೈ ಪಡೆದರು. ನಂತರ ಎರಡನೇ ಆಟವನ್ನು ಡ್ರಾ ಮಾಡಿಕೊಂಡು 1.5–0.5 (ಒಟ್ಟಾರೆ 2.5–1.5)ರಲ್ಲಿ ಜಯ ಗಳಿಸಿದರು. ಇವರಿಬ್ಬರ ನಡುವಣ ಎರಡು ಪಂದ್ಯಗಳ ಕ್ಲಾಸಿಕಲ್ ಸುತ್ತಿನಲ್ಲಿ ಇಬ್ಬರೂ ಒಂದೊಂದು ಪಂದ್ಯ ಗೆದ್ದು ಸ್ಕೋರ್ ಸಮನಾದ ಕಾರಣ ಟೈಬ್ರೇಕ್ ಆಡಿಸಲಾಗಿತ್ತು.

ಇನ್ನೊಂದು ಪ್ರಿಕ್ವಾರ್ಟರ್ ಫೈನಲ್‌ನ ಟೈಬ್ರೇಕ್‌ನಲ್ಲಿ ಹಂಪಿ 1.5–0.5 ರಿಂದ ಸ್ವಿಟ್ಜರ್ಲೆಂಡ್‌ನ ಅಲೆಕ್ಸಾಂಡ್ರಾ ಕೊಸ್ಟಾನಿಯುಕ್ ಅವರನ್ನು ಸೋಲಿಸಿದರು. ಮೊದಲ ರ್‍ಯಾಪಿಡ್ ಆಟವನ್ನು ಹಂಪಿ ಗೆದ್ದರು. ಎರಡನೇ ಆಟ ಡ್ರಾ ಆಗಿದ್ದರಿಂದ ಹಂಪಿ ಮುನ್ನಡೆದರು. ಇವರಿಬ್ಬರ ನಡುವೆ ಕ್ಲಾಸಿಕಲ್ ಸುತ್ತಿನ ಎರಡೂ ಪಂದ್ಯಗಳು ಡ್ರಾ ಆಗಿದ್ದವು.

ಡಿ.ಹಾರಿಕಾ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಕ್ಯಾಥರಿನಾ ಲಾಗ್ನೊ ಅವರನ್ನು 3.5–2.5 ರಿಂದ ಸೋಲಿಸಿದರು. ಇವರಿಬ್ಬರ ನಡುವೆ ಕ್ಲಾಸಿಕಲ್ ಪಂದ್ಯಗಳು ಡ್ರಾ ಆಗಿದ್ದವು.

ವೈಶಾಲಿ ಅವರು 4.5–3.5ರಿಂದ ಕಜಕಸ್ತಾನದ ಮೆರಯುರ್ಟ್ ಕಮಲಿದೆನೋವಾ ವಿರುದ್ಧ ಗೆದ್ದರು.

ಮಹಿಳಾ ಕ್ರಿಕೆಟ್: ಎರಡನೇ ಏಕದಿನ ಪಂದ್ಯ ಇಂದು

ಸರಣಿ ವಶದ ಛಲದಲ್ಲಿ ಭಾರತ


ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್

ಲಂಡನ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯವನ್ನು ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಭಾರತದ ವನಿತೆಯರು ಶನಿವಾರ ನಡೆಯುವ ಎರಡನೇ ಪಂದ್ಯದಲ್ಲೂ ಪಾರಮ್ಯ ಮುಂದುವರಿಸುವ ಛಲದಲ್ಲಿದ್ದಾರೆ.

ಸೌತಾಂಪ್ಟನ್‌ನಲ್ಲಿ ಬುಧವಾರ ನಡೆದ ಆರಂಭಿಕ ಪಂದ್ಯವನ್ನು ಹರ್ಮನ್‌ಪ್ರೀತ್ ಕೌರ್ ಬಳಗವು ನಾಲ್ಕು ವಿಕೆಟ್‌ಗಳಿಂದ ಗೆದ್ದು, ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆದಿದೆ.

ಲಾರ್ಡ್ಸ್‌ನಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲೂ ಉತ್ತಮ ಪ್ರದರ್ಶನ ತೋರಿ ಸರಣಿ ವಶಮಾಡಿಕೊಳ್ಳುವತ್ತ ಭಾರತ ಚಿತ್ತ ಹರಿಸಿದೆ. ಮತ್ತೊಂದೆಡೆ ಆತಿಥೇಯ ತಂಡಕ್ಕೆ ಸರಣಿಯನ್ನು ಜೀವಂತವಾಗಿ ಇಡಲು ಈ ಪಂದ್ಯ ಮಹತ್ವದ್ದಾಗಿದೆ.

ಮೇ ತಿಂಗಳಿನಲ್ಲಿ ನಡೆದ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ಒಳಗೊಂಡ ತ್ರಿಕೋನ ಸರಣಿಯಲ್ಲಿ ಚಾಂಪಿಯನ್ ಆಗಿರುವ ಭಾರತ ತಂಡವು ಇದೀಗ ಸತತ ಎರಡನೇ ಸರಣಿ ಗೆಲುವನ್ನು ಎದುರು ನೋಡುತ್ತಿದೆ. ಸೆಪ್ಟೆಂಬರ್ 30ರಿಂದ ಭಾರತದ ಆತಿಥ್ಯದಲ್ಲಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದ್ದು, ಅದರ ಪೂರ್ವತಯಾರಿ ನಿಟ್ಟಿನಲ್ಲಿ ಇಂಗ್ಲೆಂಡ್ ವಿರುದ್ಧದ ಈ ಸರಣಿ ಹೆಚ್ಚಿನ ಮಹತ್ವ ಪಡೆದಿದೆ.

ಮೊದಲ ಪಂದ್ಯದಲ್ಲಿ ಆತಿಥೇಯ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 258 ರನ್ ಗಳಿಸಿತ್ತು. ದೀಪ್ತಿ ಶರ್ಮಾ (62*) ಅವರ ಅರ್ಧಶತಕದ ನೆರವಿನಿಂದ ಭಾರತ ತಂಡವು 10 ಎಸೆತಗಳು ಬಾಕಿ ಇರುವಂತೆ 6 ವಿಕೆಟ್‌ಗಳಿಗೆ 262 ರನ್ ಗಳಿಸಿ ಸರಣಿಯಲ್ಲಿ ಶುಭಾರಂಭ ಮಾಡಿತ್ತು.

ಇದಕ್ಕೂ ಮುನ್ನ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಐದು ಪಂದ್ಯಗಳ ಟಿ20 ಸರಣಿಯನ್ನು 3–2ರಿಂದ ಗೆದ್ದು ಚಾರಿತ್ರಿಕ ಸಾಧನೆ ಮಾಡಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 3.30

ಪ್ರತೀಕಾ ರಾವಲ್, ಇಂಗ್ಲೆಂಡ್ ಮಹಿಳಾ ತಂಡಕ್ಕೆ ದಂಡ



ದುಬೈ (ಪಿಟಿಐ): ಸೌತಾಂಪ್ಟನ್‌ನಲ್ಲಿ ನಡೆದ ಭಾರತ–ಇಂಗ್ಲೆಂಡ್ ಮಹಿಳಾ ತಂಡಗಳ ನಡುವಣ ಮೊದಲ ಏಕದಿನ ಪಂದ್ಯದಲ್ಲಿ ಶಿಸ್ತುಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಬ್ಯಾಟರ್ ಪ್ರತೀಕಾ ರಾವಲ್ ಅವರಿಗೆ ಐಸಿಸಿ ಶುಕ್ರವಾರ ದಂಡ ವಿಧಿಸಿದೆ.

ಪಂದ್ಯದಲ್ಲಿ ಪ್ರತ್ಯೇಕವಾಗಿ ಎರಡು ಬಾರಿ ನೀತಿ ಸಂಹಿತೆ ಉಲ್ಲಂಘಿಸಿದ ಭಾರತದ ಆರಂಭಿಕ ಆಟಗಾರ್ತಿ ಪ್ರತೀಕಾ ಅವರಿಗೆ ಪಂದ್ಯ ಸಂಭಾವನೆಯ ಶೇ. 10 ರಷ್ಟು ದಂಡ ಹಾಕಲಾಗಿದೆ. ಇದರ ಜೊತೆಗೆ ಅವರ ಶಿಸ್ತಿನ ಖಾತೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆ ಮಾಡಲಾಗಿದೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

18ನೇ ಓವರಿನಲ್ಲಿ ರನ್ನಿಗೆ ಓಡುವಾಗ ಅವರು ಬೌಲರ್ ಲಾರೆನ್ ಫೈಲರ್ ಅವರ ಭುಜಕ್ಕೆ ತಾಗಿಕೊಂಡು ಓಡಿದ್ದರು. ಇದು ಉದ್ದೇಶಪೂರ್ವಕವಾಗಿದೆ. ಮುಂದಿನ ಓವರಿನಲ್ಲಿ (ಸೋಫಿ ಎಕ್ಲೆಸ್ಟೋನ್ ಬೌಲಿಂಗ್) ಬೌಲ್ಡ್ ಆದ ಮೇಲೆ ಸಹ ಅವರು ಬೌಲರ್ ಮೈಗೆ ತಾಗಿಕೊಂಡು ಪೆವಿಲಿಯನ್‌ಗೆ ನಡೆದಿದ್ದರು ಎಂದೂ ವಿವರಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರತೀಕಾ, ಭುಜ ಸ್ಪರ್ಶವು ಉದ್ದೇಶಪೂರ್ವಕವಾಗಿರಲಿಲ್ಲ ಎಂದರು.

ಬ್ರಂಟ್ ಬಳಗಕ್ಕೂ ದಂಡ: ಬುಧವಾರದ ಪಂದ್ಯದಲ್ಲಿ ನಿಧಾನಗತಿಯಲ್ಲಿ ಬೌಲಿಂಗ್ ಮಾಡಿದ ಇಂಗ್ಲೆಂಡ್ ಮಹಿಳಾ ತಂಡಕ್ಕೂ ಐಸಿಸಿ ದಂಡ ವಿಧಿಸಿದೆ. ನಿಗದಿತ ಅವಧಿಯಲ್ಲಿ ಒಂದು ಓವರ್‌ನಷ್ಟು ಹಿಂದಿದ್ದ ನ್ಯಾಟ್ ಶಿವರ್ ಬ್ರಂಟ್ ಬಳಗಕ್ಕೆ ಪಂದ್ಯ ಸಂಭಾವನೆಯ ಶೇ. 5ರಷ್ಟು ದಂಡ ಹಾಕಲಾಗಿದೆ.

ಚಿಟಿಕೆ ಸುದ್ದಿ

ಬ್ಯಾಡ್ಮಿಂಟನ್: ಭಾರತ ಶುಭಾರಂಭ


ತನ್ವಿ ಶರ್ಮಾ

ಸೋಲೊ (ಇಂಡೊನೇಷ್ಯಾ), (ಪಿಟಿಐ): ಭಾರತ ತಂಡ, ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ ‘ಡಿ’ ಗುಂಪಿನ ಪಂದ್ಯದಲ್ಲಿ ಶುಕ್ರವಾರ ಶ್ರೀಲಂಕಾ ತಂಡವನ್ನು 110–69 ರಿಂದ ಸೋಲಿಸಿತು.

ಈ ಚಾಂಪಿಯನ್‌ಷಿಪ್‌ನಲ್ಲಿ ರಿಲೇ ಪಾಯಿಂಟ್ ಮಾದರಿಯ ವ್ಯವಸ್ಥೆ ಅಳವಡಿಸಲಾಗಿದೆ. ತಂಡವೊಂದು ಪಂದ್ಯ ಗೆಲ್ಲಬೇಕಾದರೆ 110 ಪಾಯಿಂಟ್ ಗಳಿಸಬೇಕಾಗುತ್ತದೆ.

ವಿಷ್ಣು ಕೋಡೆ ಮತ್ತು ರೆಷಿಕಾ ಯು ಅವರನು 11–5 ರಿಂದ ಕೆನೆತ್ ಅರುಗ್ಗೊಡ– ಇಸುರಿ ಅತ್ತನಾಯಕೆ ಜೋಡಿಯನ್ನು ಸೋಲಿಸಿತು.

ಗಾಯತ್ರಿ– ಮಾನಸಾ ರಾವತ್ ಸೋದರಿಯರ ಜೋಡಿ ಇನ್ನೊಂದು ಪಂದ್ಯದಲ್ಲಿ 22–14 ರಿಂದ ಅತ್ತನಾಯಕೆ– ಸಿತುಮಿ ಡಿ ಸಿಲ್ವ ಜೋಡಿಯನ್ನು ಮಣಿಸಿತು. ತನ್ವಿ ಶರ್ಮಾ 33–21 ರಿಂದ ಸಿತುಲಿ ರಣಸಿಂಘೆ ಅವರನ್ನು ಹಿಮ್ಮೆಟ್ಟಿಸಿದರು.

ಹಾಕಿ: ಭಾರತ ಎ ತಂಡಕ್ಕೆ ಸೋಲು

ಆ್ಯಂಟ್‌ವರ್ಪ್ (ಬೆಲ್ಜಿಯಂ) (ಪಿಟಿಐ): ಯುರೋಪ್ ಪ್ರವಾಸದಲ್ಲಿರುವ ಭಾರತ ‘ಎ’ ಪುರುಷರ ಹಾಕಿ ತಂಡವು ಗುರುವಾರ ನಡೆದ ಪಂದ್ಯದಲ್ಲಿ ಆತಿಥೇಯ ಬೆಲ್ಜಿಯಂ ಎದುರು 1–3 ಗೋಲುಗಳಿಂದ ಪರಾಭವಗೊಂಡಿತು.

ನಾಯಕ ಸಂಜಯ್ ಅವರು ಭಾರತದ ಪರ ಏಕೈಕ ಗೋಲು ದಾಖಲಿಸಿದರು.

ಬೆಲ್ಜಿಯಂ ತಂಡವು ಪಂದ್ಯದ ಮೊದಲ ಕ್ವಾರ್ಟರ್‌ನಲ್ಲೇ ಮೂರು ಗೋಲುಗಳನ್ನು ಗಳಿಸಿ ಪಂದ್ಯದಲ್ಲಿ ಹಿಡಿತ ಸಾಧಿಸಿತು. ಭಾರತದ ಆಟಗಾರರು ನಂತರದ ಅವಧಿಯಲ್ಲಿ ಪ್ರತಿರೋಧ ತೋರಿದರೂ, ಗೆಲುವು ದಕ್ಕಲಿಲ್ಲ.

ಈಸ್ಟ್ ಬೆಂಗಾಲ್‌ಗೆ ಮೂರು ವಿದೇಶಿ ಆಟಗಾರರು



ಕೋಲ್ಕತ್ತ (ಪಿಟಿಐ): ಮುಂಬರುವ ಇಂಡಿಯನ್ ಸೂಪರ್ ಲೀಗ್ ಋತುವಿಗೆ ಮೂವರು ವಿದೇಶಿ ಆಟಗಾರರನ್ನು ಸೇರ್ಪಡೆ ಮಾಡಿಕೊಂಡಿರುವುದಾಗಿ ಈಸ್ಟ್ ಬೆಂಗಾಲ್ ತಂಡ ಶುಕ್ರವಾರ ಪ್ರಕಟಿಸಿದೆ.

ಬ್ರೆಜಿಲ್‌ನ ಮಿಡ್‌ಫೀಲ್ಡರ್ ಮಿಗೆಲ್ ಫಿಗುಯೆರಾ, ಪ್ಯಾಲಸ್ತೀನಿನ ಮೊಹಮ್ಮದ್ ರಶೀದ್ ಮತ್ತು ಅರ್ಜೆಂಟೀನಾದ ಡಿಫೆಂಡರ್ ಕೆವಿನ್ ಸಿಬಿಲ್ ಅವರು ಕೋಲ್ಕತ್ತದ ಕ್ಲಬ್ ಸೇರಿಕೊಂಡವರು.

ಮಿಗೆಲ್ ಅವರು ಬಾಂಗ್ಲಾದೇಶದ ವಸುಂಧರಾ ಕಿಂಗ್ಸ್ ಪರ ಎರಡು ಪ್ರೀಮಿಯರ್ ಲೀಗ್ ಮತ್ತು ಸತತ ಎರಡು ಇಂಡಿಪೆಂಡನ್ಸ್ ಕಪ್ ಟೂರ್ನಿಗಳಲ್ಲಿ ಆಡಿದ್ದಾರೆ. 64 ಪಂದ್ಯಗಳಲ್ಲಿ 37 ಗೋಲು ಗಳಿಸಿದ್ದು, 26 ಗೋಲಿಗೆ ನೆರವು ನೀಡಿದ್ದಾರೆ.

ಜಡೇಜ ಆಟ ಕೊಂಡಾಡಿದ ತಂಡ


ರವೀಂದ್ರ ಜಡೇಜ

ಲಂಡನ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ಲಾರ್ಡ್ಸ್ ಟೆಸ್ಟ್‌ನಲ್ಲಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರ ಆಟವನ್ನು ಭಾರತ ತಂಡವು ಒಕ್ಕೊರಲಿನಿಂದ ಶ್ಲಾಘಿಸಿದೆ. ಅವರ ಕೆಚ್ಚೆದೆಯ ಆಟವನ್ನು ತಂಡದ ಹೆಡ್ ಕೋಚ್ ಗೌತಮ್ ಗಂಭೀರ್ ಅವರು ‘ಅಮೋಘ ಹೋರಾಟ’ ಎಂದು ಬಣ್ಣಿಸಿದ್ದಾರೆ.

ಜಡೇಜಾ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 181 ಎಸೆತಗಳನ್ನು ನಿಭಾಯಿಸಿ ಅಜೇಯ 61 ರನ್ ಗಳಿಸಿದ್ದರು. ಆದರೆ ಅವರ ಹೋರಾಟ ಗೆಲುವಿಗೆ ಸಾಕಾಗಲಿಲ್ಲ. ಇಂಗ್ಲೆಂಡ್ ಮೂರನೇ ಟೆಸ್ಟ್ ಪಂದ್ಯವನ್ನು 22 ರನ್‌ಗಳಿಂದ ಗೆದ್ದುಕೊಂಡಿತ್ತು.

‘ಅವರದು ಅಮೋಘ ಹೋರಾಟ. ಜಡ್ಡು ತೋರಿದ ಆಟ ಅದ್ಭುತವಾದುದು’ ಎಂದು ಗಂಭೀರ್ ಅವರು ಬಿಸಿಸಿಐ ವೆಬ್‌ಸೈಟ್‌ನಲ್ಲಿ ಶುಕ್ರವಾರ ಪ್ರಕಟಿಸಿದ ವಿಡಿಯೊದಲ್ಲಿ ವರ್ಣಿಸಿದ್ದಾರೆ. ಅತ್ಯಂತ ಮೌಲ್ಯಯುತ ಆಟಗಾರ (ಎಂವಿಪಿ) ಜಡೇಜ ಎಂಬ ಶೀರ್ಷಿಕೆಯನ್ನು ವಿಡಿಯೊಗೆ ನೀಡಲಾಗಿದೆ.

ಗೆಲುವಿಗೆ 193 ರನ್‌ಗಳ ಬೆನ್ನಟ್ಟಿದ ಭಾರತ 112 ರನ್‌ಗಳಾಗುವಷ್ಟರಲ್ಲಿ 8 ವಿಕೆಟ್ ಕಳೆದುಕೊಂಡಿತ್ತು. ಆದರೆ ಏಳನೇ ಕ್ರಮಾಂಕದಲ್ಲಿ ಆಡಲಿಳಿದ ಜಡೇಜ ದಿಟ್ಟತನ ಮತ್ತು ಧೈರ್ಯದಿಂದ ಆತಿಥೇಯರ ದಾಳಿ ಎದುರಿಸಿದ್ದರು. ಕೆಳಕ್ರಮಾಂಕದ ಆಟಗಾರರಾದ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಜೊತೆ ಹೋರಾಟ ನಡೆಸಿ ಗೆಲುವಿನ ಕ್ಷೀಣ ಆಸೆ ಮೂಡಿಸಿದ್ದರು. ಇವರಿಬ್ಬರ ಜೊತೆ 34 ಓವರುಗಳನ್ನು ಆಡಿದ್ದರು. ಆದರೆ ತಂಡ 170ಕ್ಕೆ ಆಲೌಟ್ ಆಗಿತ್ತು.

‘ಅವರ ಬ್ಯಾಟಿಂಗ್ ಇನ್ನೊಂದು ಹಂತದ ಮಟ್ಟ ತಲುಪಿದೆ. ಅವರ ಸ್ಥಿರ ಆಟ ಡ್ರೆಸಿಂಗ್ ರೂಮ್‌ನಲ್ಲಿ ವಿಶ್ವಾಸ ಮೂಡಿಸಿದೆ. ಅವರ ರಕ್ಷಣೆ ಬಲಿಷ್ಠವಾಗಿದೆ. ಅವರು ಪರಿಣತ ಬ್ಯಾಟರ್ ರೀತಿ ಕಾಣುತ್ತಿದ್ದಾರೆ’ ಎಂದು ಸಹಾಯಕ ಕೋಚ್ ರಿಯಾನ್ ಟೆನ್ ಡೊಶೆಟ್ ಹೇಳಿದ್ದಾರೆ.

ಒತ್ತಡದ ಸನ್ನಿವೇಶದಲ್ಲಿ ಜಡೇಜ ತೋರಿದ ಸಂಯಮವನ್ನು ಬ್ಯಾಟಿಂಗ್ ಕೋಚ್ ಹಾಗೂ ಸೌರಾಷ್ಟ್ರದ ಅವರ ಮಾಜಿ ಸಹ ಆಟಗಾರ ಸಿತಾಂಶು ಕೊಟಕ್ ಅವರೂ ಕೊಂಡಾಡಿದ್ದಾರೆ. ಜಡೇಜ ಅವರ ಆಲ್‌ರೌಂಡ್ ಆಟದ ಮೌಲ್ಯವನ್ನು ಸಿರಾಜ್ ಸಹ ಶ್ಲಾಘಿಸಿದ್ದಾರೆ.

2036ರ ಒಲಿಂಪಿಕ್ಸ್‌ಗೆ ಸಿದ್ಧತೆ: ಅಮಿತ್ ಶಾ



ನವದೆಹಲಿ (ಪಿಟಿಐ): ಭಾರತ 2036ರ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುತ್ತಿದ್ದು ಅಂದಾಜು 3,000 ಅಥ್ಲೀಟುಗಳಿಗೆ ತಿಂಗಳಿಗೆ ₹50,000 ದಂತೆ ನೆರವು ಒದಗಿಸಲಿದೆ. ಇದಕ್ಕಾಗಿ ವಿವರವಾದ ಮತ್ತು ವ್ಯವಸ್ಥಿತವಾದ ಯೋಜನೆ ರೂಪಿಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಭಾರತ ಆ ಒಲಿಂಪಿಕ್ಸ್‌ನ ಪದಕ ಪಟ್ಟಿಯಲ್ಲಿ ಅಗ್ರ ಐದರಲ್ಲಿ ಸ್ಥಾನ ಪಡೆಯಲಿದೆ ಎಂಬ ವಿಶ್ವಾಸವನ್ನು ಅಮಿತ್ ಶಾ ವ್ಯಕ್ತಪಡಿಸಿದರು. ಅವರು 21ನೇ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ದಳದ ಕ್ರೀಡಾಕೂಟದಲ್ಲಿ ಭಾಗವಹಿಸುವ ತಂಡವನ್ನು ಗೌರವಿಸಿ ಮಾತನಾಡಿದರು.

ಭಾರತ 2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಈಗಾಗಲೇ ಬಿಡ್ ಸಲ್ಲಿಸಿದೆ. ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯಕ್ಕೂ ಆಸಕ್ತಿಪತ್ರ ಸಲ್ಲಿಸಿದೆ. ಮತ್ತೊಮ್ಮೆ ಏಷ್ಯನ್ ಗೇಮ್ಸ್ ಆತಿಥ್ಯಕ್ಕೂ ಯತ್ನಿಸಲಿದೆ ಎಂದು ತಿಳಿಸಿದರು.

ಕ್ರೀಡೆ ಜನಸಾಮಾನ್ಯರ ಜೀವನದ ಭಾಗವಾಬೇಕು ಎಂಬುದು ಈ ಕ್ರೀಡೆಗಳ ಆತಿಥ್ಯ ಪ್ರಯತ್ನದ ಉದ್ದೇಶವಾಗಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಜಿಂಬಾಬ್ವೆ ವಿರುದ್ಧ ನ್ಯೂಜಿಲೆಂಡ್‌ಗೆ ಜಯ


ಡೆವಾನ್ ಕಾನ್ವೆ

ಹರಾರೆ (ಎಎಫ್‌ಪಿ): ಮ್ಯಾಟ್ ಹೆನ್ರಿ ಅವರ ಉತ್ತಮ ಬೌಲಿಂಗ್ ಮತ್ತು ಡೆವಾನ್ ಕಾನ್ವೆ ಅವರ ಅಜೇಯ ಅರ್ಧ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಟಿ20 ತ್ರಿಕೋನ ಸರಣಿ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಜಿಂಬಾಬ್ವೆ ತಂಡವನ್ನು ಸೋಲಿಸಿತು.

40 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿಗಳಿದ್ದ ಅಜೇಯ 59 ರನ್ ಬಾರಿಸಿದ ಕಾನ್ವೆ ಪಂದ್ಯದ ಆಟಗಾರನಾದರು. ಈ ಗೆಲುವಿನಿಂದ ನ್ಯೂಜಿಲೆಂಡ್ ಜುಲೈ 26ರಂದು ನಡೆಯುವ ಫೈನಲ್‌ಗೆ ಬಹುತೇಕ ಸ್ಥಾನ ಕಾದಿರಿಸಿತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರುಗಳಲ್ಲಿ 7ಕ್ಕೆ 120 (ವೆಸ್ಲಿ ಮಧೆವೆರ್ 36, ಬ್ರಿಯಾನ್ ಬೆನೆಟ್ 21; ಮ್ಯಾಟ್ ಹೆನ್ರಿ 26ಕ್ಕೆ3); **ನ್ಯೂಜಿಲೆಂಡ್:** 13.5 ಓವರುಗಳಲ್ಲಿ 2ಕ್ಕೆ 122 (ಡೆವಾನ್ ಕಾನ್ವೆ ಔಟಾಗದೇ 59, ರಚಿನ್ ರವೀಂದ್ರ 30, ಡೆರಿಲ್ ಮಿಚೆಲ್ ಔಟಾಗದೇ 26).

ಬೆಂಗಳೂರು ರೇಸ್

ಸೀಕ್ರೆಟ್ ಸೇಂಟ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಪೊಲೀಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀಕ್ರೆಟ್ ಸೇಂಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈ ಸಾಲಿಟೇರ್ 4, ರಾಫಲ್ಸ್ 3, ಎಂಬೊಸಮ್ 7
2ನೇ ರೇಸ್: ಶೀಈಸ್ ಸೋ ಬ್ಯೂಟಿಫುಲ್ 1, ಗೋಲ್ಡನ್ ಗ್ಯಾಲರಿ 10, ಮೇಫನ್ 8
3ನೇ ರೇಸ್: ಅಕ್ವಾಸ್ಟಿಕ್ 5, ಡಿಸಿಪಲ್ 8, ಸ್ಟ್ರಾವಿನ್‌ಸ್ಕಿ 6
4ನೇ ರೇಸ್: ಹುಸನಾರ 4, ಸೇಂಟ್ ಆಫ್ ರೈನ್ 9, ಇಲಿಯಾ 5
5ನೇ ರೇಸ್: ಸೀಕ್ರೆಟ್ ಸೇಂಟ್ 2, ವಿಕ್ಟರ್ ಹುಗೊ 5, ದಿ ಲೀಡರ್ 4
6ನೇ ರೇಸ್: ಕಂಟಿನ್ಯೂಸ್ 5, ಸ್ಮಾಲ್ ಡ್ರೀಮ್ಸ್ 4, ವಿನ್‌ಫೀಲ್ಡ್ 11

ಉತ್ತಮ ಬೆಟ್: ಅಕ್ವಾಸ್ಟಿಕ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಪ್ರಜಾವಾಣಿ ಶನಿವಾರ • ಜುಲೈ 19, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

Majestic And Around

FOR SALE: 67X72'6" (4857.50 SFT) West Facing Site with old Building at 2nd Cross Kempe Gowda Road, Behind Indian Bank. BBMP Ward 109. Brokers Excuse. Contact: 9845177455/ 9844060712

Vishweshwariah Layout

65X80 EAST_NORTH CORNER SITE SALE 60 Feet Road, Vishweshwaraiah Layout, 8th Block. Brokers`Excuse. Genuine Buyers Contact: 8105688602.

30X40 7TH block West Facing, Near Nirmal School, RTO Visvesvaraya layout. 12750/- persft Negotiable. 9731151366.

AVAILABLE BDA Site Vishweshwariah Layout 3rd Block 30X40 West Facing Good Location Genuine Buyers: 7338688111

VISVESHSWARAIAH LAYOUT 6th Block BDA Sites Sale 40x60 North Facing and 30x40 Good Location: 7975986504

VISHWESWARAIAH BDA 9th`Block.40x60 South_Facing, 40_Feet`Road Near`Ambedkar Engineering College. Price_10,500/- Negotiable. Direct_Owner. Call_9844947990 8431089761.

"VIDHYNIKETHAN SCHOOL near 40`feet Road East Good location, BDA- khatha 100% Vastu, Genuine Buyers. 9448733456/ 7259675150"

COMMERCIAL BDA SITE SALE 40x60 N/F Vishveswaraiah Layout 1st Block, 100ft Road. Contact: 7411994069, 9742681666

Hegganahalli

PLOT SALE 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

J P Nagar

'AVAILABLE' JPNAGAR 4TH Phase Dollers Colony 50X80,South Facing, Full Cheque Payment Good Location Contact :9945114693

AVAILABLE BDA 40x60 WEST FACING JP.NAGAR 9TH PHASE 3RD BLOCK FOR PRICE. CONTACT: 7022435107

Nagarabhavi

SITE SALE, North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

House

Jayanagar

JAYANAGAR T Block, Excellent Location Residential 40x56 Old_House (South) and_40x60 East 3_Block, Murali - 9845232711

Hebbal

RESIDENTIAL PROPERTY FOR SALE
G+3 Independent Residential Property in a Prime Location behind Godrej Woodsman Apartment, Hebbal For Sale
(DC converted land & with E Khata
(Only genuine buyers)
(Brokers Excuse)
Contact : 7996992555

Flat

Chandra Layout

PENTHOUSE FLAT for Sale. 3 Bedroom.1600sft Super Built-up. 50Mtr fromAttiguppe Metro- Station, Chandra Layout, Vijaynagar 1.8Cr Negotiable. 9844060483

Uttarahalli

4BHK NEW Flats Sale, Ready_to_move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Nagarabhavi

FLATS FOR-SALE @ Nagarabhavi Chandra Layout 2_&_3BHK Ready to Move In_Good Location Call:9538472420 9845066608

Farm House/ Land/ Resorts

General

SOUTH GOA plot of 1225 Square meters at 20500 if interested message 9963998895

Commercial Land

Mysore

COMMERCIAL LAND FOR SALE
52,272 sqft / 1.08 Acres
Rs.1300/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property HD Kote Main Road Mysore.
Contact: GANISHKA PROPERTIES 97397 03467 Buy and sell

Electronic City

SALE 27750SFT KIADB Industrial/ Commercial Land at Electronic City II Phase, North & South, Roads North 260ft frontage, Clear titles, VERNA DEVELOPERS, MG Road, B'lore, 9916310226/ 9620253180.

Nelamangala

120×150 18000SQFT Commercial land for Sale at Makli Near Hemalaya drug quoted 8,750/- per Sqft for More details Contact: 9902333355

Nelamangala

17,10 ACRES Commercial Converted Land for Sale Facing 100ft Road Rs.6Cr kanamangala gate Near Nelamangala for more details Contact: 9902333355

Commerical

Mysore Road

KEMPEGOWDA LAYOUT commercial site number 4973 40'x64' 80' road south facing 7th block J sector 100 metres from National public school 13,000 per square feet not negotiable 9448706071

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Commerical

Hebbal

ON BELLARY Main Road Commercial Property East 25,000Sft Converted Near Nandi Upchar Hotel Clear-Titles Call:9341260828

Agricultural Land

Jigani

FOR SALE AGRICULTURE LANDS/ PLOTS ON /OFF HAROHALLI- ANEKAL- JIGANI ROAD, SMALL EXTENT FOR GOOD INVESTMENT WITH HIGH APPRECIATION IN FUTURE, NOW HAPPENING FOR INVESTMENT. CONTACT VICTORY PROPERTIES: 7411692219/ 8618576685/ 9482303339.

South

FOR SALE NELUGULI, BANGALORE SOUTH- 560082, GREATER BANGALORE LIMITS, 5.5 GUNTAS, 2 PLOTS, VERY GOOD INVESTMENT FOR FUTURE. CONTACT VICTORY PROPERTIES: 7411692219/ 8618576685/ 9482303339.

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Mysore Road

"WANTED BDA Approved or BMRDA Approved Sites Near Hemgepura, Karbele, Gollhalli, Kumbalgud, Hejjala Surroundings. 9845178335"

Vishweshwariah Layout

REQUIRED BDA SITES @ Nagarbhavi, Vishweshwaraiya layout, Kempegowda layout. For Immediate Purchase any measurement. 9513955756, 9513119696.

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

BUILDERS ESSENTIAL

Contractors

FOR PROPERTY OWNERS STAYING OUT OF BANGALORE/ INDIA, WE TAKE CARE OF YOUR PROPERTY MAINTENANCE/ FIXING TENANTS/ CIVIL, PAINTING, ELECTRICAL, CARPENTRY, SOLAR WORKS, PROPERTY MANAGEMENT, PROPERTY MONITORING, CONTACT VICTORY PROPERTIES: BANGALORE, A LEADING 35- LEADING'>YEARS EXPERIENCED REAL ESTATE COMPANY. info@victoryproperties.in; www.victoryproperties.in; 7411692219/ 8618576685/ 9482303339.

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR RENT COMMERCIAL OFFICEACCOMODATION ONEAST END ROAD,JAYANAGAR 4TH "T"BLOCK, 2300 SQFT,1ST FLOOR, RS.75/PER SQFT WITHOUTFITTINGS, PARTITIONS,WITH FITTINGS RS.85/.CONTACT VICTORYPROPERTIES: 7411692219/8618576685/9482303339.

COMMERCIAL BARE Space, 1000 sqft 3rd Floor, Available for RENT @ HMT Layout, Mathikere. 9740394491

FULLY FURNISHED 24,000 sft, 400 seater office space for lease at Financial District, Hyderabad. Grade A building, Central AC, Grand Atrium. Agents welcome! Ph: 9347576914.

Flats

3 BHK Flat for Rent at H.B.R. Layout, Brokers Excuse, For details Contact. JOSEPH. 9900822901.

House

HOUSE AVAILABLE FOR RENT, WILSON GARDEN, GOOD LOCATION, 3 BHK, 2 BATHROOMS, 2ND & 3RD FLOOR, RENT 45000/. CONTACT VICTORY PROPERTIES: 7411692219/ 8618576685/ 9482303339.

PUBLIC NOTICE

PUBLIC NOTICE

This is to bring to the notice of the General Public that our clients are intending to purchase the Schedule Property of Late Muniswamy Ram Prasad from his son Ajay Prasad. Any person or persons claiming any right, title, interest, lien, mortgage, charge, lease, tenancy, license, maintenance, succession, or any other claim over the said property should inform in writing only,along with supporting documents, to the under-signed at the below-mentioned address within 7 (Seven) days from the date of publication of this notice. In the absence of any claims or objections being received within the said period, it shall be presumed that there are no claims or encumbrances on the property, and our clients will proceed with the transaction.

SCHEDULE PROPERTY

All that piece and parcel of the property bearing Site No. 118, situated at 4th Main Road, State Bank of Mysore Colony, Anandnagar, Hebbal, Bengaluru – 560024, Corporation Ward No. 96, Old PID No. 93-3-118, New EPID No. 1975867166, measuring 270.63 square meters / 2912.50 square feet, together with an RCC roofed structure measuring approximately 1500 square feet, and bounded as follows:

East By: Property No. 372 (Old Sy. No. 97) of HMT Layout, **West By:** Property No. 119 of SBM Layout, **North By:** 4th Main Road, **South By:** Property No. 117 of SBM Layout.

Sd/-
M N Srinivas, Advocate
For M R Narayan & Co.,
Advocates & Tax Consultants
No. 768, 34th Cross, 9th Main, 4th Block, Jayanagar, Bengaluru – 560011.
Ph: 9483729292.

JOB OPPORTUNITIES

Teachers/ Professors

REQUIRED MATHS Teacher for High school contact Kenmore school Basavanagudi whatsapp 9901501185

PERSONAL

Change of Name

I, DIVYA Shet w/o Gaurav Manjunath Shet ,residing at F1001 Brigade Metropolis, Garudacharapalya,Mahadevapura, Bangalore 560048, have changed my name to Divya Ramachandra Shetvide affidavit dt. 02.07.2025 sworn before notary Anandkumar J at Bangalore

I, AYESHA BANU SHAIK, R/a Vandana Alpyne Apartment A-107, ITI Layout, Mangammanapalya Main Road, Sector 7 HSR Layout, Bangalore, have changed my name to AYESHA BANU, vide affidavit dated 17.07.2025 before Notary K.H. Venkatappa, Chickaballapur.

BUSINESS

Business to Business

Investment

LOOKING FOR USA EB5 VISA Investment Projects. Full Services Provided. Please Call +91 9632369915

Business

FOR BEST BRANDING/ SOCIAL MEDIA MARKETING/ BUS BACK, AUTO BACK, HOARDINGS, STANDEES, CYCLE, VAN BRANDING, NO PARKING BOARDS FOR ALL BUSINESS, CORPORATES, EDUCATIONAL INSTITUTIONS. CONTACT VENUSCAST TECHNOLOGIES PVT LTD. 8618576685/ 9482303339/ 9632642940

Finance

LOANS FOR HOUSING/ AUTOMOBILE/ PERSONAL/ BUSINESS LOANS AND INSURANCE GENERAL, HEALTH, AUTOMOBILE. CONTACT VICTORY INDIA: 8618576685/ 9482303339 victoryindia63@gmail.com, www.victoryindiaco.in

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ATRIA UNIVERSITY

ಭವಿಷ್ಯ ನಿರ್ಮಾಣವಾಗೋದು ಇಲ್ಲಿ ಪ್ರಾರಂಭವಾಗುತ್ತದೆ.

ಕೇವಲ ಡಿಗ್ರಿ ಸಾಕಾಗಲ್ಲ!

ಉದ್ಯೋಗ ಬೇಕಾದ್ರೆ ಪ್ರಾಯೋಗಿಕ ಜ್ಞಾನ ಬೇಕು

- ಪ್ರೊಜೆಕ್ಟ್ ಗಳ ಮೂಲಕ ಕಲಿಕೆ
- ವಿದೇಶಿ ಕಾಲೇಜುಗಳಲ್ಲಿ ಕಲಿಯುವ ಅವಕಾಶ
- 100% ಸ್ಕಾಲರ್‌ಶಿಪ್ಸ್ ಅವಕಾಶ
- 12 ತಿಂಗಳ ಇಂಟರ್ನ್‌ಶಿಪ್
- 40+ ಪ್ರಾಜೆಕ್ಟ್‌ಗಳು

ಭವಿಷ್ಯ ಸಿದ್ಧವಿದೆ. ನೀವು ಸಿದ್ಧವೇ?
ಏಟ್ರಿಯಾ ಯುನಿವರ್ಸಿಟಿ ಸೇರಿ

4-ವರ್ಷದ
B.S. ಇಂಜಿನಿಯರಿಂಗ್ ಪದವಿ
- ಕಂಪ್ಯೂಟರ್ ಸೈನ್ಸ್ (ಡಿಜಿಟಲ್ ಟ್ರಾನ್ಸ್‌ಫಾರ್ಮೇಶನ್)
- ಎನರ್ಜಿ ಸೈನ್ಸಸ್
- ಈ-ಮೊಬಿಲಿಟಿ

B.S. ಲೈಫ್ ಸೈನ್ಸಸ್



+91-9900090992
ugapplications@atriauniversity.edu.in

ಸ್ಕ್ಯಾನ್ ಮಾಡಿ

OKINAWA SHORIN-RYU SHORINKAN KARATE-DO
OSK Federation of India


ಕರಾಟೆ
ಕಲಿಯುವ ಆಸೆ ಇದೆಯೆ?

Admissions open
2025-26

ಬನ್ನೇರುಘಟ್ಟ ರಸ್ತೆ

Build Confidence, Strength & Discipline
through the timeless values of martial arts.

Our training:
- Traditional Karate-do Training
- Traditional Okinawan Kobudo Training (Okinawan Weapons)
- Short-term Self-Defense Courses for youth and adults



Okinawa Shorin-ryu Shorinkan Karate-do Federation of India (OSKFI)

Affiliated to the World Headquarters of Shorin-ryu Shorinkan Karate-do Association

Founded on July 2nd, 1992, with just 14 students at the Bannerghatta National Park Forest Department, the Okinawa Shorin-ryu Shorinkan Karate-do Federation of India (OSKFI) has grown into one of the most respected institutions for traditional Okinawan martial arts in the country. Today, OSKFI proudly trains over 45,000 students across 200 branches in Bangalore and affiliated centers across the state.

Under the leadership of **Shihan Suresh Kenichira,** a pioneer in Indian martial arts, OSKFI remains committed to the authentic transmission of Karate-do and Kobudo the Okinawan weapon training system. With over 36 years of teaching experience, Shihan Kenichira holds the rank of 7th Dan Black Belt in Karate-do, awarded by Hanshi Minoru Nakazato, world chairman of Shorin-ryu Shorinkan, and 5th Dan in Kobudo. He is among the select few to have received the prestigious title of 'Shihan' (Master Instructor) from Hanshi Shugoro Nakazato.

ಶಿಹಾನ್ ಸುರೇಶ್ ಕೇಣಿಚಿರ
ಅಧ್ಯಕ್ಷರು, OSK Federation of India
7th Degree - **Karatedo**
5th Degree - **Kobudo**

934 123 6192

#55, 4ನೇ ಅಡ್ಡರಸ್ತೆ, ಪಾಂಡುರಂಗ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 76
shorinkanindia@gmail.com
www.oskfi.com

Comfort HEIGHTS

★ ಪ್ರೀಮಿಯಂ ★
ಡ್ಯೂಪ್ಲೆಕ್ಸ್ ಫ್ಲಾಟ್‌ಗಳು
ಮಾರಾಟಕ್ಕೆ ಲಭ್ಯ
ಕೆಲವೇ ಫ್ಲಾಟ್‌ಗಳು ಉಳಿದಿವೆ

2 BHK-XL SIZE!
1980 sqft + 800 sqft
Private Terrace

3 BHK-XXL SIZE !
2610 sqft + 900 sqft
Private Terrace



EX/PRM/KA/RERA/1251/310/PR/200908/001730

AMENITIES
- Health Club
- Multipurpose hall
- Round the clock security
- Rainwater harvesting
- Children's play area with equipment
- Basket ball court
- Jogging & walking track
- Beautifull and scaped areas
- Well equipped fitness center
- Swimming pool with toddler's pool

PROXIMITY
- Close to Metro Station
- ISKCON Theme Park
- Forum Mall
- Sri Kumarans School
- Satya Sai Hospital
- Art of Living
- NICE Road
- NPS school / Vidyashilpa Academy
- Manipal Hospital

Promoted & Developed by:
Comfort Builders & Developers
More than just comfort

Site : Doddakalasandra, Kanakapura Main Road, Near ISKCON Theme Park, Bengaluru - 560 062.
Ofiice: #2, North Park Road, Kumara Park East, Bengaluru - 560 001.
www.comfortbuilders.in

ICICI Bank · AXIS BANK · HDFC BANK · State Bank of India · Bank of Baroda · LIC HFL

Call for site visit : **99000 73744, 99005 78737**